# ಅಪರಂಜಿ

ತಿಳಿನಗೆಯ ಕಾರಂಜಿ

ಜುಲೈ 2021




"ಮುಠ್ಠಾಳರಾಗಿದ್ರೂ ಪರವಾಗಿಲ್ಲ,
ಮಾಸ್ಕ್ ಮಾತ್ರ ಮರೀಬೇಡಿ."

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 38**
**ಸಂಚಿಕೆ - 10**
**ಜುಲೈ – 2021**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 3 |
| ನಮ್ಮನಮ್ಮಲ್ಲಿ | ಶಿವಕುಮಾರ್ | 4 |
| ಸೋಂಬ್ರೇರೋ ಸೌದಾಮಿನಿ ಪ್ರಸಂಗ | ವತ್ಸನ | 5 |
| ದಾನಶೂರನ ಸಮಸ್ಯೆಗಳು | ಚಿತ್ರಾ ರಾಮಚಂದ್ರನ್ | 9 |
| ಹೆಸರಿನಲ್ಲೇನಿದೆ? | ಡಾ.ಮುಕುಂದ ರಾ.ಗಜೇಂದ್ರಗಡ | 13 |
| ಅದೇ ರಾಗ... ಅದೇ ಹಾಡು | ನಳಿನಿ ಟಿ. ಭೀಮಪ್ಪ | 18 |
| ಕೊರೊನಾದಲ್ಲಿ ಕೌರ ಪುರಾಣ | ವಿವೇಕಾನಂದ ಕಾಮತ್ | 20 |
| ಪಾದುಕಾ ಪ್ರಕರಣ | ಸಾಯಿಲಕ್ಷ್ಮಿ | 22 |
| ಗುಂಡ್ಯಾನ ಕರೋನಾ ಡಯಟ್ | ವಿಲಾಸ ನಾ. ಹುದ್ದಾರ | 25 |
| ಬೇಂದ್ರೆ ಒಂದು ಅದ್ಭುತ | ಯೋಗೀಶ್ ತೀರ್ಥಪುರ | 28 |
| ಆಕ್....ಛೀ | ಸಿ.ಆರ್. ಸತ್ಯ | 29 |
| ಆಹಾ.. ಸ್ಥಿತಪ್ರಜ್ಞ | ವಸುಮತಿ ಉಡುಪ | 31 |
| ಉಳಿತಾಯದ ಗುಣಗಾನ | ಜಿ.ವಿ. ನಿರ್ಮಲ | 34 |
| ತುಂತುರು | ದಂಡಳ | 39 |
| ಕಣವನೆ ಕಂಡ ದೈವಂ | ಗಣೇಶ ಹೆಗಡೆ | 40 |

ಮುಖಪುಟ ವ್ಯಂಗ್ಯಚಿತ್ರ:
**ಸುನಿಲ್ ಅಗರ್‌ವಾಲ್**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

**●ಪ್ರಕಾಶ್**

ಅಮೆಜಾನ್‌ನಿಂದ ಬೆಝೋಸ್ ನಿವೃತ್ತಿ – ದಿನ ಪತ್ರಿಕೆ

**ಪಾಪ, ಜೀವನೋಪಾಯಕ್ಕೆ ಮುಂದೆ ಏನು ಮಾಡುತ್ತಾರೋ !?!**

* * *

ಕೋವಿಡ್ ರೋಗಾಣು ಮೂಲ; ಪಾರದರ್ಶಿಕ ತನಿಖೆ – ಪತ್ರಿಕೆ

**ಅಯ್ಯೋ, ಅದು ಸೂಕ್ಷ್ಮ ದರ್ಶಕದಲ್ಲೇ ಕಾಣುಲ್ಲ ಸ್ವಾಮಿ !?**

* * *

ಸಿ.ಜೆ ಅವರಿಗೆ 2000 ಮಹಿಳಾ ಲಾಯರು ಗಳಿಂದ ಪತ್ರ – ದಿನ ಪತ್ರಿಕೆ

**ಸಂಕಟ ಬಂದರೆ ವೆಂಕಟ -------------!?!**

* * *

ಆರೋಗ್ಯ ಸೇವೆಗೆ ಟಾನಿಕ್ !!

**ಆಹಾ , ಶೀರ್ಷಿಕೆ ಎಂದರೆ ಹೀಗೆಯೇ ಇರಬೇಕು !!**

* * *

ಕರೋನಾಗೆ ಹೆದರಿ ವಿಮಾನದಲ್ಲಿ ಆಗಸದಲ್ಲಿ ಮದುವೆ !!! – ಮಧುರೈ ಸುದ್ದಿ

**ತಾಳಿ ಕಟ್ಟೋಕ್ಕೆ ಭಾರಿ ಶುಲ್ಕ ಪಾವತಿ !??**

* * *

**ಹೋರಾಟಗಳ ದೊರೆ ಎಂದು ಪ್ರಖ್ಯಾತರಾಗಿದ್ದ ದೊರೆಸ್ವಾಮಿ ಅವರ ಆತ್ಮಕ್ಕೆ ಅಪರಂಜಿಯ ಕಂಬನಿಯೊಡನೆ ವಿದಾಯ !**

* * *

ಸವಾರರಿಗೆ ಹೂ ಹಾರ ಹಾಕಿ ಜಾಗ್ರತಿ – ಲೊಕ್ಡೌನ್ ಸುದ್ದಿ

**ಹಾರ ಮಾರುವರಿಗೆ ಸುಗ್ಗಿ !?**

# “ನಮ್ಮ ನಿಮ್ಮಲ್ಲಿ”

♦ಶಿವಕುಮಾರ್

ಕರೋನಾ ಹಾವಳಿಯಿಂದಾಗಿ ಮೇ ಮತ್ತು ಜೂನ್ ತಿಂಗಳುಗಳ ಅಪರಂಜಿ ಸಂಚಿಕೆಗಳನ್ನು ಮುದ್ರಿಸಿ ನಿಮಗೆ ತಲುಪಿಸಲು ಆಗದಿದ್ದುದಕ್ಕಾಗಿ ವಿಷಾದಿಸುತ್ತೇವೆ. ಅಕ್ಟೋಬರ್ 1983 ರಲ್ಲಿ ಪ್ರಾರಂಭವಾದಾಗಿನಿಂದ ಏಪ್ರಿಲ್ 2020ರ ವರೆಗೂ ಅಪರಂಜಿಯ ಎಲ್ಲ ಸಂಚಿಕೆಗಳೂ ಒಂದು ತಿಂಗಳೂ ತಪ್ಪದೆ ಸಕಾಲಕ್ಕೆ ಓದುಗರಿಗೆ ತಲುಪುತ್ತಿದ್ದವು. ಮೂವತ್ತಾರು ವರ್ಷಗಳ ಈ ಕಾರ್ಯತತ್ಪರತೆಗೆ ಕಳೆದ ವರ್ಷ ಮೇ ತಿಂಗಳಲ್ಲಿ ಕರೋನಾ ದೆಸೆಯಿಂದ ವಿಘ್ನ ಸಂಭವಿಸಿತು. ಆ ವರ್ಷದ ಮೇ ಮತ್ತು ಜೂನ್ ಸಂಚಿಕೆಗಳನ್ನು ಆಯಾ ತಿಂಗಳುಗಳಲ್ಲಿ ಕಳಿಸಲಾಗದೇ ಜೂಲೈ ಸಂಚಿಕೆಯೊಂದಿಗೆ ಕಳಿಸಿದ್ದೆವು. ಈ ಬಾರಿಯೂ ಮೇ, ಜೂನ್ ಮತ್ತು ಜೂಲೈ ಸಂಚಿಕೆಗಳನ್ನು ಒಟ್ಟಾಗಿ ಸೇರಿಸಿ ಜೂಲೈ ಮೊದಲವಾರದಲ್ಲಿ ನಿಮಗೆ ತಲುಪಿಸುವ ವ್ಯವಸ್ಥೆ ಮಾಡಿದ್ದೇವೆ. ಅನಿವಾರ್ಯ ಕಾರಣಗಳಿಂದುಂಟಾದ ಈ ವ್ಯತ್ಯಯವನ್ನು ನಮ್ಮ ಸಹೃದಯ ಓದುಗರು ಮನಗಂಡು ನಮ್ಮನ್ನು ಮನ್ನಿಸುವರೆಂಬ ನಂಬಿಕೆ ನಮಗಿದೆ.

ಕಳೆದ ಹಲವು ದಿನಗಳಲ್ಲಿ ನಾವು ಇಬ್ಬರು ಸಾಹಿತಿಶ್ರೇಷ್ಠರನ್ನು ಕಳೆದುಕೊಂಡೆವು. **ಶತಾಯುಷಿ ಪೂಜ್ಯ ಜಿ.ವೆಂಕಟಸುಬ್ಬಯ್ಯ** ನವರ ಅಗಲುವಿಕೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ನಮ್ಮ ಬಳಗದ ಶ್ರೀನಿವಾಸ ವೈದ್ಯರು ಇಲ್ಲಿ ಅಡಕವಾಗಿರುವ ಮೇ ತಿಂಗಳ ಸಂಚಿಕೆಯಲ್ಲಿ ಹಂಚಿಕೊಂಡಿದ್ದಾರೆ. ಇತ್ತೀಚೆಗೆ ನಮ್ಮನ್ನು ಅಗಲಿದ **ಮಾನ್ಯ ಸಿದ್ದಲಿಂಗಯ್ಯ**ನವರು ಒಬ್ಬ ರಾಜಕಾರಣಿ ಹಾಗೂ ಖ್ಯಾತ ಸಾಹಿತಿ. ಬಂಡಾಯ ಸಾಹಿತ್ಯದ ಪ್ರಮುಖರಲ್ಲೊಬ್ಬರಾಗಿ ದಲಿತರ ದನಿಯಾಗಿದ್ದವರು. ಅವರ ಚೇತೋಹಾರಿಯಾಗಿದ್ದ ಹಾಸ್ಯ ಪ್ರಜ್ಞೆ ಮತ್ತು ವ್ಯಂಗ್ಯ ಇಂದಿಗೂ ನಮ್ಮೆಲ್ಲರ ಮನಸ್ಸಿನಲ್ಲಿ ಹಸಿರಾಗಿದೆ. ಯಾವುದೇ ಹಾವಭಾವವಿಲ್ಲದೆ ಮೆಲು ದನಿಯಲ್ಲಿ ಮಾತಿಗೆ ನಿಂತರೆ ಅವರಿಂದ ವ್ಯಂಗ್ಯ, ವಿಡಂಬನೆಗಳು ಸಲೀಸಾಗಿ ಮೂಡಿಬರುತ್ತಿದ್ದವು. ಮೇಲು ನೋಟಕ್ಕೆ ವಿನೋದದಂತೆ ಕಾಣುತ್ತಿದ್ದ ಅವರ ಮಾತುಗಳು ಅವರ ವೈಚಾರಿಕ ಪ್ರಜ್ಞೆಯಿಂದ ಹೊರಹೊಮ್ಮಿ ಅರ್ಥಗರ್ಭಿತವಾಗಿರುತ್ತಿದ್ದವು. ನಗುವಿನ ಹಿಂದೆ ವಿಷಾದವಿರುತ್ತಿತ್ತು. ಅವರ ಅಗಲಿಕೆಯಿಂದ ನಮ್ಮ ಸಮಾಜ ಒಂದಿಷ್ಟು ನಗುವನ್ನು ಕಳೆದುಕೊಂಡಿದೆ. ಅಗಲಿದ ಸನ್ಮಾನ್ಯರಿಬ್ಬರಿಗೂ ಅಪರಂಜಿಯ ಕಂಬನಿಯ ವಿದಾಯ.

*ಶರಲೇಖನ ಪುನರಾಗಮನ*

# ಸೊಂಬ್ರೇರೋ ಸೌದಾಮಿನಿ ಪ್ರಸಂಗ

**● ವತ್ಸನ**

ಎಂದಿನಂತೆ ನಮ್ಮ ಲಾಕ್‌ಡೌನ್ ದಿನಚರಿಯನ್ನೆಲ್ಲಾ ಮುಗಿಸಿ ಅಂದು ಬೆಳಗ್ಗೆ ಶರಲೇಖ ಮತ್ತು ನಾನು ಡ್ರಾಯಿಂಗ್ ರೂಮಿನ ಸೋಫಾದ ಮೇಲೆ ಕುಳಿತಿದ್ದೆವು. "ದೇಶದಲ್ಲಿ ಕೇಸುಗಳ ಸಂಖ್ಯೆ ಇಳಿಮುಖ ಅಂತ ಪೇಪರಿನಲ್ಲಿದೆ. ಈ ಕರೋನಾದಿಂದ ಸಂಪೂರ್ಣ ಮುಕ್ತಿ ಯಾವಾಗ ಸಿಗುತ್ತೋ" ಅಂತ ಉದ್ಗರಿಸುತ್ತಾ ನಾನು ಪೇಪರ್ ಮಡಿಚಿ ಪಕ್ಕಕ್ಕಿಟ್ಟೆ. ಶರಲೇಖ ಏನೋ ಯೋಚಿಸುತ್ತ ವಿಮನಸ್ಕನಾಗಿದ್ದಂತೆ ತೋರಿತು. ನನ್ನ ಮಾತು ಕೇಳಿ ಅವ ತನ್ನ ಚಿಂತನಾಲಹರಿಯಿಂದ ಹೊರಬಂದು, "ಮುಕ್ತಿ ಸಿಗಬೇಕಾದರೆ ಮೊದಲಿಗೆ ಅದು ಆಕ್ರಮಿಸಿರಬೇಕು. ಸಂಯಮದ ಜೀವನ ನಡೆಸುತ್ತಿರುವವರಿಗೆ ಅದರಿಂದೇನೂ ಹಾನಿಯಾಗಿದ್ದು ಕಾಣೆ. ಹಾನಿಗೊಂಡವರೆಲ್ಲಾ ಕೋವಿಡ್‌ಗೆ ಕೊಡಬೇಕಾದ ಗೌರವವನ್ನು ಕೊಡದೆ ಅದರ ಪ್ರೋಟೋಕಾಲನ್ನ ಸರಿಯಾಗಿ ಗೌರವಿಸದೇ ಇದ್ದೋರು ಅಥವಾ ಆಕಸ್ಮಿಕವಾಗಿ ಎಡವಿದವರು ಅಂತ ನನ್ನ ಗುಮಾನಿ. ಆದರೂ ಮನುಕುಲ ಸಾಕಷ್ಟು ಕಷ್ಟ ಕಾರ್ಪಣ್ಯಗಳನ್ನ ಅನುಭವಿಸ್ತಿರೋದು ಮಾತ್ರ ನಿಜ. ಇದೇಕೆ ಹೀಗೆ? ಅನ್ನೋ ಪ್ರಶ್ನೆಗೆ ಒಂದು ಮಹತ್ವದ ಉತ್ತರ ಇರಲೇ ಬೇಕು. ಒಟ್ಟಾರೆ ನಾವೆಲ್ಲಾ ಸೇರಿ ಪ್ರಕೃತಿಗೆ ಏನೋ ಅಪಚಾರ ಮಾಡಿರಲೇಕು ಅನ್ನಿಸುತ್ತೆ ನನಗೆ" ಅಂತ ಹೇಳಿದ.

ಅವನು ಮಾತನಾಡುತ್ತಿದ್ದಂತೆ, ಒಮ್ಮೆಲೇ ನಮ್ಮ ಮುಂದೆ ಇದ್ದ ರತ್ನಗಂಬಳಿಯ ಮೇಲೆ ಒಂದು ಕೆಂಪು ಬಣ್ಣದ ಉಂಗುರವೊಂದು ಕಾಣಿಸಿಕೊಂಡಿತು. ಸುಮಾರು ಒಂದು ಮೀಟರ್ ಅಳತೆಯ ಈ ಉಂಗುರ ನಾವು ನೋಡುತ್ತಿದ್ದ ಹಾಗೆಯೇ ಸುಮಾರು ಆರು ಅಡಿಯಷ್ಟು ಮೇಲಕ್ಕೆದ್ದು ನಿಂತಿತು. ಉಂಗುರದ ಕೆಳಗಿನ ಭಾಗದಲ್ಲಿ ತೆಳುವಾದ ಮಂಜಿನಂತಹ ಕಂಭವೊಂದು ಸೃಷ್ಟಿಯಾಗಿತ್ತು. ಈ ಮಂಜಿನ ಕಂಭದ ಮೂಲಕ ನಮ್ಮ ಟಿ. ವಿ. ಪರದೆ ಅಸ್ಪಷ್ಟವಾಗಿ ಕಾಣುತ್ತಿತ್ತು. ನನಗೆ ಸಹಜವಾಗಿಯೇ ಗಾಬರಿ. "ಶರಲೇಖ ಏನಿದು ? ಏನಾಗ್ತಾ ಇದೆ ?" ಅಂತ ಗಲಿಬಿಲಿಯಿಂದ ಕೇಳಿದೆ. ಶರಲೇಖ ಏನೂ ಮಾತನಾಡದೇ ಆ ಮಂಜಿನ ಕಂಭವನ್ನೇ ತದೇಕ ದೃಷ್ಟಿಯಿಂದ ನಿಟ್ಟಿಸುತ್ತಿದ್ದ. ಒಮ್ಮೆಲೇ ನರಸಿಂಹ ಕಂಭದಿಂದ ಪ್ರತ್ಯಕ್ಷವಾದಂತೆ ಈ ಮಂಜಿನ ಕಂಭದಿಂದ ಒಬ್ಬ ತರುಣಿ ಹೊರಕ್ಕೆ ಬಂದಳು. ನೀಲಿ ಜೀನ್ಸ್ ಹಳದಿ ಟಿ ಷರ್ಟ್ ಧರಿಸಿದ್ದ ಆಕೆ ಹೊರಕ್ಕೆ ಬಂದು ನಿಲ್ಲುಕ್ಕಿಲ್ಲ, ಈ ಕೆಂಪು ಉಂಗುರ ಸರ್ರನೆ ಕೆಳಕ್ಕಿಳಿದು ನೆಲದ ಮಟ್ಟಕ್ಕೆ ಬಂದು ಅನಂತರ ವ್ಯಾಸದಲ್ಲಿ ಕುಗ್ಗಿ ಒಂದು ಸಾಧಾರಣ ಕೈಯುಂಗುರದಷ್ಟಾಯಿತು. ಬಂದವಳು ಬಹಳ ಸಾವಧಾನದಿಂದ ಕೆಳಕ್ಕೆ ಬಗ್ಗಿ ರತ್ನಗಂಬಳಿಯ ಮೇಲೆ ಕೆಂಪಗೆ ಹೊಳೆಯುತ್ತ ಬಿದ್ದಿದ್ದ ಉಂಗುರವನ್ನು ಎತ್ತಿ ತೆಗೆದು ತನ್ನ ಎಡಗೈ ತರ್ಜನಿಗೆ ತೊಡಿಸಿಕೊಂಡಳು. ಆಮೇಲೆ ಅಲ್ಲೇ ಖಾಲಿ ಇದ್ದ ಸೋಫಾದ ಮೇಲೆ ಕುಳಿತು, "ಹೀಗೆ ಆಹ್ವಾನವಿಲ್ಲದೇ, ನಿಮ್ಮ ಮನೆಗೆ ನುಗ್ಗಿದ್ದಕ್ಕೆ ನನ್ನ ಮೊಟ್ಟಮೊದಲ ಕ್ಷಮೆ. ನಿಮ್ಮಲ್ಲಿ ಶರಲೇಖ ಅನ್ನೋರು ಯಾರು ?" ಅಂತ ಬಹು ಸೌಜನ್ಯದ ದನಿಯಲ್ಲಿ ಕೇಳಿದಳು.

ಬಂದು ಕುಳಿತ ವ್ಯಕ್ತಿ ತರುಣಿ ಎಂದೆನಲ್ಲವೇ. ತರುಣಿಯಂತೆ ಕಾಣುತ್ತಿದ್ದಳು ಎಂಬ ಮಾತು ಸತ್ಯಕ್ಕೆ ಹತ್ತಿರವಾದೀತು. ಯಾವುದೋ ಅಮಾನುಷ ಅಥವಾ ಅತಿಮಾನುಷ ಕಳೆ ಆಕೆಯಲ್ಲಿತ್ತು. ಶರಲೇಖ ಸ್ವಲ್ಪವೂ ವಿಚಲಿತನಾಗದೆ, " ನೀವು ಬಾಹ್ಯಾಕಾಶ ಯಾತ್ರಿ, ಮಾನವ ರೂಪ ಧರಿಸಿ, ವರ್ಮ್ ರಂಧ್ರದ ಮೂಲಕ ಇಲ್ಲಿಗೆ ಬಂದಿದ್ದೀರ. ನಾನು ಶರಲೇಖ. ನಿಮ್ಮ ಹೆಸರು, ಇಲ್ಲಿಗೆ ಬಂದಿರುವ ಕಾರಣ ತಿಳಿಸಿದರೆ ಉಪಕಾರವಾದೀತು." ಎಂದು ಚಿಕ್ಕದಾಗಿ ಚೊಕ್ಕವಾಗಿ ಹೇಳಿದ. ಆಕೆ ಒಂದು ಕ್ಷಣ ಅವಾಕ್ಕಾದಂತೆ ತೋರಿತು. ಅನಂತರ ಸಾವರಿಸಿಕೊಂಡು, 'ನೀವು ಸ್ವಲ್ಪವೂ ಗಾಬರಿಯಾಗದೆ, ಇಷ್ಟು ಬೇಗ ನನ್ನನ್ನ ಗುರುತಿಸಿದ್ದನ್ನು ನೋಡಿದರೆ ನಿಮ್ಮ ಪ್ರತಿಭೆಯ ಬಗ್ಗೆ ನಮ್ಮ ತಜ್ಞರು ಹೇಳಿದ್ದೆಲ್ಲಾ ಸರಿ ಅಂತ ತಿಳಿಯುತ್ತದೆ. ನಿಮ್ಮ ಪ್ರಶ್ನೆಗಳಿಗೆಲ್ಲಾ ವಿವರವಾಗಿಯೇ ಉತ್ತರಗಳನ್ನು ನೀಡುವೆ. ನನ್ನ ಹೆಸರು ಬಿಯೋಂಗೆ. ಹಾಗೆಂದರೆ ಮಿಂಚು ಎಂದರ್ಥ. ಮೊಟ್ಟಮೊದಲಿಗೆ, ನೀವು ಮಾತನಾಡುತ್ತಿದ್ದ ವಿಷಯದಲ್ಲಿ ಒಂದು ಮೂಲಭೂತ ತಪ್ಪನ್ನು ಸರಿಪಡಿಸಬೇಕಾಗುತ್ತದೆ. ನೀವು ಕರೋನಾ ಎಂದು ಕರೆಯುವ ವಸ್ತು, ವೈರಸ್ ಅಲ್ಲ, ಅದು ಚೈತನ್ಯದ ಒಂದು ಅಂಶ. ನೀವು ಭೂದೇವಿ ಎಂದು ಕರೆಯುವ ಈ ನಿಮ್ಮ ಮಾತೃಗ್ರಹಕ್ಕೆ ತಗುಲಿರುವ ಮನುಕುಲವೆಂಬ ಅರ್ಬುದ ರೋಗಕ್ಕೆ ಚಿಕಿತ್ಸೆಗಾಗಿ ನಾವು ಸಂಶೋಧಿಸಿ ಕಳಿಸಿರುವ ಲಸಿಕೆ. ಈ ಮೂಲಭೂತ ಸತ್ಯವನ್ನು ಅರ್ಥಮಾಡಿಕೊಂಡು, ಮನನ ಮಾಡಿ ಸಿದ್ಧರಾದರೆ, ನಾನು ನನ್ನ ಮಾತನ್ನು ಮುಂದುವರಿಸಬಹುದು' ಎಂದು ಹೇಳಿ, ನಮ್ಮನ್ನು ಕುತೂಹಲದಿಂದ ಗಮನಿಸುತ್ತ ಸೋಫಾದಲ್ಲಿ ಹಿಂದಕ್ಕೆ ಒರಗಿ ವಿರಮಿಸಿದಳು. ಮುಖದಲ್ಲಿ ಮೆಲುನಗೆ ಇತ್ತು.

ಶರಲೇಖ ಮಾರುತ್ತರ ನೀಡಲಿಲ್ಲ. ನಿಧಾನವಾಗಿ ಎದ್ದು ಒಳಗೆ ಹೋಗಿ, ಮೂರು ಲೋಟ ಕಾಫಿ ಮಾಡಿಕೊಂಡು ಬಂದು, ನನ್ನ ಕೈಗೆ ಒಂದು ಲೋಟ ಕೊಟ್ಟು, ಇನ್ನೊಂದನ್ನು  ಆಕೆ ಮುಂದಿದ್ದ ಮೇಜಿನ  ಮೇಲಿಟ್ಟು, ತನ್ನ ಸ್ವಸ್ಥಾನಕ್ಕೆ ಬಂದು ಕುಳಿತ. ನಂತರ ಆಕೆಯ ಕಡೆ ತಿರುಗಿ, "ನಿಮ್ಮ ಈ ವರ್ಚುವಲ್ ರೂಪಕ್ಕೆ ಪಾನೀಯದ ಅಗತ್ಯವೇ ಇರದೇನೋ. ಆದರೂ ನಾವು ಸೇವಿಸುವುದನ್ನು ಹಂಚಿಕೊಳ್ಳುವುದು ಇಲ್ಲಿನ ಶಿಷ್ಟಾಚಾರ. ಈಗ ಹೇಳಿ, ಎಲ್ಲಿಂದ ಬಂದವರು ನೀವು? ನಿಮ್ಮ ಗ್ರಹ ಎಲ್ಲಿದೆ ? ಯಾವುದೋ ಒಂದು ಮೂಲೆಯಲ್ಲಿರುವ ಈ ನಮ್ಮ ಕ್ಷುದ್ರ ಗ್ರಹದ ಮೇಲೆ ನಿಮ್ಮ ಅಸಕ್ತಿ ಮೂಡಿದ್ದಾದರೂ ಹೇಗೆ? ನಾವೇ ರೋಗಾಣುಗಳೆಂದು ನೀವು ನಿರ್ಧರಿಸಿದ ಮೇಲೆ ಇಲ್ಲಿಗೆ ಬಂದು ನಮ್ಮನ್ನು ಭೇಟಿಮಾಡುವ  ಅಗತ್ಯವಾದರೂ ಏನಿತ್ತು?" ಅಂತ ಸ್ಪಷ್ಟವಾಗಿ ಕೇಳಿದ.

"ಎಲ್ಲವನ್ನೂ ತಿಳಿಸುವೆ. ನಿಮ್ಮ ಕ್ಷೀರಪಥ ನೀಹಾರಿಕೆಗೆ ಮೂವತ್ತೊಂದು ಮಿಲಿಯನ್ ಬೆಳಕಿನ ವರ್ಷಗಳಷ್ಟು ದೂರದಲ್ಲಿ ನಮ್ಮ ನೀಹಾರಿಕೆ ಇದೆ. ನಮ್ಮ ಭಾಷೆಯಲ್ಲಿ ಅದನ್ನು ಹಂಸ ಸಂಕುಲ ಎಂದು ಕರೆಯುತ್ತೇವೆ. ನೀವಿರುವ ಜಾಗದಿಂದ ಅದು ಟೊಪ್ಪಿಗೆಯಂತೆ ಕಾಣುವುರಿಂದ ನಮ್ಮ ತವರು ನೀಹಾರಿಕೆಯನ್ನು ನೀವು ಸೊಂಬ್ರೇರೋ ನೀಹಾರಿಕೆ ಎಂದು ಕರೆಯುತ್ತೀರೆಂದು ನಮ್ಮ ತಜ್ಞರು ಹೇಳುತ್ತಾರೆ. ಈ ನೀಹಾರಿಕೆಯ ಅಂಚಿನಲ್ಲಿರುವ ಒಂದು ಸೂರ್ಯನ ಸುತ್ತ ಪರಿಭ್ರಮಣಿಸುತ್ತಿರುವ ನಯನ ಮನೋಹರ ಹಸಿರು ಗ್ರಹ ನಮ್ಮ ಮಾತೃಭೂಮಿ. ನೀವು ನಿಮ್ಮ ಭೂಗ್ರಹದ ಬಗ್ಗೆ ಹೇಳುವಾಗ, "ಮೂಲೆಯಲ್ಲಿರುವ ಕ್ಷುದ್ರ ಗ್ರಹ" ಎಂದು ಹೇಳಿದಿರಿ. ಅದು

ಅಜ್ಞಾನದಿಂದ ಹೇಳಿರುವ ಮಾತಾದ್ದರಿಂದ ಆ ಮಾತಿಗೆ ಬೆಲೆ ಕೊಡುವುದು ಅಗತ್ಯವಿಲ್ಲ."

" ನಮ್ಮ ನಾಗರೀಕತೆ ನಿಮ್ಮದಕ್ಕಿಂತ ಸಾವಿರಾರು ಪಟ್ಟು ಮುಂದುವರಿದಿರುವುದನ್ನು ನನ್ನ ಈ ಪ್ರಯಾಣವೇ ಪ್ರಮಾಣೀಕರಿಸುತ್ತದೆ. ತುಂಬ ಹಿಂದೆಯೇ ನಾವು ಈ ವಿಶ್ವದಲ್ಲಿನ ಇತರ ಗ್ರಹಗಳಲ್ಲಿ ಜೀವಿಗಳಿದ್ದಾರೆಯೇ ಎಂಬ ಹುಡುಕಾಟವನ್ನು ಬಹು ದಕ್ಷತೆಯಿಂದ ಮಾಡಿದ್ದೆವು. ಆ ಹುಡುಕಾಟದ ಫಲಿತಾಂಶ ಏನು ಗೊತ್ತೇ? ನಮ್ಮಿಬ್ಬರ ಕ್ಷೀರಪಥಗಳ ನಡುವಣ ಅಗಾಧ ಬಾಹ್ಯಾಕಾಶದಲ್ಲಿ ಇರುವ ಒಂದು ಬಿಲಿಯನ್ ಜೀವಿಗಳಿರಬಹುದಾದ ಗ್ರಹಗಳಲ್ಲಿ ಕೇವಲ ಏಳು ಗ್ರಹಗಳಲ್ಲಿ ಮಾತ್ರ ಬೌದ್ಧಿಕವಾಗಿ ಪ್ರಗತಿಯನ್ನು ಸಾಧಿಸಿರುವ ಜೀವಿಗಳು ವಿಕಸಿಸಿದ್ದಾರೆ. ಮಿಕ್ಕೆಲ್ಲ ಗ್ರಹಗಳೂ  ನಿಮ್ಮ ಸೌರವ್ಯೂಹದ ಇತರ ಗ್ರಹಗಳಂತೆ ಜೀವರಹಿತ. ದೀರ್ಘಕಾಲ ನಾವು ನಡೆಸಿದ ಪ್ರಯೋಗಗಳಿಂದ ಈ ಸತ್ಯ ನಮಗೆ ತಿಳಿಯಿತು. ನಿಮ್ಮ ಇಡೀ ನೀಹಾರಿಕೆಯಲ್ಲಿ ನಿಮ್ಮ ಭೂಲೋಕವೊಂದೇ ಜೀವಿಗಳನ್ನುಳ್ಳ ಗ್ರಹ. ಅಂತಹ ಅಮೂಲ್ಯ ತಾಣವನ್ನ ನೀವು ನಿಮ್ಮ ಅಜ್ಞಾನದಿಂದ " ಮೂಲೆಯಲ್ಲಿರುವ ಕ್ಷುದ್ರ ಗ್ರಹ " ಎಂದು ಉಲ್ಲೇಖಿಸಿದಾಗ ಬಹು ತಾಳ್ಮೆಯಿಂದ ನಾನು ನನ್ನ ಭಾವನೆಗಳನ್ನ ನಿಯಂತ್ರಿಸಬೇಕಾಯಿತು. ಅದಿರಲಿ. ಇಲ್ಲಿನವರೆಗೆ ನಾನು ಹೇಳಿದ್ದೆಲ್ಲಾ ಅರ್ಥವಾಯಿತೇ?" ಎಂದು ಆಕೆ ಹೇಳಿ ವಿರಮಿಸಿದಳು.

" ಈ ಅಗಾಧ ವಿಶ್ವದಲ್ಲಿ ಕೇವಲ ಏಳು ಗ್ರಹಗಳು ಮಾತ್ರ ಜೀವಸಂಕುಲಕ್ಕೆ ಆಸರೆ ನೀಡುತ್ತಿವೆಯೇ ?  ನಿಮ್ಮ ಮತ್ತು ನಮ್ಮ ಗ್ರಹಗಳನ್ನು ಬಿಟ್ಟು ಮಿಕ್ಕ ಐದರಲ್ಲಿ ಇರುವ ನಾಗರೀಕತೆಗಳೊಂದಿಗೆ ಸಂಪರ್ಕ ಸಾಧಿಸಿರುವಿರಾ ? ಸಾಧಿಸಿದ್ದರೆ ಅವರುಗಳ ಪ್ರಗತಿ ನಮ್ಮ ಇಲ್ಲಿನ ಪ್ರಗತಿಯನ್ನು ಮೀರಿಸಿದೆಯೇ?' ಅಂತ ನಾನು ಕೇಳಿದೆ.

ಆಕೆ ನಕ್ಕಳು. ಅಲ್ಲ ಮಂದಹಾಸವನ್ನು ಬೆಳಗಿದಳು. "ಖಂಡಿತ ಅವರುಗಳೊಂದಿಗೆಲ್ಲಾ ನಮ್ಮ ಸಂಪರ್ಕವಿದೆ. ನಿಮ್ಮ ಗ್ರಹವೊಂದನ್ನು ಬಿಟ್ಟು ಮಿಕ್ಕ ನಾಗರೀಕತೆಗಳೆಲ್ಲಾ ಅದ್ಭುತ ಪ್ರಗತಿಯನ್ನು ಸಾಧಿಸಿವೆ. ಕೇವಲ ವಿಜ್ಞಾನ ವಿಷಯಗಳಲ್ಲಿ ಮಾತ್ರವಲ್ಲ. ವಿವೇಕದ ಚಿಂತನೆಯಲ್ಲೂ ಅವರದ್ದೆಲ್ಲಾ ಅಪೂರ್ವ ಪ್ರತಿಭೆ. ನಿಮ್ಮ ಈ ಭೂಗ್ರಹದ ಚಿಕಿತ್ಸೆಯ ನೀಲಿನಕ್ಷೆಯನ್ನೂ ಸಹ ನಾವೆಲ್ಲಾ  ಒಟ್ಟುಗೂಡಿ ವಿಚಾರಮಾಡಿದ ನಂತರವೇ ನಿರ್ಧರಿಸಿದ್ದು. ನಿಮ್ಮಲ್ಲಿ ಪರಿಸರ ರಕ್ಷಣಾ ದಳಗಳಿರುವಂತೆ ನಾವು ಆರು ನಾಗರೀಕತೆಗಳೂ ಸೇರಿ ಒಂದು ಪರಿಸರ ಸಂರಕ್ಷಣಾ ಸಂಹಿತೆಯನ್ನು ರೂಪಿಸಿದ್ದೇವೆ. "ನನಗೆ ನಿಮ್ಮನ್ನು ಭೇಟಿ ಮಾಡುವ ಅಗತ್ಯ ಏನಿತ್ತು ?" ಅಂತ ಕೇಳಿದರಲ್ಲಾ, ಈ ವಿಷಯಗಳನ್ನೆಲ್ಲಾ ನಿಮಗೆ ತಿಳಿಸಿ, ಬ್ರಹ್ಮಾಂಡದ ಜೀವರಾಶಿಯ ರಕ್ಷಣೆಯ ನಮ್ಮ ಪ್ರಯತ್ನಕ್ಕೆ ನಿಮ್ಮ ಸಹಕಾರವನ್ನು ಕೋರುವುದು ನಮ್ಮ ಈ ಆಗಮನದ ಮುಖ್ಯ ಉದ್ದೇಶ."

ಶರಲೇಖ, "ನಮ್ಮ ಆಗಮನ ಅಂತ ಹೇಳಿದಿರಿ, ನಿಮ್ಮೊಂದಿಗೆ ಇನ್ನೂ ಹಲವರು ಬಂದಿರುವಿರೇನು?" ಎಂದು ಪ್ರಶ್ನಿಸಿದ.

"ಹೌದು, ವಿವೇಕ ವಿಚಕ್ಷಣೆಯಲ್ಲಿ ಒಂದು ಪ್ರೌಢಮಟ್ಟವನ್ನು ಗಳಿಸಿರುವ ನಿಮ್ಮ ಗ್ರಹದ ಹಲವು ಜೀವಿಗಳನ್ನು ಸಂಪರ್ಕಿಸಿ ಭೂಗ್ರಹದ ಚಿಕಿತ್ಸೆ ಮುಗಿದ ನಂತರದ ಕಾಲಾವಧಿಯಲ್ಲಿ ಮನುಕುಲವೂ ಸಹಾ ಸಾತ್ವಿಕ ಮೌಲ್ಯಗಳನ್ನು ಗೌರವಿಸುವಂತೆ ಮನವೊಲಿಸುವುದು ನಮ್ಮ ಉದ್ದೇಶ. ಇಡೀ ವಿಶ್ವದ ಆರು ನಾಗರೀಕತೆಗಳ ಪರವಾಗಿ ಈ ಶಾಂತಿ ಸಂದೇಶವನ್ನು ನಿಮ್ಮ ಏಳನೆಯ ನಾಗರೀಕತೆಗೆ ತಲುಪಿಸುವ ಪವಿತ್ರ ಕಾರ್ಯ ನಮ್ಮದು."

ಇಷ್ಟು ಹೇಳಿ ಆಕೆ ಸುಮ್ಮನಾದಳು.

"ಅಲ್ಲಾಮ್ಮಾ, ಬನಶಂಕರಿಲಿ ಒಂದು ಮೂಲೇಲಿ ಕೂತಿರೋ ಪಾಮರರು ನಾವು. ಮೇಲಾಗಿ ಕನ್ನಡಿಗರು ಬೇರೆ. ಇಡೀ ಮನುಕುಲಕ್ಕೆ ರವಾನಿಸಬೇಕಾದ ಮಹತ್ವದ ಸಂದೇಶವನ್ನು ಇಲ್ಲಿಗೆ ಬಂದು ನಮ್ಮ ಹತ್ತಿರ ಹೇಳಿ ಹೋದರೆ ಏನು ಪ್ರಯೋಜನ ? ಹೊಳೇಲಿ ಹುಣಸೇ ಹಣ್ಣು ತೊಳೆದಂತಾಗುವುದಿಲ್ಲವೇ?" ಅನ್ನೋ ಪ್ರಶ್ನೆ ಕೇಳಬೇಕಾಗಿತ್ತು ನಾನು. ಕೇಳಲಿಲ್ಲ. ಲಕ್ಷಾಂತರ ವರ್ಷಗಳಷ್ಟು ಮುಂದುವರಿದವಳು ಅವಳು. ಕೋಪಿಸಿಕೊಂಡು ಒಂದೇ ನೋಟದಲ್ಲಿ ಭಸ್ಮ ಮಾಡಿಬಿಟ್ಟರೆ....ಎಂದೆಲ್ಲಾ ಚಿಂತೆಗಳು ಮನಸ್ಸಿನಲ್ಲಿ ಹಾದುಹೋದವು. ಹಾಗಾಗಿ ಪ್ರಶ್ನೆ ಕೇಳದೆ ಸುಮ್ಮನೆ ಕುಳಿತೆ. ಏನೂ ಪ್ರಯೋಜನವಾಗಲಿಲ್ಲ. ಅವಳು ಮನಸ್ಸಿನ ಚಿಂತನೆಗಳನ್ನ ಓದೋ ಜನ ಅಂತ ಕಾಣಿಸುತ್ತೆ.

"ನಿಮ್ಮ ಪ್ರಶ್ನೆ ಸರಿಯಾದದ್ದೆ. ಇದಕ್ಕೆ ಉತ್ತರವೂ ಇದೆ. ಮನುಕುಲ ಬದಲಾಗಲೇ ಬೇಕಾದ ತುರ್ತಿನ ಅಗತ್ಯವನ್ನು ತಿಳಿಸಲು ಆಯಕಟ್ಟಿನ ಹಲವರಲ್ಲಿ ಈ ಚಿಂತನೆಯ ಬೀಜವನ್ನು ಬಿತ್ತಿದರೆ ಅದು ಹೆಮ್ಮರವಾಗುತ್ತೆ ಅಂತ ನಮ್ಮ ತಜ್ಞರು ಹೇಳಿದ್ದಾರೆ. ಸಂಶೋಧನೆ ಮಾಡಿ ನಿಮ್ಮ ಗ್ರಹದ ಹಲವರನ್ನು ಈ ಕಾರ್ಯಕ್ಕಾಗಿ ಆಯ್ಕೆ ಮಾಡಿದ್ದೂ ಅವರೇ. ನಿಮಗೇನೂ ಯೋಚನೆ ಬೇಡ. ಭೂಲೋಕ ಬಹು ಬೇಗನೆ ಚೇತರಿಸಿಕೊಂಡು ಕಂಗೊಳಿಸುವಳು. ನನ್ನ ಕೆಲಸ ಮುಗಿಯಿತು. ವಿದಾಯ." ಅಂತ ಹೇಳಿ ಆಕೆ ತನ್ನ ಎಡಗೈ ತರ್ಜನಿಯಿಂದ ಸಾವಧಾನವಾಗಿ ಉಂಗುರವನ್ನು ಹೊರಕ್ಕೆ ತೆಗೆದು, ಮುಂದೆ ಹರಡಿದ್ದ ರತ್ನಗಂಬಳಿಯ ಮೇಲೆ ಹಾಕಿದಳು. ಅದು ಯಕ್ಷಿಣಿಯೋ ಅನ್ನುವಂತೆ ವ್ಯಾಸದಲ್ಲಿ ಹಿರಿದಾಗಿ ಬೆಳೆದು ಮೇಲಕ್ಕೆರಿ, ಮಂಜಿನ ಕಂಭವೊಂದನ್ನು ಸೃಷ್ಟಿಸಿತು. ಆಕೆ ಆ ವರ್ಮ್ ರಂಧ್ರವನ್ನು ಪ್ರವೇಶಿಸಿ ಅಂತರ್ಧಾನವಾದಳು.

ಶರಲೇಖ, "ಪರಿಸ್ಥಿತಿ ಹೀಗಿರಬಹುದು ಅಂತ ನನಗೆ ಮೊದಲಿನಿಂದಲೂ ಗುಮಾನಿ ಇತ್ತು. ಆದರೆ ಇಡೀ ಬ್ರಹ್ಮಾಂಡದಲ್ಲಿ ಕೇವಲ ಏಳು ಗ್ರಹಗಳಲ್ಲಿ ಜೀವಿಗಳಿರುವ ಸಂಗತಿ ನಿಜಕ್ಕೂ ಸೋಬರಿಂಗ್ ಥಾಟ್. ಡಿವಿಜಿ ಹೇಳಿದಂತೆ "ಗೌರವಿಸು ಜೀವನವ, ಗೌರವಿಸು ಚೇತನವ" ಸಂದೇಶ ನಮ್ಮ ಮೂಲಮಂತ್ರವಾಗಬೇಕು." ಎನ್ನುತ್ತಾ, ಕಾಫಿ ಕಪ್ಪುಗಳನ್ನು ತೆಗೆದುಕೊಂಡು ಒಳಕ್ಕೆ ಹೋದ.

■

---




**10 ವರ್ಷದ ಹಿಂದೆ ನಲ್ಲಿ ಹಾಕಿಸೋದಕ್ಕೆ ಅರ್ಜಿ ಹಾಕಿದ್ವಿ. ಈಗ ಸರಕಾರದವರ ಕೈಗೆ ಸಿಕ್ಕಿರಬೇಕು ಅಲ್ವೇನೇ...**

# ದಾನಶೂರನ ಸಮಸ್ಯೆಗಳು!

● ಚಿತ್ರಾ ರಾಮಚಂದ್ರನ್

"ದಿನ ಬೆಳಗಾದರೆ ಮಾನವೀಯತೆ ಸತ್ತೋಗಿದೆ ಅಂತ ಬಡ್ಕೋತಾ ಇರ್ತೀರಲ್ಲಾ! ಇವತ್ತಿನ ಪೇಪರ್ನೋಡಿ! ಮಹಾಮಾರಿಯಿಂದ ಅಲ್ಲೋಲ ಕಲ್ಲೋಲವಾಗ್ತಿರೋ ಪ್ರಪಂಚದಲ್ಲಿ ಮಾನವೀಯತೆ ಹೇಗೆ ಎಚ್ಚೆತ್ತುಕೊಂಡಿದೆ ಅಂತ! ಶ್ರಮದಾನ , ಅನ್ನದಾನ, ಅತ್ಯಾವಶ್ಯಕ ವಸ್ತುಗಳ ದಾನ, ನಗದು ದಾನ ಅಂತ ಲಾಕ್ಡೌನ್ ಸಂಕಷ್ಟದಲ್ಲಿ ಬಳಲ್ತಿರೋ ದೀನರ ಕಷ್ಟ ಪರಿಹಾರಕ್ಕಾಗಿ ಎಷ್ಟೆಲ್ಲಾ ಮಾಡ್ತಿದ್ದಾರೆ ನಮ್ಮ ಜನ! ಸಣ್ಣ ಹುಡುಗರೂ ಸಹ ತಮ್ಮ ತಾಂತ್ರಿಕ ಕೌಶಲ್ಯಗಳನ್ನ ಬಳಸ್ಕೊಂಡು ಜನಸೇವೆ ಮಾಡ್ತಿದ್ದಾರಂತೆ!"

"ಮಾಡ್ಲಿ ಮಾಡ್ಲಿ! ಜನಸೇವೆಯೇ ಜನಾರ್ಧನ ಸೇವೆ ಅಂತ ದೊಡ್ಡೋರು ಹೇಳಿಲ್ವೇ?"

"ರಾಜಕೀಯ ಸಂಸ್ಥೆಗಳೂ ಖಾಸಗಿ ಸಂಸ್ಥೆಗಳೂ ನಾಮುಂದು ತಾಮುಂದು ಅಂತ ದೇಣಿಗೆ ಹಣ ಸಂಗ್ರಹ ಮಾಡಕ್ಕೆ ಹೊರಟಿವೆ! ರೀ! ನಮ್ಮಿಂದ ಬೇರೇನೂ ಮಾಡಕ್ಕಾಗಲ್ಲ. ಆದ್ರೆ ಕೂತಲ್ಲೇ ಯಾವ್ದಾದರೂ ಸಂಸ್ಥೆಗೆ ನಮ್ಮಿಂದಾದ ನಗದು ಡೊನೇಷನ್ಕೊಡೋಣವೇನ್ರೀ ?"

"ಏ! ಅರ್ಜೆಂಟಲ್ಲಿ ಹಾಗೆಲ್ಲ ಮಾಡಕ್ಕೆ ಹೋಗ್ಬೇಡ ನೀನು! ಇಂತಾ ವ್ಯವಹಾರಗಳಲ್ಲಿ ತುಂಬಾ ಸಮಸ್ಯೆಗಳಿರ್ತವೆ!"

"ಉಸ್ಸಪ್ಪ! ಶುರುವಾಯಿತೇ ನಿಮ್ಮ ಸಮಸ್ಯೆ ಪುರಾಣ ? ನಿಮ್ಮ ಜಿಪುಣತನಕ್ಕೆ ಇಲ್ಲದ ಸಮಸ್ಯೆಗಳನ್ನ ಕಾರಣ ಮಾಡಬೇಡಿ!"

"ಜಿಪುಣತನ ಇಲ್ವೇ! ಇದು ಮುಂದಾಲೋಚನೆ! ನನ್ನ ಸ್ನೇಹಿತರೆಲ್ಲ ಸಮಸ್ಯೆಗಳನ್ನ ಹುಡುಕಿತೆಗೆದು ವಿಶ್ಲೇಷಣೆ ಮಾಡೋ ನನ್ನ ಬುದ್ಧಿವಂತಿಕೆಯನ್ನ ಅದೆಷ್ಟು ಹೊಗಳ್ತಾರೆ ಗೊತ್ತೇ ?"

"ಸಾಕುಸಾಕು! ಅವರೆಲ್ಲ ನಿಮ್ಮನ್ನ 'ಸಮಸ್ಯೆಗಳ ಸರದಾರ' ಅಂತ ಕೀಟ್ಲೆ ಮಾಡೋದು ನನಗೆ ಗೊತ್ತಿಲ್ವೇನು ?"

"ಸಿಡುಕ್ಬೇಡ ಕಣೆ! ಅದು ಪ್ರೀತಿಯಿಂದ ಅವರುಗಳು ಹೇಳೋ ಮಾತು! ಅದಿರ್ಲಿ! ಈ ದೇಣಿಗೆಯಲ್ಲಿರೋ ಸಮಸ್ಯೆಗಳ ಬಗ್ಗೆ ಹೇಳ್ತಿನಿ ಕೇಳು."

"ಕೇಳ್ದಿದ್ರೆ ಬಿಡ್ತೀರೇನು ?"

"ಸಂಗ್ರಹವಾದ ದೇಣಿಗೆ ಹಣ ಸರಿಯಾಗಿ ಅರ್ಹರ ಕೈ ಸೇರಬೇಕಲ್ಲ! ಅಲ್ಲೇ ಇರೋದು ಸಮಸ್ಯೆ ."

"ಸೇರ್ದೆ ಎಲ್ಲಿಗೆ ಹೋಗತ್ತೆ ಮತ್ತೆ?"

"ನೀನು ಶುದ್ಧ ಮೊದ್ದು! ಕೊಡೋವ್ರಿಗೂ ತಗೋಳೋವ್ರಿಗೂ ನಡುವೆ ಅದೆಷ್ಟು ಹೆಗ್ಗಣಗಳು ಓಡಾಡ್ತಿರತ್ವೇ ಗೊತ್ತೇ ನಿನಗೆ? ಆ ಹೆಗ್ಗಣಗಳು ಸ್ವಾಹಾ ಮಾಡಿ ಉಳಿದದ್ದಷ್ಟೇ ಅರ್ಹರಿಗೆ ಹೋಗಿ ಸೇರೋದು!"

"ಛೆ! ಇಂತಾ ಸಮಯದಲ್ಲಿ ಯಾರಾದ್ರೂ ಹಾಗೆಲ್ಲ ಮಾಡ್ತಾರಾ ಅಂದ್ರೆ ?"

"ಈ ಸಮಯ ಏನು ಬೇರೆ ಸಮಯ ಏನು ? ಪ್ರಪಂಚ ಯಾವಾಗ್ಲೂ ಇರೋದೇ ಹಾಗೇ! ಎಲ್ಲೆಲ್ಲೂ ನೀಡಿಗಿಂತ ಗ್ರೀಡೇ ಹೆಚ್ಚಾಗಿದೆ! ದೇಣಿಗೆ ಕೊಟ್ಟು ನಾವ್ಯಾಕೆ ಹೆಗ್ಗಣಗಳನ್ನ ಸಾಕೋಣ ಹೇಳು ?"

"ಸರಿಬಿಡಿ! ಆದ್ರೆ ಇಂತಾ ಸಮಯದಲ್ಲಿ ಜನರ ಕಷ್ಟನಿವಾರಣೆಗೆ ನಾವೂ ಏನಾದ್ರೂ ಸೇವೆ ಮಾಡ್ಲೇ ಬೇಕು ಅಂತ ನನ್ನಲ್ಲಿರೋ ಮಾನವೀಯತೆ ಸದಾ ನನ್ನ ಕಾಡ್ತಾನೇ ಇದೆ ಕಣ್ರೀ!"

"ಯಾವ ಸೇವೆ ಮಾಡೋದಾದ್ರೂ, ಆ ಕಾರ್ಯದಲ್ಲಿ ಏನಾದ್ರೂ ಸಮಸ್ಯೆಗಳಿವೆಯೇ ಅಂತ ಮೊದ್ಲು ಪರಿಶೀಲಿಸ್ಬೇಕು. ಮಾಡೋ ಸೇವೆಯನ್ನ ನಾವೇ ಸ್ವತಃ ನಮ್ಮ ಕಣ್ಣಾರೆ ಕಂಡು ನಮ್ಮ ಕೈಯಾರೆ ಮಾಡ್ಬೇಕು! 'ಅವಸರಬೇಡ! ಯೋಚಿಸೋಣ ತಡಿ' ಅಂತ ನಿನ್ನ ಮಾನವೀಯತೆಗೆ ಸ್ವಲ್ಪ ಬುದ್ಧಿ ಹೇಳು!"

"ನೀವ್ರೋ! ನಿಮ್ಮ ತಮಾಷೆನೋ! ನಮ್ಮ ಶೇಷಗಿರಿ ಮಾವನ ಸೊಸೆ ಇದ್ದಾಳಲ್ಲ ...."

"ಓ! ರಸ್ತೇಲಿರೋ ನಾಯಿಮರಿಗೆ ಬಿಸ್ಕತ್ಹಾಕಿ, ಮೂಕಪ್ರಾಣಿ ಸೇವೆಮಾಡ್ದೆ ಅಂತ ಫೇಸ್ಬುಕ್ಕಲ್ಲಿ ಸೆಲ್ಫಿ ಹಾಕ್ಕೊತ್ತಾಳಲ್ಲಾ ..ಅವಳಾ?"

"ಹೋಗ್ರಿ! ಅವ್ಳನ್ನ ಕಂಡ್ರೆ ನಿಮಗ್ಯಾಕೋ ನಿಷ್ಠುರ! ನಮ್ಮ ಹಾಗೆ ಮೀನ ಮೇಷ ನೋಡ್ದೆ ಅಂತೂ ಏನೋ ಒಂದು ಮಾಡ್ತಾಳೋ ಇಲ್ವೋ?"

"ಕಾಗೆಗೆ ಅನ್ನಹಾಕೋದು, ನಾಯಿಗೆ ಬಿಸ್ಕತ್ಕೊಡೋದು, ಇಂತದ್ದೆಲ್ಲಾ ಒಂದು ಸೇವೆ! ಅದನ್ನೆಲ್ಲ ಮೆಚ್ಕೊಳ್ಳೋಕ್ಕೆ ನೀನೊಬ್ಬಳು!"

"ಒಳ್ಳೇದನ್ನ ನೀವೆಲ್ಲಿ ನೋಡ್ತೀರಿ? ನಿಮ್ಮ ಕಣ್ಣಿಗೆ ಯಾವಾಗ್ಲೂ ಎಲ್ಲವೂ ಕೊಂಕಾಗಿಯೇ ಕಾಣ್ಸತ್ತೆ! ಕೇಳಿ ಇಲ್ಲಿ! ಅವ್ಳು ವಾರಕ್ಕೊಮ್ಮೆ ತನ್ನ ಕೈಯಾರೆ ಅಡುಗೆ ಮಾಡಿ ದಿಕ್ಕಿಲ್ಲದವರಿಗೆ ಹಂಚ್ತಾಳಂತೆ!"

"ಓಹೋ! ಈ ವಿಷಯ ಇನ್ನೂ ಫೇಸ್ಬುಕ್ಕಿಗೆ ಹಾಕಿಲ್ಲ ಅನ್ಸತ್ತೆ!"

"ಸಾಕು ಸುಮ್ನಿರ್ರಿ! ನಾವೂ ಹಾಗೆ ಅನ್ನದಾನ ಮಾಡಬೋದಲ್ಲ? ನಮ್ಮ ಕಣ್ಣಾರೆ ಕಂಡು ನಮ್ಮದ್ದೇ ಕೈಯ್ಯಾರೆ ಕೊಟ್ಟ ಹಾಗಾಗತ್ತೆ. ಅನ್ನದಾನಕ್ಕೆ ಮಿಗಿಲಾದ ದಾನವಿಲ್ಲಾ ಅಂತ ದೊಡ್ಡೋರು ಹೇಳಿದ್ದಾರಲ್ಲ!"

"ಸರಿ ಅಡುಗೆ ಮಾಡಿದೆ ಅಂತ ಇಟ್ಕೊ! ಅದನ್ನ ಯಾರಿಗೆ ಕೊಡ್ತಿಯ?"

"ಇದ್ರಲ್ಲೆಂತಾ ಸಮಸ್ಯೆ ಕಣ್ರೀ! ದಿಕ್ಕಿಲ್ಲದೋರು, ಭಿಕ್ಷುಕರು, ಅಲೆಮಾರಿಗಳು , ದಿನಗೂಲಿಗಳು, ಯಾರಿಗಾದ್ರೂ ಕೊಟ್ರೆ ಸರಿ!"

"ಅವರನ್ನೆಲ್ಲ ಎಲ್ಲಿ ಹುಡುಕ್ಕೊಂಡು ಹೋಗೋದು ಈ ಕೋವಿಡ್ಕಟ್ಟಳೆ ಜಾರಿಯಲ್ಲಿರೋ ಸಮಯದಲ್ಲಿ? ಈ ದೊಡ್ಡ ಸಮಸ್ಯೆ ನಿನಗೆ ಹೊಳೀಲೇ ಇಲ್ವಾ ?"

"ಅದೇನೋ ಸರಿ! ಆದ್ರೆ ತಿಮ್ಮಪ್ಪನ ದೇವಸ್ಥಾನದ ಬಳಿ ಭಿಕ್ಷುಕರು ಸಿಕ್ಕೇಸಿಕ್ತಾರೆ! ಮಾಸ್ಕ್ ಹಾಕ್ಕೊಂಡು ಹೋಗೋದು! ಕೊಡೋದು! ಬರೋದು! ಅಷ್ಟೇ!"

"ಅವರೆಲ್ಲ ನಿನ್ನ ಅನ್ನಕ್ಕಾಗಿಯೇ ಕಾದಿದ್ದಾರೆ ಅಂದ್ಕೊಂಡ್ಯಾ ?"

"ಊಟ ಕೊಟ್ರೆ ಯಾರಾದ್ರೂ ಬೇಡ ಅಂತಾರೇನ್ರೀ ?"

"ಅನ್ನೋದಷ್ಟೇ ಅಲ್ಲ! ನಿನಗೆ ಒದೇನೂ ಕೊಟ್ಟು ಕಳಿಸ್ತಾರೋ ಏನೋ!"

"ಅಯ್ಯೋ! ಯಾಕ್ರೀ ?"

"ಇದ್ರಲ್ಲಿರೋ ಸಮಸ್ಯೆ ನಿನಗೆ ಅರ್ಥವಾಗೋದಿಲ್ಲ ಬಿಡು ."

"ಭಿಕ್ಷುಕರಿಗೆ ಅನ್ನ ದಾನ ಮಾಡೋದ್ರಲ್ಲೂ ಸಮಸ್ಯೆನೆ ?"

"ಬೇಸರಮಾಡ್ಕೋಬೇಡ! ಬೇಕಾದಷ್ಟಿವೆ! ದೇವಸ್ಥಾನದ ಹೊರಗೆ ಅನ್ನದಾನದ ಮಹಿಮೆಯನ್ನ ಸಾರುವ ಒಂದು ಫಲಕವನ್ನ ಇಟ್ಟಿದ್ದಾರೆ ."

"ಹೂಂ!"

"ತಳ್ಳುಬಂಡಿಯಲ್ಲಿ ಊಟ ಮಾರಾಟ ಮಾಡೋ ಆಸಾಮಿಯೋರ್ವ ಅಲ್ಲೇ ಕೂತಿದ್ದಾನೆ! ಮಾಸ್ಕಾಕಿರೋ ಭಕ್ತರು ಅವನ ಬಳಿಯೇ ಅನ್ನದ ಪ್ಯಾಕೆಟ್ಕೊಂಡುಕೊಂಡು ಅಲ್ಲೇ ಇರೋ ಭಿಕ್ಷುಕರಿಗೆ ಕೊಡ್ತಾರೆ!"

"ಇದೊಳ್ಳೆ ಐಡಿಯಾ ಅಲ್ವೇ? ಇದ್ರಲ್ಲೆಂತಾ ಸಮಸ್ಯೆ ಕಂಡ್ಬಿಟ್ರಿ ನೀವು ?"

"ಇಷ್ಟಕ್ಕೆ ಮುಗ್ದಿಲ್ಲ! ಇನ್ನೂ ಕೇಳು! ಭಿಕ್ಷುಕರು ತಮಗೆ ದೊರಕಿದ ಊಟದ ಪ್ಯಾಕೆಟ್ಗಳನ್ನೆಲ್ಲ ಅರ್ಧಬೆಲೆಗೆ ಮತ್ತೆ ಗಾಡಿಯವನಿಗೆ ಮಾರ್ತಾರಂತೆ!"

"ಯಾಕ್ರೀ ಹಾಗೆ? ಮಾಸ್ಕ್ ಹಾಕ್ಕೊಂಡು ತಿನ್ನಕ್ಕಾಗಲ್ಲ ಅಂತಾನಾ ?"

"ಮಾಸ್ಕ್ ತೆಗೆದ್ರೂ ಹತ್ತಾರು ಭಕ್ತರು ಕೊಡೊ ಎಲ್ಲ ಪ್ಯಾಕೆಟ್ಖಾಲಿ ಮಾಡೋದು ದೊಡ್ಡ ಸಮಸ್ಯೆ ಆಲ್ವಾ ?"

"ಮತ್ತೆ ? ಆ ಪ್ಯಾಕೆಟ್ಗಳನ್ನ ಗಾಡಿಯವನು ಏನ್ಮಾಡ್ತಾನೆ ?"

"ಬೇರೆ ಭಕ್ತಾದಿಗಳಿಗೆ ಅವನ್ನ ಮತ್ತೆ ಮಾರ್ತಾನಂತೆ!"

"ಹೀಗೆ ಮರುಬಳಕೆ ಮಾಡ್ತಾನೆ ಹೋದ್ರೆ ಅನ್ನ ಹಳಸೋಗಲ್ವೆ ?"

"ಅದು ತಿನ್ನೋರ ಸಮಸ್ಯೆ!"

"ಅಯ್ಯಯ್ಯೋ! ಇದೆಂತಾ ಅನ್ನದಾನವಪ್ಪಾ ?"

"ಇದು ದಾನ ಅಲ್ಲಮ್ಮಾ! ದಂದೆ! ಈ ದಂದೆ ಮಧ್ಯೆ ನೀನು ತಲೆಹಾಕಿದ್ರೆ ನಿಂಗೆ ಸಿಗೋದು ಒದೆ! ಭಿಕ್ಷುಕರಿಗೆಅನ್ನ ದಾನ ಮಾಡೋದ್ರಲ್ಲಿರೋ ಸಮಸ್ಯೆಗಳು ಏನೇನು ಅಂತ ಈಗ ಅರ್ಥವಾಯಿತಾ ?"

"ಭಿಕ್ಷುಕರಿಗೆ ದುಡ್ಡೇ ಬೇಕಿತ್ತೋ ಏನೋ ಪಾಪ! ಅದನ್ನೇ ಕೊಟ್ರೆ ಆಯಿತು! ವಾರಕ್ಕೊಮ್ಮೆ ಹೋಗಿ – ಮಾಸ್ಕಾಕ್ಕೊಂಡೇ – ಹತ್ತು ಭಿಕ್ಷುಕರಿಗೆ ಹತ್ತತ್ತು ರೂಪಾಯಿ ಕೊಟ್ಟುಬರೋದು ."

"ನಿನ್ನ ಹತ್ತು ರೂಪಾಯಿಯಲ್ಲಿ ಅವರಿಗೆ ಎರಡು ರೂಪಾಯಿಯಾದ್ರೂ ದಕ್ಕತ್ತೋ ಇಲ್ವೋ!"

"ಉಳಿದ ಎಂಟು ರೂಪಾಯಿ?!"

"ನೀನು ಶುದ್ಧ ಗುಳ್ಡು ಕಣೆ! ಅಷ್ಟು ಸಿನೆಮಾ ನೋಡ್ತೀಯ! ಇನ್ನೂ ಅರ್ಥವಾಗಿಲ್ವೇ? ಬಿಕ್ಷೆ ಹಣದ ಸಿಂಹ ಪಾಲು ಅವರುಗಳ ಬಾಸ್ಗೆ ಸೇರತ್ತೆ! ಈಗ ʼಹೇಳು! ನಾವು ದುಡ್ಡು ತೆತ್ತು ಅಂತಾ ಬಾಸ್ಗಳ ಹೊಟ್ಟೆ ಬೆಳೆಸೋ ಸೇವೆಮಾಡ್ಬೇಕೇ ?"

"ಛೆ! ಎತ್ತ ಹೋದ್ರೂ ಏನೋ ಒಂದು ಸಮಸ್ಯೆ ಹೇಳ್ತೀರಿ! ಸರಿ! ಒಂದು ಸಮಸ್ಯೆ ಪ್ರೂಫ್ಯೋಚ್ನೆ ಬಂತು! ಹಾಗೇಮಾಡೋಣ! ಮಾನವೀಯತೆ ನನ್ನ ತಲೆ ಕೊರೀತಾನೆ ಇದೆ ."

"ನನ್ನ ಹೊಟ್ಟೇಲಿ ಹುಳಿಹಿಂಡಿದ ಹಾಗೆ ಭಯ ಕೊರೀತಾ ಇದೆ! ಅದೇನಂತ ಬೇಗ ಹೇಳು!"

"ಏನಿಲ್ಲ ಅಂದ್ರೆ! ಹೇಗೂ ನಮ್ಮ ಶೇಷಗಿರಿ ಮಾವನ ಸೊಸೆ ತನ್ನ ಕೈಯ್ಯಾರೆ ಅಡುಗೆ ಮಾಡಿ ದಾನ ಮಾಡ್ತಾ ಇದ್ದಾಳೆ! ಅವ್ಳಿಗೆ ನಮ್ಮಿಂದಾದ ಅಡುಗೆ ಸಾಮಗ್ರಿ ಹೊಂದಿಸಿ ಕೊಟ್ರೆ ಹೇಗೆ ?"

"ಅಯ್ಯೋ! ನಿನ್ನ ಬುದ್ಧಿಗೆ ಇಷ್ಟು! ಅವಳಿಗೆ ಸಿಗೋ ಪುಣ್ಯಫಲದಲ್ಲಿ ನೀನು ಒಂದು ಭಾಗ ಲಪಟಾಯಿಸಿದ ಹಾಗಾಗಲ್ವೇನೇ ? ಪುಣ್ಯಫಲದ ವಿಭಜನೆ ಮುಂಬರುವ ಹಲವು ಸಮಸ್ಯೆಗಳಿಗೆ ನಾಂದಿ!"

"ಮತ್ತೆ ಏನ್ಮಾಡೋಣಾ? ತೊಚ್ತಿಲ್ವೇ!"

"ಸುಮ್ನೆ ತಲೆ ಕೆಡಿಸ್ಕೊಬೇಡ! ಯಾವ ಸಮಸ್ಯೆಯೂ ಇಲ್ಲದ ಒಂದು ಸಖತ್ಸಲಹೆ ಕೊಡ್ತೀನಿ! ಹಾಗೆ ಮಾಡಿದ್ರೆ ಎಲ್ರಿಗೂ ಒಳ್ಳೇದಾಗತ್ತೆ! ನಿನ್ನ ಮಾನವೀಯತೆಗೂ ಸಾಂತ್ವನ ದೊರಕತ್ತೆ!"

"ಹೇಳಿ! ಹೇಳಿ!"

"ಪ್ರತಿದಿನ ಎರಡು ಹೊತ್ತೂ ದೇವರಿಗೆ ದೀಪಹಚ್ಚಿ, ಮನಸ್ಫೂರ್ತಿಯಾಗಿ 'ಸರ್ವೇಜನಾ : ಸುಖಿನೋಭವಂತು' ಅಂತ ಹೇಳಿ ಲೋಕಕಲ್ಯಾಣಕ್ಕಾಗಿ ಪ್ರಾರ್ಥನೆ ಮಾಡಿದ್ರೆ ಮುಗೀತು! ಅದು ಬಿಟ್ಟು ಇಲ್ಲದ ಸಮಸ್ಯೆಗಳನ್ನ ಕಟ್ಕೊಂಡು ಯಾಕೀ ಒದ್ದಾಟ ?"

"ಹಾ ?"

"ಹೂಂ! ಜನಸೇವೆಯೇ ಜನಾರ್ಧನಸೇವೆ! ಅದೇರೀತಿ ಜನಾರ್ಧನ ಸೇವೆಯೇ ಜನಸೇವೆಯೂ ಆಗಬಹುದಲ್ವೆ ?"

**ಹಿನ್ನುಡಿ :**

**ಕೇವಲ ಮನರಂಜನೆಗಾಗಿ ಮಾತ್ರ ಬರೆದ ವಿಡಂಬನಾತ್ಮಕ ಕಥೆ ಇದು .ಈ ಸಂಕಷ್ಟದ ಸಮಯದಲ್ಲಿ ದೀನರ ಕಷ್ಟಪರಿಹಾರಕ್ಕಾಗಿ ನಮ್ಮಿಂದಾದ ಸೇವೆಯನ್ನು ನಾವು ಮಾಡೋಣ. ಅಲ್ಪ ಸೇವೆಯಾದರೂ ಅದು ಮಹತ್ತರವಾದ ಅಳಿಲು ಸೇವೆಗೆ ಸಮಾನ. ಸರ್ವೇಜನಾ: ಸುಖಿನೋಭವಂತು.**

# ಹೆಸರಿನಲ್ಲೇನಿದೆ?

● ಡಾ. ಮುಕುಂದ ರಾ.ಗಜೇಂದ್ರಗಡ

ಎಲ್ಲರೂ ಹೇಳೋದು ಹೆಸರಿನಲ್ಲೇನಿದೆ ಅಂತ, ಆದರೆ ನಾ ಹೇಳೋದು, ಇರೋದೆಲ್ಲಾ ಹೆಸರಿನಲ್ಲೇ ಇದೆ ಅಂತ. ಅಲ್ಲಾ ನೀವೆ ಹೇಳರಿ, ಏನೂ ಇಲ್ಲದಿದ್ದರ ನಮ್ಮ ಅಪ್ಪಾ ಅಮ್ಮಾ ಸಾವಿರ–ಸಾವಿರ ರೂಪಾಯಿ ಖರ್ಚುಮಾಡಿ ಹೆಸರು ಇಡುವ ಕಾರ್ಯಕ್ರಮ ಯ್ಯಾಕ ಮಾಡತಿದ್ರು? ಈಗ ಸ್ವಲ್ಪ ವಿಚಾರ ಮಾಡ್ರಿ, ಹೆಸರೇ ಇಲ್ಲದಿದ್ರ ನಾ ನಿಮ್ಮನ್ನ, ನೀವು ನನ್ನನ್ನ ಎನಂತ ಕರಿತಿದ್ರಿ? ಹೌದೋ ಅಲ್ಲೋ?

ಅದೇನೆ ಇರಲಿ, ಈ ಹೆಸರಿನಿಂದ ಭಾಳ ಘೋಟಾಳನೂ ಆಗ್ಯಾವ. ನಾವು ಉತ್ತರ ಕರ್ನಾಟಕದವರು ನಮ್ಮ ಹೆಸರನ್ನ ಪೂರ್ಣ ಇಟಗೋತಿವಿ, ನಮಗ ದಕ್ಷಿಣ ಕರ್ನಾಟಕದವರಂಘ ಇನಿಶಿಯಲ್ ಇರಂಗಿಲ್ಲ. ಈಗ ನನ್ನ ಹೆಸರ ಹೇಳಿದ್ರ, ನಮ್ಮ ಅಪ್ಪ ಯ್ಯಾರು, ಅಜ್ಜಾ ಯ್ಯಾರು ಅಂತ ನಿಮಗ ತಿಳಿದಬಿಡತದ ಆದರ ಅದೇ ದಕ್ಷಿಣ ಕರ್ನಾಟಕದವರ ಹೆಸರ ಹೇಳಿದ್ರ, ಅವನ ಅಪ್ಪ ಯ್ಯಾರು, ಅಜ್ಜಾ ಯ್ಯಾರು ಅಂತ ತಿಳಿತದೇನು? ಇಲ್ಲ ಅಲ್ಲೇನು?

ಈಗ ನನ್ನ ಕೇಸೇ ತೊಗೊಳ್ಳರಿ. ನನ್ನ ಹೆಸರು ಭಾಳ "ಯುನಿಕ" ಅದ ಅಂತ ಅಂದುಕೊಂಡಿದ್ದೆ, ಆದರ ಶ್ರೀ ಪಿ. ಬಿ. ಗಜೇಂದ್ರಗಡ ಅವರು ಭಾರತದ ಮುಖ್ಯನ್ಯಾಯಾಧೀಶರಾದಮೇಲೆ ನನ್ನ ಐಡಿಯಾ ಬದಲಾಯಿಸಿಕೊಂಡೆ, ಅದರಾಗೂ ನನ್ನ ಹೆಸರನ್ನ ಒಬ್ಬಬ್ಬರೂ ಒಂದೊಂದು ರೀತಿಯಲ್ಲಿ ಕರಿಯಲಿಕ್ಕೆ ಸುರುಮಾಡಿದಮ್ಯಾಲೆ.

ದಕ್ಷಿಣ ಕರ್ಣಾಟಕದರಿಗೆ ಗಜೇಂದ್ರ ಆದಮ್ಯಾಲೆ ನಾಲಗಿನೇ ತಿರಗಂಗಿಲ್ಲ, ಗಜೇಂದ್ರಗಡ ಒಂದೇ ಪದ ಅಂತ ಅವರ ತಲೀಗೆ ಹೊಗಂಗಿಲ್ಲ. ನನ್ನ ಹೆಸರನ್ನ ಡಿಸೆಕ್ಟಮಾಡಿ, ಗಡ ಅನ್ನೋದನ್ನ ಘಟ ಅಂತಲೋ, ಘಟಂ ಅಂತಲೋ ಮಾಡಬಿಡತಾರ. ಕೆಲವರಂತು ಇನ್ನೂ ಸ್ವಲ್ಪ ಮುಂದಕ್ಕ ಹೋಗಿ, ಇವರ ಮನೆತನದೊಳಗ ಎರಡು ಮೂರು ತಲಿಮಾರ ಮೊದಲು, ಘಟಂ ಬಾರಸತಿದ್ದರು, ಅದಕ್ಕ ನಮ್ಮ ಮೈಸೂರು ಮಹಾರಾಜರು ಅವರಿಗೆ ಬಿರುದು ಕೊಟ್ಟಿದ್ದರು, ಈ ತಲಿಮಾರವರೂ ಅದನ್ನ ಮುಂದವರಸ್ಯಾರ ಅಂತ ಕಥಿನೂ ಕಟ್ಟಿಬಿಟ್ರು. ಎಲ್ಲಾ ಸುಳ್ಳು. ಖರೆ ಹೇಳಬೇಕಂದ್ರ, ನಮ್ಮ ಆ ಹಿಂದಿನ ತಲೆಮಾರವರಿಗೆ ಘಟಂ ಅಂತ ಒಂದು ವಾದ್ಯ ಇರತದ ಅಂತ್ಯೇ ಗೊತ್ತಿದ್ದಿಲ್ಲ. ನಮಗೂ ನಮ್ಮ ಸಾಲ್ಯಾಗ ರಾಮೋತ್ಸವದ ಸಂಗೀತದ ವೇಳ್ಯಾಗ ಮಣ್ಣಿನಕೊಡ ಬಾರಸೊದು ನೋಡಿ, ಅದೇ ಘಟಂ ಅಂತ ಗೊತ್ತಾಗಿದ್ದು.

ನನ್ನ ತಮಿಳುನಾಡಿನ ಗೆಳ್ಯಾರು ನನ್ನನ್ನ ಎಂದೂ ಗಜೇಂದ್ರಗಡ ಅಂತ ಕರದೇಇಲ್ಲಾ. ಅವರ ಪ್ರಕಾರ ನನ್ನ ಹೆಸರು ಗಜೇಂದ್ರನ್ ಮತ್ತ ಅವರು ಬರೆದ ನನ್ನ ಹೆಸರಿನ ಇಂಗ್ಲೀಷ ಸ್ಪೇಲ್ಲಿಂಗ್ ಆ ದೇವರಿಗೇ ಪ್ರೀತಿ. ಇನ್ನ ನನ್ನ ಮಹಾರಾಷ್ಟದ ಫ್ರೆಂಡ್ಸರು, ನನ್ನ ಹೆಸರು ಸಣ್ಣದದ ಅಂತ ತಿಳಿದುಕೊಂಡು ಅದಕ್ಕ "ಕರ್" ಅಂತ ಸೇರಿಸಿ, ಗಜೇಂದ್ರಗಡಕರ್ ಅಂತ ಮಾಡತಾರ, ಆಮ್ಯಾಲೆ, ಅದು ಉದ್ದ ಆಯಿತು ಅಂತ ಅದ್ಕ ಸರ್ಜರಿ ಮಾಡಿ, ಹೆಸರನ್ನ ಕತ್ತರಿಸಿ, ಗಡಕರ್ ಅಂತ ಮಾಡಿಬಿಡತಾರ. ಇನ್ನ ನನ್ನ ಸರದಾರಜಿ ಗೆಳ್ಯಾರು ನನ್ನನ್ನ ತಮ್ಮವ ಮಾಡಿಕೊಂಡು, ನನ್ನನ್ನ ಗಜೇಂದ್ರ

ಸಿಂಗ್ ಅನತಾರ. ಈ ಉತ್ತರ ಪ್ರದೇಶದವರು ಉಲ್ಟಾ ಪ್ರದೇಶದವರಾಗಿದ್ದರೂ ಮಂದಿಗೆ ಭಾಳ ಗೌರವಕೊಟ್ಟು ಕರಿತಾರ. ಅವರ ಪ್ರಕಾರ ನಾನು ಗಜೇಂದ್ರ ಸಾಬ್ ಅಥವಾ ಗಡ ಸಾಬ್, ಗಜೇಂದ್ರಗಡ ಅಂತ ಇಲ್ಲೇಇಲ್ಲ. ಒಟ್ಟನೊಳಗ ನನ್ನ ಈ ಒಂದು ಹೆಸರನಾಗೇ ಪೂರ್ಣ ಭಾರತ ಅದ.

ನಾಎನರೆ ಕಡಿಮೇನು? ನಾನೂ ಬೆರಕಿನೆ. ನಾ ತಮಿಳರಜೋಡಿ "ನಲ್ಲಾಇರಕಿರಿಯಾ"? ಅಂತ, ಉತ್ತರ ಪ್ರದೇಶದವರ ಜೊತೆ "ಭಾಯಿಸಾಬ್" ಅಂತೋ "ಭಾಭೀಜಿ" ಅಂತೋ; ಪಂಜಾಬಿ ಅವರಿಗೆ "ಸತ್ ಶ್ರೀ ಅಕಾಲ್" ಅಂತ ಹೇಳಿ ಅಪ್ಪಿಕೊಂಡು "ಕಿ ಗಲ್ ಹೈ" ಅಂತ ಸಲಿಗೆ ಬೆಳಸಬಿಡತೀನಿ. ತಮಿಳರು ಖುಷಿಆಗಿ ಫಿಲ್ಟರ್ ಕಾಫಿ ಕುಡಸತಾರ, ಉತ್ತರ ಪ್ರದೇಶದವರು ಸಮೋಸ, ಜಿಲೇಬಿ ತಿನ್ನಸತಾರ, ಪಂಜಾಬಿಅವರಂತು ದಿಲ್ದಾರ ಮಂದಿ, ನಮ್ಮ ಗುಂಡು ಪಾರ್ಟಿ ಫ್ರೆಂಡ್ಸ್ ವೀರಗಲ್ಲುಗತೆ ಮೊಳಕೈ ಮಡಿಸಿ ಕೈ ಮ್ಯಾಲೆ ಎತ್ತಿ ಗುಂಡು ಅಂತ ತೋರಸತಾರಲ್ಲಾ, ಹಾಂಗ ನಮ್ಮ ಈ ಪಂಜಾಬಿಗಳು ಮೊಳಕೈ ಮಟ್ಟಎತ್ತರದ ಪಂಪರಒಳಗ ಗಟ್ಟಿ ಹಾಲು ಮ್ಯಾಲೆ ದಪ್ಪ ಕೆನಿಹಾಕಿ ಕುಡಸತಾರ. ಈ ಮಹಾರಾಷ್ಟ್ರದವರು ಮಾತ್ರ ಕೈಗೆ ಸಿಗಂಗಿಲ್ಲ. ಮೈಗೆಲ್ಲ ಎಣ್ಣಿಬಳಿದುಕೋಂಡಿರತಾರ. ನೀವು "ಕಸಕಾಯಿ ಮಣತಾತ"? ಅಥವಾ "ಕಂಟಾಲ ಅಲ" ಅನ್ನಿರಿ ಆದ್ರು ನಿಮ್ಮನ್ನ ಹಚ್ಚಿಕೊಳ್ಳಂಗಿಲ್ಲ. ಆಮೇಲೆ ತಿಳಿಯಿತು, ಹಚ್ಚಿಕೊಂಡಬಿಟ್ರ ಚಹಾ ಕುಡಸಬೇಕಾಗತದ ರೊಕ್ಕ ಖರ್ಚಾಗತಾವ. ಅದೇ ಅವರನ್ನ ನಿಮ್ಮ ಮನೀಗೆ ಕರಿರಿ, ಎಂದೂ ಕಂಡಿಲ್ಲದವರಂಥ "ಛಾನ್ ಆಹೆ, ಛಾನ್ ಆಹೆ" ಅಂತ ಹೇಳಿಕೋತ ತಿಂದೂ ಹೋದ, ಕೊಂಡೂ ಹೋದ ಮಾಡತಾರ. ಈಗ ಬೆಳಗಾವಿಯೊಳಗ ಆಗಿಲ್ಲೇನು? ಅಲ್ಲಿಂದ ಬಂದ್ರು, ಈಗ ಬೆಳಗಾವಿನೇ ತಮ್ಮದು ಅನ್ನಲಿಕ್ಕೆ ಹತ್ಯಾರ. ಇರಲಿ ಬಿಡ್ರಿ, ವಿಷಯ ಬ್ಯಾರೆಕಡೆ ಹೋಯಿತು, ಮೂಲ ವಿಷಯಕ್ಕೆ ಬರೋಣ.

ನನ್ನ ಈ ಗಜೇಂದ್ರಗಡ ಹೆಸರಿಂದೂ ಒಂದುಸರೆ ಮಜಾಆಯಿತು. ನಾನು ದಿನಧಾಂಗ ಆಫೀಸು ಮುಗಿಸಿಕೊಂಡು ಮನಿಗೆ ಬರ್ತೀನಿ, ನನ್ನ ಮಾರಿ ನೋಡಿ ನನ್ನ ಹೆಂಡತಿ ಜೋರನೇ ನಗಲಿಕ್ಕೆ ಹತ್ತಿದಳು. ನನ್ನ ಅಮ್ಮ ಮುಸು ಮುಸು ನಗುತ್ತಿದ್ದರು ಮತ್ತ ನಮ್ಮ ಅಪ್ಪ ಮಂದಹಾಸ ಬೀರುತ್ತಿದ್ದರು. “ಯ್ಯಾಕವ್ವ, ನನ್ನ ಮುಸಡಿಮ್ಯಾಲೆ ಮಂಗ್ಯಾ ಕುತದೇನು ಹಿಂಗ ನಗಲಿಕ್ಕೆ ಹತ್ತೀರಿ?”

ನಗು ಇನ್ನೂ ಜೋರಾಯಿತು.

ಸ್ವಲ್ಪ ಸಿಟ್ಟಿಲೇ ಕೇಳಿದೆ, “ಯ್ಯಾಕ ಏನ್ ಅನಸ್ತದ? ಏನಾಗೆದ ನಿಮಗೆಲ್ಲಾ?”

ನನ್ನ ಹೆಂಡತಿ, ನಗು ಸಾವರಿಸಿಕೊಂಡು, ಹೇಳಲಿಕ್ಕೆ ಸುರುಮಾಡಿದ್ಲು.

ನೀವು ಮಧ್ಯಾನ್ನ ಊಟಾಮಾಡಿಕೊಂಡು ಆಫೀಸ್ ಹೋದಮ್ಯಾಲೆ, ಒಂದು ಪೋನು ಬಂತು. ಯ್ಯಾರೋ ಡೆಕ್ಕನ್ ಹೆರಾಲ್ಡ ಅವರಂತ. ನಿಮ್ಮನ್ನ ಕೇಳಿದ್ರು, ಆಫೀಸಗೆ ಹೋಗ್ಯಾರ ಅಂತ ಹೇಳಿದೆ. ಆಫೀಸ್ ಫೋನ ನಂಬರ್ ಕೇಳಿದ್ರು, ಗೊತ್ತಿಲ್ಲ ಅಂದೆ. ಯ್ಯಾಕೊ ಸಂಶಯ ಬಂದು ನೀವು ಪೇಪರ್ ಅವರು ನಮ್ಮ ಮನಿಯವರಿಗೆ ಯ್ಯಾಕ ಕೇಳತ್ತಿದ್ದೀರಿ? ಅಂತ ಕೇಳಿದೆ. ಅದಕ್ಕ, ಅವರೇನನಬೇಕು, ನೀವು ಉಪಕುಲಪತಿಆಗಿ ಸೆಲೆಕ್ಟ ಆಗೀರಿ, ಸಂದರ್ಶನ ಮಾಡಬೇಕಂತ!!!

ಐ??? ನಮ್ಮ ಮನೀಯವರು? ಉಪಕುಲಪತಿ ಆಗಿ ಸೆಲೆಕ್ಟ ಆಗ್ಯಾರ???? ಸುಳ್ಳು ಮಾತಾಡಬ್ಯಾಡ್ರಿ.

ಇಲ್ಲ ಮೇಡಂ, ರಾಜ್ಯಪಾಲರಿಂದ ಅಧಿಸೂಚನೆ ಜಾರಿ ಆಗಿದೆ.

ನೋಡ್ರಿ, ನಿಮಗ ತಲಿಕೆಟ್ಟದೋ, ಆ ರಾಜ್ಯಪಾಲರಿಗೆ ಕೆಟ್ಟದೋ ನನಗ ಗೊತ್ತಿಲ್ಲ, ಇವರಂತೂ ಉಪಕುಲಪತಿ ಆಗಲಿಕ್ಕೆ ಸಾಧ್ಯೇಇಲ್ಲ.

ಇಲ್ಲ ಮೇಡಂ ಆರ್ಡರ ಪಾಸ್ ಆಗಿದೆ.

ನೋಡ್ರಿ, ನಮ್ಮ ಮನೀ ಅವರು ದನದ್ ಡಾಕ್ಟರು, ನೀವು ಸುಳ್ಳೇ ಪಳ್ಳೇ ಹೇಳಿ ನಮ್ಮ ಮನಿ ವಾತವರಣ ಕೆಡಸ್ ಬ್ಯಾಡ್ರಿ.

ಹಿಂಗ ಹೇಳಿ, ಫೋನು ಇಟ್ಟೆ. ನಾ ಹೇಳಿದ್ದು, ಸರಿ ಅಲ್ಲೇನು?

ನನಗ ಗೊತ್ತಾಯಿತು, ಇದು ಹೆಸರಿನ ರಂಪಾಟ ಅಂತ. ಸ್ವಲ್ಪ ದುಃಖನೂ ಆಯಿತು, ಕೆಲ ಕ್ಷಣ ಉಪಕುಲಪತಿ ಅಂತ ಇದ್ದ ಕನಸನ್ನೂ ಒಡದಹಾಕಿಬಿಟ್ಟಲಲ್ಲಾ ಇಕಿ. ನನ್ನ ಹೆಂಡತಿ ಮಾಡಿದ್ದು ಸರಿನೋ, ತಪ್ಪೋ ಅಂತ ತಿಳಿಸದೇ ಸಿಟ್ಟು ತೋರಿಸೊಕೋತ, "ಚಾಅರೇ ಕೋಡತೀಯೋ ಬರೇ ನಕ್ಕೋತ ಇರತೀಯೋ?" ಅಂತ ಜೋರಲೆ ಹೇಳದೆ.

ಮರುದಿವಸ ಪೇಪರ್ ವಳಗ ಸುದ್ದಿ ಬಂತು, ಮಂಗಳೂರು ವಿಶ್ವ ವಿದ್ಯಾಲಯಕ್ಕ ಡಾ. ಎಮ್. ಆರ್. ಗಜೇಂದ್ರಗಡ ಅವರಿಗೆ ಉಪಕುಲಪತಿಗಳಾಗಿ ನೇಮಿಸಲಾಗಿದೆ. ಖರೆ, ಅವರೂ ಎಮ್. ಆರ್. ನಾನೂ ಎಮ್. ಆರ್. ಪಾಪ ಆ ಡೆಕ್ಕನ್ ಹೆರಾಲ್ಡ ಅವರಾಗಲಿ ರಾಜ್ಯಪಾಲರಾಗಲಿ ತಪ್ಪು ಮಾಡಿಲ್ಲ ಮತ್ತ ತಲೀನೂ ಕೆಟ್ಟಿಲ್ಲ. (ತಪ್ಪು ಯ್ಯಾರು ಮಾಡಿದ್ದು ಅಂತ ಬರಿಯೋಹಂಗಿಲ್ಲ, ನೀವೆ ತಿಳಿದುಕೊಳ್ಳಿರಿ). ಆಮ್ಯಾಲೆ, ಬ್ಯಾರೆ ಎಲ್ಲಾಕಡೆ ಓದಿ ಅವರ ಬಗ್ಗೆ ತಿಳಿದುಕೊಂಡೆ. ಅವರೊಬ್ಬ ದೊಡ್ಡ ವಿದ್ವಾಂಸರು, ವಿಶ್ವದೆಲ್ಲೆಡೆ ಸನ್ಮಾನ ಪಡೆದವರು. ಅಂಥಹ ವಿದ್ವಾಂಸರನ್ನು ನನ್ನಂಥ ಎಳೆನಿಂಬೆಯ ಜೊತೆ ಸೇರಿಸಿ ಈ ಹೆಸರು ರಾದ್ಧಾಂತ ಮಾಡಿಬಿಟ್ಟಿತು. ಆಮ್ಯಾಲೆ ತಿಳಿಯಿತು, ಅವರು ಮೊಹಿಯುದ್ದೀನ್ (ಎಮ್) ರೆಹಮತ ಉಲ್ಲ (ಆರ್) ನಾನು ಮುಕುಂದ (ಎಮ್) ರಾಘವೇಂದ್ರ (ಆರ್). ಒಟ್ಟಿನಲ್ಲಿ ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಸಂಬಂಧ. ಅವತ್ತೇ ಡಿಸೈಡ್ ಮಾಡಿಬಿಟ್ಟೆ, ಇನ್ನುಮ್ಯಾಲೆ ನಾ ಗಜೇಂದ್ರಗಡ ಹೆಸರು ಉಪಯೋಗಿಸುವುದಿಲ್ಲ ಅಂತ. ಯ್ಯಾರ ನನ್ನ ಹೆಸರಕೇಳಿದ್ರು, ಮುಕುಂದ ಅಂತ ಹೇಳಲಿಕ್ಕೆ ಸುರುಮಾಡಬಿಟ್ಟೆ.

ಈ ಹೆಸರು ಸಹ ನನ್ನ ಗೆಳ್ಯಾರಬಾಯಗ ಬ್ಯಾರೇನೆ ಆಯಿತು. ತಮಿಳರು ಮುಗುಂದನ್ ಅಂತ, ಉತ್ತರ ಪ್ರದೇಶದವರು ಮುಖುಂದ ಅಂತ, ಪಂಜಾಬಿಗಳು ಮುಕುಂದರ್ ಅಂತ ಮಾಡಿಬಿಟ್ರು, ಮಹಾರಾಷ್ಟ್ರದವರು ಮಾತ್ರ ಯ್ಯಾಕೊ ಬದಲಾಯಿಸಲಿಲ್ಲ. ನನ್ನ ಈ ಹೆಸರೂಸಹ ಎಡವಟ್ಟು ಮಾಡಿತು.

ನಾ ಇನ್ನೂ ಗಜೇಂದ್ರಗಡ ಅಂತ ಕರಿಸಿಕೊಳ್ಳೋವೆಳ್ಯಾಕ್ಕೆ ನನ್ನ ಇಬ್ಬರು ಕಾಲೇಜ್ ಮಾಸ್ತರಗಳು ನನಗ ಮುಕುಂದ ಅಂತೇ ಕರಿತಿದ್ದರು, ಒಬ್ಬರು ಡಾ. ಎಸ್. ಎ. ರಹಮಾನ್ ಅವರು, ಇನ್ನೋಬ್ಬರು ಡಾ. ಟಿ. ಗೋಪಾಲ್ ಅವರು. ರಹಮಾನ್ ಅವರು ಹೊರದೇಶದಲ್ಲಿ ಸೆಟ್ಲ ಆದ್ರು, ಗೋಪಾಲ್ ಅವರು ಹೊರದೇಶದಲ್ಲಿ

ಹೆಸರುಗಳಿಸಿ, ತಾಯಿನಾಡಿನ ಸೇವೆಗೆ ಮರಳಿ ಬಂದರು. ಅವರು ಇಂಗ್ಲೆಂಡ್ ನಿಂದ ಬರುವುದಕ್ಕೂ ನಾನು ಎಮ್.ವ್ಹಿ.ಎಸ್.ಸಿ. ಮುಗಸಿ ಕಾಲೇಜಲ್ಲೇ ನೌಕರಿಗೆ ಸೇರಿಕೊಳ್ಳೊದು ಸರಿಹೋಯಿತು. ನನ್ನ ಮಂದ ಬುದ್ಧಿನೋಡಿ ಕನಿಕರಪಟ್ಟೋ ಏನೋ ನನ್ನ ಮ್ಯಾಲೆ ಬಹಳ ಪ್ರೀತಿ ತೋರಿಸಿ ವಿದ್ಯಾದಾನ ಮಾಡಿದರು. ಮುಂದೆ ಅವರು ಹೆಚ್ಚಿನ ಪೋಸ್ಟಗಳನ್ನು ಪಡೆದುಕೊಳ್ಳುತ್ತ ಕಡೆಗೆ ನಮ್ಮ ಕಾಲೇಜ್ ಮಗ್ಗುಲಿನಾಗಿನ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಗೆ ನಿರ್ದೇಶಕರಾದರು. ಆದರೂ ನಮ್ಮಿಬ್ಬರ ಸಂಬಂಧ ಆಗಲೂ ಈಗಲೂ ಮಾಸಿಲ್ಲ, ಮಾಸಲ್ಲ. ಈಗ ನಾ ಹೇಳತಿರುವ ಪ್ರಸಂಗ ಅಂದ್ರ ಡಾ.ಗೋಪಾಲ್ ಅವರು ನಿರ್ದೇಶಕರಾದ ಘಟಿಸಿದ್ದು.

ನಾ ಅವಾಗ ಭಾರತೀಯ ಪಶುವೈದಕೀಯ ಅನುಸಂಧಾನ ಸಂಸ್ಥೆಯಲ್ಲಿ ವಿಜ್ಞಾನಿಆಗಿ ಕೆಲಸಮಾಡುತಿದ್ದೆ ಜೊತೆಗೆ ಪಿ.ಎಚ್.ಡಿ.ನೂ ಮಾಡುತ್ತಿದ್ದೆ. ಒಂದು ದಿನ ಮಧ್ಯಾನ್ನ ಎಂದಿನಂತೆ ಯಲಹಂಕದಲ್ಲಿದ್ದ ನನ್ನ ಪ್ರಯೋಗಪಶುಗಳನ್ನು ನೊಡಿಕೊಂಡು ಹೆಬ್ಬಾಳಕ್ಕೆ ಬಂದೆ. ನನ್ನ ಗೈಡ್ ಗರಂ ಆಗಿ ಕುಳಿತಿದ್ದ. "ತುಮ್ ಬಹುತ್ ಚಾಲೂ ಆದ್ಮಿ ಹೋ, ಛುಪಾ ರುಸ್ತುಂ ಹೋ" ಅಂತ ಛೇಡಿಸಿದ. ಯಾಕಪ್ಪ ಏನಾಯಿತು ನಿನಗೆ ಅಂತ ಕೇಳಿದರೆ, “ತುಮ್ ನೆದರಲ್ಯಾಂಡ ಕಬ್ ಗಯೇಥೆ?”

ನಾನು ಭಾರತದ ಗಡಿನೇ ದಾಟಿಲ್ಲ, ಇನ್ನ ನೆದರಲ್ಯಾಂಡ ದೂರದ ಮಾತು.

ಇಲ್ಲಾ, ಫೋನ ಬಂದಿತ್ತು, ಇಬ್ಬರು, ಹುಡುಗ ಹುಡುಗಿ, ಮಾತನಾಡಿದರು. ನೀ ನೆದರಲ್ಯಾಂಡಗೆ ಹೋದಾಗ ಅವರು ನಿನಗ ಭಾಳ ಸಹಾಯ ಮಾಡ್ಯಾರ, ನೀನು ನಾ ಹೋಗೆಇಲ್ಲ ಅಂತಿ? ಅವರು ನಮ್ಮ ಭಾರತೀಯರ ಬಗ್ಗೆ ಕೆಟ್ಟ ಭಾವನೆ ತಾಳ್ಯಾರ, ಮೊದಲು ಅದನ್ನ ಸರಿಪಡಿಸು ಅಂತ ಆದೇಶಿಸಿದ.

ಸರಿ, ಆ ಹುಡುಗ–ಹುಡಗಿಗೆ ಫೋನ ಮಾಡಿದೆ, ಅವರು ಮತ್ತ ಅದೇ ಹೇಳಿದ್ರು. ಅವರು ನನಗ ಸಹಾಯ ಮಾಡ್ಯಾರ ನಾ ತಲಿ ತಪ್ಪಿಸಿಕೋಂಡು ತಿರಗಾಡಲಿಕ್ಕೆ ಹತ್ತಿನಿ.

ನೋಡ್ರಿ, ಎಲ್ಲೋ ಏನೋ ತಪ್ಪಾಗೆದ, ನೀವೆಲ್ಲಿದ್ದಿರಿ?

ನಾವು ವೈ ಎಮ್ ಸಿ ಎ ಹೊಸ್ಟಲ ರೂಮ್ ನಂಬರ 104ರಲ್ಲಿ ಇದ್ದೀವಿ.

ಸರಿ, ನಾ ನಿಮ್ಮನ್ನ ಸಂಜಿ 5:30ಕ್ಕ ಬಂದು ಕಾಣತೀನಿ

ಈ ಪರದೇಶಿ ಮಂದಿಗೆ ಟೈಮ ಅಂದರ ಟೈಮ್, ಸರಿಯಾದ ಟೈಮ್ಗೆ ವೈಎಮ್‌ಸಿಎ ಹೊಸ್ಟಲ ತಲುಪಿದೆ.

ನೋಡಿ, ನಾನೆ ಮುಕುಂದ, ನೀವು ನೆದರಲ್ಯಾಂಡನಲ್ಲಿ ಯಾವಾಗ ನನ್ನನ್ನ ಭೇಟಿಮಾಡಿದ್ದೀರಿ. ನನ್ನನ್ನ ನೋಡಿ ಆ ಇಬ್ಬರೂ ತಬ್ಬಿಬ್ಬಾದರು. ನಾವು ನಿನ್ನನಲ್ಲ ಭೇಟಿ ಮಾಡಿದ್ದು. ಆ ಮುಕುಂದ ಬೇರೆ. ಒಂದು ಲಕೋಟೆ ತಗದು ತೋರಿಸಿದರು. ಅದರಲ್ಲಿ ಮುಕುಂದ ಮತ್ತು ಡಾ. ಗೋಪಾಲ್ ಅವರ ಸಂಸ್ಥೆಯ ವಿಳಾಸ ಇತ್ತು. ನನಗ ಜೋರಾಗಿ ನಗು ಬಂತು, ಈ ಮುಕುಂದ ಅನ್ನೋ ಹೆಸರು ಸಹ ಗದ್ದಲ ಮಾಡಿತ್ತು. ಆ ಸಂಸ್ಥೆಯಲ್ಲೂ ಒಬ್ಬ ಮುಕುಂದ ಇದ್ದ. ಆ ಹುಡುಗನಿಗೆ ಕೇಳಿದೆ ಈ ತಪ್ಪು ಹ್ಯಾಂಗ ಆಯಿತು? ಅವ ಹೇಳಿದ. ಆ ಸಂಸ್ಥೆಗೆ ಫೋನ ಮಾಡಿದಾಗ ಅವರು ನನ್ನ ನಂಬರ್ ಕೊಟ್ಟರು. ನನಗ ಸ್ಪಷ್ಟ ಆಯಿತು. ಇವರು ಫೋನ ಮಾಡಿದ್ದನ್ನ ಡಾ.

ಗೋಪಾಲ್ ಅವರ ಕಾರ್ಯದರ್ಶಿಣಿ ತೊಗೊಂಡಿರತಾರ. ಡಾ. ಗೋಪಾಲ್ ಅವರು ನನ್ನನ್ನ ಯಾವಾಗಲೂ ಮುಕುಂದ ಅಂತ ಕರಿಯೋದರಿಂದ, ಅಕಿ ನನ್ನ ನಂಬರ್ ಕೊಟ್ಟಬಿಟ್ಟಾಳ. ಅವರಿಗೆ ಹೇಳಿದೆ, ನಾವು ಭಾರತೀಯರು ಎಂದೂ ಉಪಕಾರವನ್ನು ಮರಿಯುವುದಿಲ್ಲ. ಈಗ ಹೇಳರಿ, ನಿಮಗ ಏನು ಸಹಾಯ ಬೇಕು?

ಆ ಹುಡುಗ ಹುಡಗಿ ಇಬ್ಬರೂ ಕ್ಷಮಾಪಣೆ ಕೇಳಿ ನಮಗ ಮೈಸೂರಿಗೆ ಹೋಗಲು ಸೈಕಲ್ ದಾರಿ ತೋರಿಸಿರಿ. ನೋಡಿ, ನಮ್ಮಪ್ಪ ಈ ರಾಜ್ಯಎಲ್ಲಾ ಸರ್ವೇ ಮಾಡ್ಯಾರ, ನಮ್ಮ ಮನೀಗ ಬರ್ರಿ, ನಿಮಗ ಎಲ್ಲಾ ಮಾಹಿತಿ ಸಿಗತಾವ. ಆಮ್ಯಾಲೆ ಆ ಇನ್ನೊಬ್ಬ ಮುಕುಂದನ ಬಾಸ್ ಗೆ ಫೋನಮಾಡಿ ಮುಕುಂದನ ಬಗ್ಗೆ ಕೇಳಿದೆ. ಆ ಮುಕುಂದ ನೆದರಲ್ಯಾಂಡದಿಂದ ಬಂದು, ಮದುವಿ ಆಗಿ, ಮಧುಚಂದ್ರಕ್ಕೆ ಊಟಿಗೆ ಹೋಗ್ಯಾನ. ಅವರಿಗೆ ಈ ಕಥಿಯಲ್ಲಾ ಹೇಳಿ ಅವರಿಗೂ ನಮ್ಮ ಮನಿಗೆ ಬರ್ರಿ ಅಂತ ಕರದೆ. ಒಟ್ಟಿನಲ್ಲಿ ಸುಖಾಂತ್ಯದಲ್ಲಿ ಮುಗಿಯಿತು.

ಈಗ ನನಗ ಹೇಳ್ರಿ, ಇನ್ನ ನಾ ಯಾವ ಹೆಸರು ಇಟ್ಟುಕೊಳ್ಳಲಿ? ಸುಮ್ಮ ಬೆಂಗಳೂರಿನವರಂಘ ಇನಿಶಿಯಲ್ ಇಟ್ಟುಕೊಂಡು ಬಿಡತೀನಿ. ಎಮ್.ಆರ್.ಜಿ. ಇದೂನು ಗಡಬಡ ಆಗತದ ಅಂತ ಸಂಶಯ ಅದ. ನನ್ನ ತಮಿಳಗೆಳ್ಯಾರು ನನ್ನನ್ನ ತಲೈವರ್ ಎಮ್.ಜಿ.ಆರ್. ಅಂತ ಕರಿಯೋದರಲ್ಲಿ ಸಂದೇಹವೇ ಇಲ್ಲ.

ನೀವೇ ಒಂದು ಹೆಸರನ್ನು ದಯವಿಟ್ಟು ಸೂಚಿಸಿರಿ.

ಬರ್ತಿನಿ, ನಮಸ್ಕಾರ.

■

## ಕವಿ ಸಿದ್ದಲಿಂಗಯ್ಯ ಅಮೆರಿಕಾದಲ್ಲಿ

ಕವಿ ಸಿದ್ದಲಿಂಗಯ್ಯನವರಿಗೆ ಒಂದು ಸಮಾರಂಭಕ್ಕೆ ಅಮೇರಿಕಾಗೆ ಆಹ್ವಾನ. ಅಲ್ಲಿ ಅದೊಂದು 56 ಅಂತಸ್ತುಗಳ ಗಗನಚುಂಬಿ ಕಟ್ಟಡ. ಇವರು ತಲುಪಬೇಕಿದ್ದು 52 ನೇ ಮಹಡಿಗೆ. ಅವರು ಆಫೀಸ್ ತಲುಪಿ ದೊಡ್ಡ ಉಸಿರು ತೆಗೆಯುತ್ತ " ಸ್ವಲ್ಪ ನೀರ್ ಕೊಡಿ ಗುರುಗಳೆ. ಅರ್ಧ ಗಂಟೆ ಮಾತಾಡಿಸ್ಬೇಡಿ..." ಅಂದ್ರಂತೆ. "ಯಾಕ್ ಸಾರ್...!? ಏನಾಯ್ತು...?!" ಅಂತ ಅವರು ಕೇಳಿದ್ದಕ್ಕೆ. "38ನೇ ಫ್ಲೋರಿನಿಂದ ಹತ್ಕೊಂಡ್ ಬಂದಿದೀನಿ ಗುರೂಜಿ. ಸುಸ್ತು." ಅಂದ್ರಂತೆ. "ಯಾಕೇ...?! ಲಿಫ್ಟ್ ಇದೆಯಲ್ಲ...!" ಅವರ ಆತಂಕ. "ಲಿಫ್ಟೇನೊ ಇದೆ ಗುರುಗಳೆ. ಆದ್ರೆ ಅದರ ಪ್ಯಾನಲ್ ಕೂಡ ನಿಮ್ಮ ಬಿಲ್ಡಿಂಗ್ನಷ್ಟೆ ಎತ್ತರವಾಗಿದೆ. ನನಗೆ 38ನೇ ಬಟನ್ ಅಷ್ಟೆ ಎಟಕಿದ್ದು. ಉಸ್ಸಪ್ಪ " ಅಂತ ತಮ್ಮನ್ನು ತಾವೇ ಜೋಕ್ ಮಾಡ್ಕೊಂಡು ಗೋಷ್ಠಿಗಳಲ್ಲಿ ಚಿಂತನೆಗೀಡು ಮಾಡುತ್ತಿದ್ದ ಮೇಷ್ಟು... ಯಾವ ಲಿಫ್ಟ್ ಸಹಾಯವೂ ಇಲ್ಲದೆ ಮೇಲೆ ಹಾರಿಬಿಟ್ರು.

# ಅದೇ ರಾಗ...ಅದೇ ಹಾಡು...

● ನಳಿನಿ. ಟಿ. ಭೀಮಪ್ಪ

ಆ ಬ್ರಹ್ಮ ಅದು ಹೇಗೆ ಗಂಡ_ಹೆಂಡತೀನ ಜೋಡೀ ಮಾಡಿ ಗಂಟು ಹಾಕಿರ್ತಾನೆ ಅರ್ಥಾನೇ ಆಗೋದಿಲ್ಲಪ್ಪ. ಒಬ್ರು ಏತೀ ಅಂದ್ರೆ, ಇನ್ನೊಬ್ರು ಪ್ರೇತೀ ಅಂತಾನೇ ಅನ್ನೋದು. ಗಂಡ ಜೋರಿದ್ರೆ ಹೆಂಡತಿ ಸಾಧು ಇರ್ತಾಳೆ, ಹೆಂಡತಿ ಜೋರಿದ್ರೆ ಗಂಡ ಸಮಾಧಾನ ಇರ್ತಾನೆ. ಇಬ್ರೂ ಜೋರಿದ್ರೆ ಗಂಡ-ಹೆಂಡತಿ ಸಂಬಂಧ ಉಳಿಯುತ್ತಾ ಅನ್ನೋ ಗುಮಾನಿ, ಇಬ್ರೂ ಮೆತ್ತಗೆ ಇದ್ದರೆ ಇವ್ರು ನಿಜವಾಗಿಯೂ ಗಂಡ-ಹೆಂಡತಿನಾ ಅಂತಾ ಸಂಶಯ, ಅಲ್ವಾ?

ನಮ್ಮ ಮನೆಯಲ್ಲಿ ನಾವು ಹಂಗೇನು ಜಾಸ್ತಿ ಜಗಳಾ ಆಡೋದಿಲ್ಲ ಬಿಡಿ. ಏನೋ ಹುಣ್ಣಿಮೆ, ಅಮಾವಾಸ್ಯೆಗೆ ಒಮ್ಮೊಮ್ಮೆ ಆಗುತ್ತಿರುತ್ತದೆ. ನೀ ಜಗಳಗಂಟೀ ಅಂತಾ ಅವರು, ಅವರು ಜಗಳಗಂಟಾ ಅಂತಾ ನಾನು, ಒಟ್ಟು ಯಾರು ಜಗಳಗಂಟರು ಅಂತಾ ಇನ್ನೂ ಖಾತ್ರಿಯಾಗಿಲ್ಲ ನೋಡಿ. ಅವರಿಗೆ ನನ್ನ ಮೇಲೆ ತಕರಾರು ಇರುವುದು ಏತಕ್ಕೆ ಗೊತ್ತಾ? 'ಯೇಹ್ ದಿಲ್ ಮಾಂಗೇ ಮೋರ್' ಎನ್ನುವ ನನ್ನ ತರ್ಕಕ್ಕೆ. ಏನು ಮಾಡೋದು ಹೇಳಿ? ನಾನಿರೋದೇ ಹೀಗೇ ಸ್ವಾಮೀ!!!

ಮೊನ್ನೆ ನಮ್ಮ ತವರು ಮನೆಯವರು ಎಲ್ಲ ಸೇರಿ ಹೊಟೆಲ್ಲಿಗೆ ಹೋಗಿದ್ವಾ!..ಅಲ್ಲಿ ಎಲ್ಲರಿಗೂ ಒಂದೊಂದು ಕುಡಿಯುವ ನೀರಿನ ಬಾಟಲ್ ತಂದಿಟ್ರಾ!...ಹೊಸಾ ಶೇಪು ಇದ್ವಾ!...ಖುಷಿಯಾಗಿಬಿಡ್ತು ನೋಡಿ. ಹೋಟೆಲ್‌ವತಿಯಿಂದ ಅದು ಫ್ರೀ ಅಂತಾ ಗೊತ್ತಾಗುತ್ತಿದ್ದಂತೆ, ನೀರನ್ನೆಲ್ಲ ಗಟಗಟ ಕುಡಿದು ಖಾಲಿಮಾಡಿ ಮತ್ತೊಂದಿಷ್ಟು ಬಾಟಲ್ ತರಿಸಿದ್ದಾಯ್ತು. ಊಟ ಮುಗಿದ ಮೇಲೆ ಬಾಟಲ್ಲನ್ನು ಬ್ಯಾಗಿನಲ್ಲಿ ಹಾಕಿಕೊಳ್ಳೋಕೆ ಹೋದ್ರೆ ಯಜಮಾನರು ಕಣ್ಣಲ್ಲೇ ಗದರುತ್ತಾ ತೊಗೊಂಡು ಏನು ಮಾಡ್ತೀ, ಎಲ್ಲಿ ಹೋದ್ರೂ ಇಂಥಾ ಕೆಲಸ ಬಿಡೋದಿಲ್ಲ, ಅಂತಾ ಗೊಣಗಿದರೂ ಕೇಳಿಸಿಕೊಳ್ಳದೆ, ಏನಾರಾ ಅಂದುಕೊಳ್ಳಲಿ ಅಂತಾ ಒಂದೆರಡು ಕೈಯ್ಯಲ್ಲಿ ಹಿಡಿದೇ ಕೆಳಗಿಳಿದೆ. ಕಾರು ಹತ್ತುವಾಗ ತಂಗಿಗೆ, ನೀನೊಂದೆರಡು ಬಾಟಲ್ ಇಟ್ಕೋಬೇಕೋ ಬೇಡ್ವೋ?, ಎಷ್ಟು ಚೆನ್ನಾಗಿವೆ ಎನ್ನುತ್ತಿದ್ದ ಹಾಗೆ, ಆಕೆ ತನ್ನ ದೊಡ್ಡ ವ್ಯಾನಿಟಿ ಬ್ಯಾಗ್ ಜಿಪ್ ಓಪೆನ್ ಮಾಡಿ ತೋರಿಸಿ, ಶ್!!!...ಎಂದಳು. ನಾಲ್ಕು ಬಾಟಲ್ಲುಗಳು ಅವಿತು ಕುಳಿತಿದ್ದವು, ಜೊತೆಗೆ ಸಾಸ್ ಪ್ಯಾಕೆಟ್ಟುಗಳು, ಟೂಥ್‌ಪಿಕ್‌ಗಳು, ಒಂದ್ನಾಲ್ಕು ಟಿಶ್ಯೂ ಪೇಪರ್ರುಗಳು, ಒಂದರಲ್ಲಿ ಸುತ್ತಿದ್ದ ಬಡೇಸೋಂಪು, ನೋಡಿ ಸಮಾಧಾನ ಆಯಿತು ನೋಡಿ. ಅಲ್ರೀ, ನಾವೇನು ಕದ್ದಕೊಂಡಾ ಬರ್ತೀವಿ?...ಅಷ್ಟು ದುಡ್ಡು ಕೊಟ್ಟಿರುತ್ತೇವೆ, ತಂದ್ರೆ ಏನು ತಪ್ಪೂ ಅಂತೀನಿ. ಇನ್ನು ದೋಸೆ, ಇಡ್ಲಿ, ಪೂರಿಗೆ ಒಂದು ಬಟ್ಟಲು ಎಕ್ಸ್ಟ್ರಾ ಚಟ್ನೀ, ಮಸಾಲಾಪೂರಿ, ಸೇವ್ ಪೂರಿಗೆ ಒಂದಿಷ್ಟು ಎಕ್ಸ್ಟ್ರಾ ಸೇವ್, ಪಾನೀಪೂರಿಯ ಕೊನೆಗೆ ಕೊಡುವ ಖಾಲೀಪೂರಿ ಯಾವುದನ್ನೂ ಬಿಡೋದಿಲ್ಲ ಬಿಡಿ.

ಎಲ್ಲಿಯಾದರೂ ಪ್ರವಾಸಕ್ಕೆ ಹೋದಾಗ ಹೊಟೆಲ್ ರೂಮುಗಳಲ್ಲಿ ಉಳಿದುಕೊಂಡಾಗಲೂ ಅಷ್ಟೇ. ರೂಮು ಖಾಲಿ ಮಾಡುವಾಗ ಅವರು ಕೊಟ್ಟಿರುತ್ತಿದ್ದ ಸೋಪು, ಶಾಂಪೂ, ಬ್ರಶ್, ಪೇಸ್ಟು, ಬಾಚಣಿಗೆ ಎಲ್ಲ ಮರೆಯದ ಹಾಗೆ ಬ್ಯಾಗಿನಲ್ಲಿ ಹಾಕಿಕೊಂಡು ಬರುತ್ತೇನೆ. ನೀ ಹಚ್ಚೋ ಬ್ರ್ಯಾಂಡೇ ಬೇರೆ, ಅವನ್ನೆಲ್ಲ ಯಾಕೆ ತರ್ತೀಯಾ ಅಂತಾ ವರಾತ ಹಚ್ತಾರೆ. ಶಾಂಪೂ, ಸೋಪುಗಳು, ಗ್ಯಾಸ್ ಕಟ್ಟೆ

ಒರೆಸೋಕೋ, ಕೈತೊಳೆಯೋಕೋ, ಏನೋ ಒಂದಕ್ಕೆ ಉಪಯೋಗ ಮಾಡಿಕೋತೀವಪ್ಪಾ, ಟೂಥ್‌ಬ್ರಶ್ ಅಂತೂ ಬಾಚಣಿಗೆ, ಡಬ್ಬಿ ಮುಚ್ಚುಳದಂತಹವನ್ನ ಕ್ಲೀನ್ ಮಾಡೋಕಾಗುತ್ತೆ, ಇವ್ರಿಗೆಲ್ಲಿ ಅದು ಅರ್ಥವಾಗುತ್ತೆ ಬಿಡಿ. ಆ ವಿಮಾನದಲ್ಲಿ ಕೊಡೋ ಹಾಲಿನಪುಡಿ, ಸಕ್ಕರೆ, ಪೆಪ್ಪರ್, ಸಾಲ್ಟ್ ಪ್ಯಾಕೆಟ್ಸ್, ಚಮಚ, ಸಣ್ಣ ನೀರಿನ ಬಾಟಲ್, ಟೀಬ್ಯಾಗ್, ಪುಟ್ಟ ನೀರಿನ ಬಾಟಲ್ ಯಾವುದೂ ಬಿಡಲ್ಲಪ್ಪ. ಅಲ್ರೀ, ನಮಗೆ ಕೊಟ್ಟಿದ್ದನ್ನ ನಾವು ತಂದ್ರೆ, ಇವರಿಗೇನಾಗುತ್ತೇ ಅಂತೀನಿ?

ಎಲ್ಲದಕ್ಕೂ ಬೈತಾರಪ್ಪಾ. ಬಟ್ಟೆ ಅಂಗಡಿಗೆ ಹೋದಾಗ ಬಟ್ಟೆ ಕವರಿಗೆ ಹಾಕಿ ಕೊಟ್ಟ ಮೇಲೆ, ಇನ್ನೊಂದೆರಡು ಎಕ್ಸ್ಟ್ರಾ ಕವರ್ ಕೊಡಿ ಅಂತಾ ಕೇಳಿ ತೊಗೊಳ್ಳದಿದ್ದರೆ ಹೇಗೆ ಹೇಳಿ. ಒಡವೆ ಅಂಗಡಿಗೆ ಹೋದಾಗಲಂತೂ ಅಂಗಡಿಯವನನ್ನು, ಇಷ್ಟು ಖರೀದಿ ಮಾಡಿದ್ದೇವೆ, ಏನು ಗಿಫ್ಟ್ ಇಲ್ವಾ ಅಂತಾ ದಬಾಯಿಸಿ, ಕಾಡಿಸಿಯಾದರೂ ಪರ್ಸು, ಬ್ಯಾಗು, ಖಾಲಿ ಒಡವೆ ಡಬ್ಬಿಗಳು, ಕಿವಿ ಓಲೆಗೆ ಹಿಂದೆ ಸೇರಿಸುವ ಗುಂಡಿಗಳು, ಏನೋ ಒಂದು ತೆಗೆದುಕೊಂಡು ಬಂದರೇನೇ ಸಮಾಧಾನ. ಹಣ್ಣು, ತರಕಾರಿಯಂತೂ ಅವರು ಹೇಗಾದರೂ ತೂಗಲಿ, ಅದರ ಮೇಲೆ ಒಂದೆರಡು ಹಾಕಿಸಿಕೊಂಡು ಬರದವರು ಯಾರಾದರೂ ಇದ್ದಾರೇನ್ರೀ?. ಹಾಗೇ ವ್ಯಾಪಾರ ಮಾಡುತ್ತಾ ಒಂದು ಗಜ್ಜರಿನೋ, ಸೌತೇಕಾಯಿನೋ, ಬಟಾಣಿ ಸುಲಿದೋ ಬಾಯಿಗೆ ಹಾಕಿ ಕರಕರ ಕಡಿಯುವಾಗ, ಇವರು ನನ್ನನ್ನು ನೋಡಿ ಹಲ್ಲು ಹಲ್ಲು ಕಡಿಯುತ್ತಿರುತ್ತಾರೆ. ರುಚಿ ನೋಡುವ ನೆಪದಲ್ಲಿ ದ್ರಾಕ್ಷೀ, ಪೇರೂ, ಮಾವಿನ ಹಣ್ಣಿನ ಹೋಳು ಎಲ್ಲವನ್ನೂ ಚಪ್ಪರಿಸುವಾಗ, ಅವುಗಳನ್ನು ತೊಳೆದಿರುವುದಿಲ್ಲಾ ಏನಿಲ್ಲಾ, ಎಲ್ಲಾ ತಿಂತೀಯಾ, ಹೈಜಿನ್ ಇರಬೇಕು ಎನ್ನುವ ವಾದ ಅವರದು. ಅದಕ್ಕೇ ಈಗ ಬರೀ ಮಾಲ್‌ಗಳಿಗೆ ಮಾತ್ರ ಕರೆದುಕೊಂಡು ಹೋಗ್ತಾರೆ. ಅಲ್ಲಿ ಗುಲಗಂಜಿಯಷ್ಟು ಹೆಚ್ಚಿಗೆ ಇದ್ದರೂ ಚಾರ್ಜ್ ಮಾಡ್ತಾರಪ್ಪಾ, ಅಲ್ಲಿ ಹೀಗೆಲ್ಲ ತಿನ್ನೋದಕ್ಕೂ ಆಗಲ್ಲ, ಅದಕ್ಕೆ ನಂಗೆ ಅವು ಇಷ್ಟ ಆಗಲ್ಲ ನೋಡಿ.

ಇನ್ನು ಮನೆಯಲ್ಲಿ, ಕೆಲಸದಾಕೆಗೆ ಪಾತ್ರೆಗಳು ಕಡಿಮೆ ಇದ್ದ ದಿನ ಡಬ್ಬಿ ಮುಚ್ಚಳಗಳು, ಗ್ಯಾಸ್ ಸ್ಟ್ಯಾಂಡ್‌ಗಳು, ಅದರ ತಟ್ಟೆಗಳು, ಏನೂ ಸಿಗದಿದ್ದರೆ ಒಂದ್ನಾಲ್ಕು ಕಿರಾಣಿ ಸಾಮಾನು ತುಂಬಿರುವ ಡಬ್ಬಿಗಳನ್ನಾದರೂ ಸುರುವಿ, ಖಾಲಿ ಮಾಡಿ ಕೊಡುತ್ತೇನೆ. ಒಟ್ಟು ಮುಸುರೆ ಪಾತ್ರೆ ಹಾಕುವ ಟಬ್ ತುಂಬಬೇಕು ಅಷ್ಟೇ. ಒಗೆಯುವ ಬಟ್ಟೆಗಳೂ ಸಹಾ ದೊಡ್ಡದೊಂದು ಬಕೀಟ್ ಆಗಲಿಲ್ಲವೆಂದರೆ ಏನೋ ಕಸಿವಿಸಿ. ದಿಂಬ್ ಕವರ್‌ಗಳು, ಕರ್ಚೀಫ್, ಟವೆಲ್ಲುಗಳು ಎಲ್ಲವನ್ನೂ ಹುಡುಕಿ ಹುಡುಕಿ ಹಾಕೋದೇ. ಅಯ್ಯೋ ನಿನ್ನೆ ತಾನೇ ಹೊಸಾ ಟವೆಲ್ ಒರೆಸೋಕೆ ತೆಗೆದಿದ್ದೆ, ಆಗ್ಲೇ ಒಗೆಯೋಕೆ ಹಾಕಿಬಿಟ್ಯಾ?...ನಿಮ್ಮಮ್ಮನಿಗೆ ಕೆಲಸದವಳಿಗೆ ಕೊಟ್ಟ ದುಡ್ಡು ಸರಿಯಾಗಿ ವಸೂಲು ಮಾಡದಿದ್ದರೆ ಉಂಡನ್ನ ಕರಗುವುದಾದರೂ ಹೇಗೇಳು ಎಂದು ಮಕ್ಕಳ ಮುಂದೆ ಅರ್ಚನೆ ಮಾಡುತ್ತಿರುತ್ತಾರೆ.

ಇದೇ ಲಾಸ್ಟ್...ನೀ ಹೀಗೆಲ್ಲಾ ಮಾಡುವುದಿದ್ದರೆ ನನ್ನ ಜೊತೆ ಬರಬೇಡಾ, ಮರ್ಯಾದೆ ತೆಗೆದುಬಿಡ್ತೀಯಾ ಅಂತಾ ಪಾಪ! ಪದೇ ಪದೇ ವಾರ್ನಿಂಗ್ ಕೊಟ್ಟೇ ಹೊರಗೆ ಕರ್ಕೊಂಡು ಹೋಗ್ತಾರೆ. ಹೂಂ, ಹೂಂ ಅಂತಾ ಹೂಂಗುಡುತ್ತಾ, ಹೋಗೋ ತನಕ ನಾನೂ ಸಹ ವಿಧೇಯಳಾಗೇ ಇರ್ತೀನಿ. ನಂತರ ಅದೇ ರಾಗ, ಅದೇ ಹಾಡು... ಎಲ್ಲಿ ಹೋದರೂ ಹೋಗ್ತಾ ಖುಷಿಯಾಗಿಯೇ ಹೋಗ್ತೀವಿ, ಬರ್ತಾ ಮಾತ್ರ ಜಗಳವಾಡುತ್ತಲೇ ಬರೋದು. ನೀವೂ ಹಂಗೇ ಏನ್ರೀ??? ■

# ಕೊರೊನಾದಲ್ಲಿ ಕ್ಷೌರ ಪುರಾಣ

**● ವಿವೇಕಾನಂದ ಕಾಮತ್**

ಕೊರೊನಾ ಎಂಬ ಕಣ್ಣಿಗೆ ಕಾಣದ ವೈರಾಣುವೊಂದು ಇಡೀ ಪ್ರಪಂಚದಾದ್ಯಂತ ಸೃಷ್ಟಿಸಿದ ತಲ್ಲಣ, ಆರೋಗ್ಯ, ಆರ್ಥಿಕ ಸಾಮಾಜಿಕ ಚಟುವಟಿಕೆಗಳನ್ನೆಲ್ಲ ಏರುಪೇರು ಮಾಡಿದ್ದು ಸಾಲದೆಂಬಂತೆ ನಮ್ಮನ್ನು ನಮ್ಮ ಮನೆಯ ಒಳಗೇ ದಿಗ್ಬಂಧನ ಹಾಕಿಸಿ ಮಂಡಲದ ಮೇಲೆ ಕೂರಿಸಿದೆ. ಕರೋನಾ ಎಂದರೇನೇ ಕರ್ಣ ಕಠೋರವಾದ ಶಬ್ಧವೆಂಬಷ್ಟು ರೇಜಿಗೆ ಉಂಟಾಗಿರುವ ಈ ಸಂದರ್ಭದಲ್ಲಿ ಅದು ತಂತಮ್ಮ ಕೆಲಸಗಳನ್ನು ಹಗುರ ಮಾಡಿಕೊಳ್ಳಲು ಪರವಾಲಂಬಿಯಾಗಿರುವ ನಮ್ಮಂಥ ಮನುಷ್ಯರಿಗೆ ಅನಿವಾರ್ಯವಾಗಿ ಸ್ವಾವಲಂಬನೆಯ ಪಾಠ ಕಲಿಸಿದೆ. ಇಸ್ತ್ರಿ, ಆಹಾರ, ಒಗೆತದಂಥ ಕೆಲಸಗಳನ್ನು ಹೇಗೋ ನಾವೇ ಸಂಭಾಳಿಸಬಹುದಾದರೂ ಈ ಕ್ಷೌರವನ್ನು ಹೇಗಪ್ಪಾ ಮಾಡಿಕೊಳ್ಳುವುದೆಂದು, ಹುಲುಸಾದ ಬೆಳೆ ಬೆಳೆದಂತೆ ತಲೆಕೂದಲು ಬೆಳೆದಿರುವ ಅದೇ ತಲೆಯನ್ನು ಕೆರೆದುಕೊಳ್ಳಬೇಕಾದಂಥ ಚಿಂತೆ ಗಂಡಸರಿಗೆ . ಅದರಲ್ಲೂ ಸೂರ್ಯದೇವ ಸದಾ ಪ್ರಸನ್ನಚಿತ್ತನಾಗಿರುವ ಈ ಕರಾವಳಿಯ ಬೆವರುಮಯ ಸೆಕೆಗಾಲದಲ್ಲಿ ಯಾವ ಹೇರ್ ಆಯಿಲ್‌ನಂಥ ಬಳಕೆಯ ಪೋಷಣೆಯಿಲ್ಲದೇ ಹೋದರೂ ದಟ್ಟವಾಗಿ ಬೆಳೆವ ತಲೆಗೂದಲನ್ನು ನಿರ್ವಹಿಸುವುದು ಸುಲಭದ ಮಾತಲ್ಲ ಬಿಡಿ. ಕ್ಷೌರವಿಲ್ಲದೇ ನಮಗೆ ನಾವೇ ಅಪರಿಚಿತರಂತೆ ಕಾಣುತ್ತಿರುವ ಇಂಥ ಕೊರೋನಾ ಕಾಲದಲ್ಲಿ, ಕೂದಲು ಡೈ ಮಾಡಿ ಒಪ್ಪವಾಗಿ ಬಾಚಿಕೊಂಡು ನಗುಮುಖ ಹೊತ್ತು ನವನವೀನ ಫೋಟೋಗಳನ್ನು ಫೇಸ್ ಬುಕ್ ನಲ್ಲಿ ಮಾಡಿಕೊಳ್ಳಲಾಗದೇ, ಇರುವ ಗೀಳು ಬಿಡಲಾಗದೇ ಬರೀ ಹಳೇ ಫೋಟೋಗಳನ್ನೇ ಹಾಕಿ ಲೈಕು ಗಿಟ್ಟಿಸಿಕೊಳ್ಳುತ್ತಿರುವ ಮರ್ಮ ಇದೂ ಒಂದು ಎಂದು ಬಿಡಿಸಿ ಹೇಳಬೇಕಾಗಿದ್ದಿಲ್ಲ. ಇರುವ ಅದೇ ಮುಖ ಒಪ್ಪವಾಗಿ ಕಾಣಬೇಕಾದರೆ ಕೂದಲು ಎಂಥ ಮಹತ್ವದ ಪಾತ್ರ ವಹಿಸುತ್ತದೆ ಎಂದು (ಇಲ್ಲದವರಿಗೆ ಆ ಚಿಂತೆ ಇಲ್ಲ , ಬಿಡಿ) ಈಗ ಮನವರಿಕೆಯಾಗಿತ್ತು. ಏ.ಸಿ. ಮತ್ತಿತರ ಸುಸಜ್ಜಿತ ಸೆಲೂನ್‌ಗಳನ್ನೇ ಆಶ್ರಯಿಸುವ ನಾವು ಈಗ ಯಾವ ಸಾಮಾನ್ಯ ನುರಿತವ ಈ ಕೆಲಸಕ್ಕೆ ಸಿಕ್ಕರೂ ಸಾಕಿತ್ತು ಎಂದು ಪರಿತಪಿಸುವ ಪರಿಸ್ಥಿತಿ ಒದಗಿದೆ.

ಅದೂ ಇಲ್ಲದಾಗ ಸ್ವಯಂ ನಾನೇ ಮಾಡಿಕೊಳ್ಳೋಣವೆಂದು , ಮಾಸ್ಕ್ ಧರಿಸಿಕೊಂಡು ಟ್ರಿಮ್ಮರ್ ತರಲೆಂದು ಸಮೀಪದ ಅಂಗಡಿಗೆ ಹೋಗಿ, ಸ್ಟಾಕ್ ಇಲ್ಲವೆನಿಸಿಕೊಂಡು ಮನೆಗೆ ಮರಳುವಾಗ, ನಮ್ಮ ನೆರೆಮನೆಯಾತ ಬಾಯಿಗೆ ಮಾಸ್ಕ್ ಧರಿಸಿ ತಲೆಗೆ ಕಿವಿ ಸಹಿತ ದೊಡ್ಡ ಬೈರಾಸು ಸುತ್ತಿಕೊಂಡು ಕಣ್ಣು ಮಾತ್ರ ಹೊರಗಿನ ಪ್ರಪಂಚಕ್ಕೆ ತೆರೆದುಕೊಂಡಂತೆ ಧರಿಸಿದ್ದನ್ನು ಕಂಡು ವಿಚಿತ್ರವೆನಿಸಿತ್ತು. ಬಾಯಿಗೆ ಮಾಸ್ಕ್ ಕಡ್ಡಾಯವೇನೋ ಸರಿ, ತಲೆಯನ್ನೂ ಮರೆಮಾಚಬೇಕಾದ ಪ್ರಸಂಗವೇನೋ, ಅದರ ಮೂಲಕ ಅದಾವ ವೈರಸ್ ಹರಡುತ್ತದೋ ಎಂದು ಕೇಳೋಣವೆನಿಸಿ ಬಾಯ್ತೆರೆದಾಗ ಆತ ಉದ್ದೇಶಪೂರ್ವಕವಾಗಿ ತನ್ನ ಮನೆಯೊಳಗೆ ನುಣುಚಿಕೊಂಡನೇನೋ ಎಂದು ಭಾಸವಾಗಿತ್ತು ನನಗೆ.

ಮೊದಲೇ ಒಳಗೆ ಏನೇ ಇರದೇ ಹೋದರೂ ( ನಮ್ಮನೆ ಗ್ರಹ ಮಂತ್ರಿಗಳ ಪ್ರಕಾರ), ತಲೆ ಮೇಲೆ ಭಾರ ಹೊತ್ತವರಂತೆ ಆಡುವ ನಾವು, ಈಗ ನಿಜವಾಗಲೂ ಈ ಆದಿಮಾನವರಂತೆ ಇಷ್ಟಿಷ್ಟುದ್ದ ಹಿಪ್ಪಿ ಕೂದಲನ್ನು ಬಿಟ್ಟುಕೊಂಡು ಇರಲು ಸಾಧ್ಯವಾಗದೇ ಇದಕ್ಕೊಂದು ಪರಿಹಾರಾರ್ಥವಾಗಿ ಮನೆ ಗ್ರಹ ಮಂತ್ರಿಗಳಿಗೆ ಸ್ವಲ್ಪ

ಈ ತಲೆಭಾರವನ್ನು ಕಮ್ಮಿಗೊಳಿಸುವ ಕ್ವಾರಂಟೈನ್ ಚಟುವಟಿಕೆಯನ್ನು ನೀಡಿದೆ. ಯಾವಾಗ ಅನುಷ್ಕಾ, ಕೊಹ್ಲಿ ಕೂದಲು ಟ್ರಿಮ್ ಮಾಡಿದ ಫೋಟೋ ವೈರಲ್ ಅಯಿತೋ ನಮ್ಮ ಮನೆಯಲ್ಲೂ ಅದೇನೋ ಉತ್ಸಾಹ ಮೂಡಿ ನಮ್ಮ ಕ್ಷೌರ ಯಜ್ಞದ ಕೆಲಸಕ್ಕೆ ನಮ್ಮನೆ ಗ್ರಹಮಂತ್ರಿಗಳು ಕೈ ಹಾಕಿಯೇ ಬಿಟ್ಟರು. ಈ ಗ್ರಹಮಂತ್ರಿಗಳ ಸಂಭ್ರಮ ಕಂಡು ಅದೇಕೋ ನನ್ನ ಆರನೆಯ ಇಂದ್ರಿಯ ಕಳವಳ ಪಡುತ್ತಲೇ ಇತ್ತು. ಚಿಕ್ಕ ವಯಸ್ಸಿನಲ್ಲಿ ಚೌಲ ಮಾಡಿಸಿಕೊಂಡ ನೆನಪಂತೂ ಇರದ ನನಗೆ ಈಗ ಈ ವಯಸ್ಸಿನಲ್ಲಿ ಹೀಗೆ ಚೌಲ ಮಾಡಿಸಿಕೊಳ್ಳಬೇಕಾದ ಪ್ರಸಂಗ ಒದಗಬಹುದೆಂದು ಯಾರು ಊಹಿಸಿದ್ದರು..ಹೇಳಿ..?! ಅವರ ಉತ್ಸಾಹಕ್ಕೆ ಬ್ರೇಕ್ ಕೊಟ್ಟು, ಯೂಟ್ಯೂಬ್ ತೆರೆದು ಹೇಗೆ ಕತ್ತರಿ ಆಡಿಸಬೇಕೆಂದು ತೋರಿಸ ಹೊರಟಾಗ , ಜೇಬಿಗೆ ಕತ್ತರಿ ಹಾಕಿ ಅಭ್ಯಾಸ ಇರುವಾಗ ಇದೇನು ಮಹಾ ಎಂಬಂತೆ ಒಂದು ಅಸಡ್ಡೆಯ ನಗೆ ಬೀರಿದರು. ನಾನು ವಿಧಿಯಿಲ್ಲದೇ ನನ್ನ ಜುಟ್ಟು ಅವರ ಕೈಗೊಪ್ಪಿಸಿ ತಪಸ್ಸಿಗೆ ಕುಳಿತಂತೆ ಮೌನವಾಗಿ ಕುಳಿತೇ ಬಿಟ್ಟೆ. ನುರಿತ ಸೌಂದರ್ಯ ತಜ್ಞೆಯಂತೆ ನನ್ನ ತಲೆಕೂದಲು ಬಾಚಿ ಕತ್ತರಿ ಪ್ರಯೋಗ ಆರಂಭಿಸಿಯೇ ಬಿಟ್ಟರು. ಆಗ ಗ್ಯಾಸ್ ಒಲೆಯ ಮೇಲಿದ್ದ ಕುಕ್ಕರ್ ಸೀಟಿ ಹೊಡೆದಾಗ ಅವರಿಗೆ ಅಡುಗೆ ಮನೆ ಕೂಗಿ ಕರೆಯಿತು. ನನ್ನ ಕ್ಷೌರ, ವಿರಾಮದ ನಂತರ ಎಂದು ಘೋಷಣೆ ಕೂಗಿ ಅತ್ತ ನಡೆದರು . ಹೀಗೇ ಮೂರ್ನಾಲ್ಕು ವಿರಾಮಗಳು ನಡೆದು, ನಾನು, ನನಗೇ ಉಂಟಾದ ಅಡಚಣೆಗಾಗಿ ಅವರನ್ನು ಅನ್ಯ ವಿಧಿಯಿಲ್ಲದೇ ಅನಿವಾರ್ಯವಾಗಿ ಕ್ಷಮಿಸಬೇಕಾಯಿತು. ಮಧ್ಯಮಧ್ಯದಲ್ಲಿ ಅಮ್ಮನ ಕೈಗೆ ಪ್ರಯೋಗ ಪಶುವಾಗಿ ಕುಳಿತ ನನ್ನೆಡೆಗೆ ಮಕ್ಕಳು ಅನುಕಂಪದಿಂದ ನೋಡಿದ್ದು, ಬಹುಶ: ಜೀವಿತಾವಧಿಗೋ, ಶತಮಾನಕ್ಕೋ ಒಮ್ಮೆ ಬರಬಹುದಾದಂಥ ಇಂಥ ಸೀನ್ ಮತ್ತೆ ನೋಡಲು ಸಿಗಲಾರದೇನೋ ಎಂದು ಮನವರಿಕೆಯಾಗಿ ಸವಿನೆನಪಾಗಿ ಕೂಡಿಡಲು ಮೊಬೈಲ್‌ನಲ್ಲಿ ಫೋಟೋ ಕ್ಲಿಕ್ಕಿಸಿಕೊಂಡವು. ಅವರ ಕೈಯ್ಯಲ್ಲಿದ್ದ ಕತ್ತರಿ ಕೂದಲಿನೊಂದಿಗೆ ನನ್ನ ನುಣುಪಾದ ಚರ್ಮವನ್ನೂ ಕೆಲವೆಡೆ ಹರಿದು, ನೋವಿನಿಂದ ಚೀರಿದಾಗ, 'ಉಳಿದದ್ದು ಬೇಕಾದ್ರೆ ನೀವೇ ಮಾಡಿಕೊಳ್ಳಿ.. ನನ್ನ ರಾಶಿ ಕೆಲಸದ ಮಧ್ಯೆ ಇಷ್ಟು ಮಾಡಿದರೂ ನಿಮಗೆ ಬೆಲೆ ಇಲ್ಲ' ಎನ್ನುವ ಧಮ್ಕಿ ಮಧ್ಯೆ ಅವಡುಗಚ್ಚಿ ಕುಳಿತು ಅಂತೂ ಕ್ಷೌರ ಪುರಾಣ ಮುಗಿಸುವ ಹೊತ್ತಿಗೆ ಟಿ.ವಿ.ಯಲ್ಲಿ ರಾಮಾಯಣ, ಮಹಾಭಾರತದಂಥ ಪುರಾಣಗಳ ಪ್ರಸಾರವೂ ಮುಗಿದಿತ್ತು. ಸ್ನಾನ ಮುಗಿಸಿ ಬಂದು ನನ್ನ ಮೇಲಿನ ಅನುಕಂಪದಿಂದ ನಾನೇ ಕನ್ನಡಿ ನೋಡಿಕೊಂಡೆ. ಅಲ್ಲಲ್ಲಿ ಮರುಭೂಮಿಯಂತೆ ತಲೆಯ ಮೇಲೆ ಕಾಣುತ್ತಿದ್ದ ಬುರುಡೆಯನ್ನು ಕಂಡು ನಗಬೇಕೋ ಅಳಬೇಕೋ ತೋಚದೇ ಇಂಗು ತಿಂದ ಮಂಗನಂತಾದ ಸ್ಥಿತಿ. ಪ್ರತೀಸಲ ಕ್ಷೌರದಂಗಡಿಗೆ ಹೋದಾಗಲೂ ಹಣ ಕೊಡುತ್ತೇವೆ ಎಂಬ ಒಂದು ಸಣ್ಣ ಅಹಂಕಾರದಿಂದಲೋ, ಅಥವಾ ಅದೊಂದು ಸಣ್ಣ ಕೆಲಸ ಎಂಬ ತಿರಸ್ಕಾರವೋ, ಕ್ಷೌರ ಮಾಡಿಸಿಕೊಂಡ ಬಳಿಕ ಏನೋ ಒಂದು ಅತೃಪ್ತಿಯಿಂದಲೇ ಎದ್ದು ಬರುವ ನನಗೆ ಅವರ ಬೆಲೆ ಈಗ ಮನವರಿಕೆಯಾಗಿತ್ತು.

ಮರುದಿನ ಹೊರಗೆ ಹೋಗುವಾಗ ತಲೆಯ ನಕ್ಷೆ ಮರೆಮಾಚಲು ನಾನು ಅನಿವಾರ್ಯವಾಗಿ ಬೈರಾಸು ಸುತ್ತಿಕೊಳ್ಳಬೇಕಾಯಿತು. ಮನೆಯಿಂದ ಹೊರಬಂದಾಗ ಅದೇ ನೆರೆಮನೆಯಾತ ನನ್ನ ತಲೆ ಮೇಲಿನ ಮುಂಡಾಸು ಕಂಡು ಅರ್ಥವತ್ತಾದ ನಗೆ ಬೀರಿ ಏನೋ ಕೇಳಲು ಬಂದಾಗ ನುಣುಚಿಕೊಳ್ಳುವ ಸರದಿ ನನ್ನದಾಗಿತ್ತು.

■

# ಪಾದುಕಾ ಪ್ರಕರಣ

● **ಸಾಯಿಲಕ್ಷ್ಮಿ**

ಪಾದದ ರಕ್ಷಣೆಗಾಗಿ ಜನ್ಮತಳೆದಿರುವ ಪಾದರಕ್ಷೆ ಪುರಾಣ ಕಾಲದಿಂದಲೂ ಪ್ರಸಿದ್ಧಿ ಪಡೆದಿದೆ. ನಾವು ತ್ರೇತಾಯುಗಕ್ಕೆ ಹಿಮ್ಮುಖದ ಪ್ರಯಾಣ ಕೈಗೊಳ್ಳುವುದು ಸಾಧ್ಯವಾದರೆ, ಅದು ರಾಮಾಯಣದ ಸಂದರ್ಭ, ಮಲತಾಯಿ ಕೈಕೇಯಿಯ ಅಪೇಕ್ಷೆಯಂತೆ, ರಘುರಾಮ ಪತ್ನಿಸಮೇತನಾಗಿ, ವನವಾಸಕ್ಕೆ ನಡೆದಿದ್ದಾನೆ. ಕೈಕೇಯಿ ಪುತ್ರರತ್ನ ಭರತ, ತ್ಯಾಗಿ ಅಣ್ಣನ ಅನುಪಸ್ಥಿತಿಯಲ್ಲಿ ಅಯೋಧ್ಯೆಯ ರಾಜ್ಯಭಾರದ ಹೊಣೆ ಮನಸಿಲ್ಲದ ಮನಸ್ಸಿನಿಂದ ಹೊತ್ತಿದ್ದಾನೆ. ಆಡಳಿತಯಂತ್ರಕ್ಕೆ, ರಾಮನ ಉಪಸ್ಥಿತಿಯ ಸ್ಪರ್ಶ ನೀಡಲು ಕಾತುರನಾದ ಭರತ, ಅಡವಿಗೆ ತೆರಳಿ ಅಣ್ಣನ ಮನವೊಲಿಸಿ, ರಾಜಾರಾಮನ ಪಾದುಕೆಗಳನ್ನು ಹೊತ್ತು ತಂದು, ಶ್ರದ್ಧಾಭಕ್ತಿಪೂರ್ವಕವಾಗಿ ಅದಕ್ಕೆ ಸಿಂಹಾಸನದ ಮೇಲೆ ಸ್ಥಾನ ಕಲ್ಪಿಸಿದ್ದಾನೆ. ಅವನ ನಡೆನುಡಿಗೆ ಅದು ದಿಕ್ಸೂಚಿಯಂತೆ. ಇದು ಸನ್ನಿವೇಶ. ಇಲ್ಲಿ ಭರತ, ಒಂದು ಕ್ಷಣದ ವಿವೇಚನೆಗೂ ಒಳಗಾಗಲಿಲ್ಲ. ತಾನು ಪಾದುಕೆ ಬೇಡಿ ಪಡೆದರೆ, ಕಾನನದಲ್ಲಿ ಸಂಚರಿಸುವ ರಘುವರನ ಸುಕೋಮಲಪಾದಗಳ ಗತಿಯೇನು? ಎಂದು. ಬಹುಶಃ ಕತೆಗಾರ ವಾಲ್ಮೀಕಿ, ರಾಮನ ಬಳಿ ಪರ್ಯಾಯ ಪಾದರಕ್ಷೆ ಇದ್ದುದನ್ನೋ ಇಲ್ಲದ್ದನ್ನೋ ಸಂದರ್ಭಕ್ಕೆ ಅಳವಡಿಸಲು, ಮರೆತಿರಬಹುದೇ? ನಾನಂತು ಯಾವ ಪುರಾಣ ಪುಣ್ಯಕತೆಗಳಲ್ಲೂ, ಈ ಪ್ರಸಂಗದ ಪ್ರಸ್ತಾಪ, ಉಪಕತೆಯ ರೂಪದಲ್ಲೂ, ಕೇಳಿದ ನೆನಪಿಲ್ಲ,

ಪ್ರಿಯ ಓದುಗರೇ.

ಈಗ ವಿವರಿಸಿದ್ದು ರಾಮಾಯಣದ ನಾಯಕನ ಕಥೆಯಾದರೆ ನಮ್ಮ ಗೃಹನಾಯಕ ಆಧುನಿಕ ಜಗತ್ತನ್ನು ಪ್ರತಿನಿಧಿಸುವ ಕೋಸಲರಾಂ ಖುದ್ದು ಸವಿದ,ಸ್ವಾರಸ್ಯದ ಅನುಭವ ಇಗೋ ಇಲ್ಲಿದೆ. ಅದೊಂದು ಸಂಗೀತ ಕಾರ್ಯಕ್ರಮ. ಸಂಜೆ ಏರ್ಪಡಿಸಲಾಗಿತ್ತು. ಹಿಂದುಸ್ಥಾನಿ ಪದ್ಧತಿಯ ಪ್ರಖ್ಯಾತ ಗಾಯಕ 'ಮಲ್ಹಾರ' ರಾಗದ ಕರ್ಣಸಮಾರಾಧನೆಯಲ್ಲಿ ಆವೇಶಭರಿತರಾಗಿ ಮುಳುಗಿ ಹೋದ, ನಾದಾನುಸಂಧಾನದ ತನ್ಮಯ ಸ್ಥಿತಿ. ಆಗ ಒಬ್ಬ ಭಿಕ್ಷುಕನಂತೆ ತೋರುವ ಪರಮಾತ್ಮನನ್ನು ಸಂಪೂರ್ಣವಾಗಿ ತನ್ನೊಳಗೆ ಸೆಳೆದು ಕೊಂಡವನ ಪ್ರವೇಶವಾಗೆ ಅದನ್ನು ಮೊದಲು ಗಮನಿಸಿದವರು ಕೋಸಲರಾಂ. ನನ್ನ ಗಮನವನ್ನು ಅವನತ್ತ ತಿರುಗಿಸುವಲ್ಲಿ ಪತಿರಾಯರು ಯಶಸ್ವಿಯಾದರು. ಅವನೋ ಸಂಗೀತದಲ್ಲಿ ಪೂರ್ಣ ಮಗ್ನನಂತೆ ಕಾಣುತ್ತಿದ್ದ. ಕೆದರಿದ ತಲೆಗೂದಲು, ಬೋಳಿಸದ ಗಡ್ಡ, ರಂಗೇರಿದ ಕಣ್ಣುಗುಡ್ಡೆ, ಮಲಿನ ವಸ್ತ್ರಧಾರಿಯಾಗಿದ್ದ ಅವ ನಡುನಡುವೆ ತಲೆದೂಗುತ್ತಾ ತೋಚಿದಂತೆ ತಲೆಯಾಡಿಸುತ್ತಿದ್ದ. ಅವನ ಆಳ ತಿಳಿಯುವಂತೆ ತಾಳವೂ ಹಾಕುತ್ತಿದ್ದ. ಅವನಲ್ಲಿ ಅಂತಹ ಅಪೂರ್ವವಾದದ್ದು ಏನಿದೆ? ಎಂಬಂತೆ ಕತ್ತೆತ್ತಿ ಕೇಳಿದೆ. ಅವರು ಪಿಸುದನಿಯಲ್ಲಿ 'ಅವನು ಹೊರಹೋಗುವುದರಲ್ಲಿ ನಾವು ಹೋಗೋಣ, ನಡಿ' ಎನ್ನುತ್ತಾ ಎದ್ದು ಗಡಿಬಿಡಿಮಾಡಿಸಿ ಹೊರಡಿಸಿ ಬಿಟ್ಟರು. ಪತಿಯಾಜ್ಞೆಗೆ ತಡೆ ತರಲಾದೀತೇ? ಆ ಗಾನಸುಧೆಯನ್ನು ತೊರೆದು ಬಂದೆ.

'ಅಲ್ರೀ, ಆ ವ್ಯಕ್ತಿ ಅವನ ಪಾಡಿಗೆ ಅವನು ಸಂಗೀತ ಕೇಳುತ್ತಿದ್ದ. ನಿಮಗೆ

ಅವನಿಂದ ಏನು ತೊಂದರೆ ಆಗತಿತ್ತು?"

ಅಂದಾಗ ನನ್ನ ಜೀವನ ಸಂಗಾತಿ 'ತೊಂದರೆ ಆಗೋದರಲ್ಲಿತ್ತು.' ಹೀಗೆ ಹೇಳುತ್ತಾ ಚಪ್ಪಲಿ ಮೆಟ್ಟಲಾರಂಭಿಸಿದರು. ನನಗೆ ಅರ್ಥವಾಗಲೇ ಇಲ್ಲ. ನನ್ನ ಬುದ್ಧಿವಂತಿಕೆ ಬಲ್ಲ ಅವರು ತಾವೇ ಸಂದೇಹ ನಿವಾರಿಸಿದರು,

'ನನಗೆ ಸಂಗೀತ ಕಾರ್ಯಕ್ರಮದಲ್ಲಿ, ಆ ಮಹಾರಾಯ ಎಂಟ್ರಿ ಕೊಟ್ಟ ಮೇಲೆ ಕೇಳೋ ಹುರುಪೇ ಉಳೀಲಿಲ್ಲ. ಹತ್ರ ಹತ್ರ ಸಾವಿರ ರೂಪಾಯಿ ಚಪ್ಪಲಿ ಇದು. ಸಂಗೀತ ಅವನು ಒಳಕ್ಕೆ ಬರೋಕ್ಕೆ ನೆಪ ಅಷ್ಟೇ. ನಮಗೆ ಮುಂಚಿತವಾಗಿ ಅವನು ಹೊರಕ್ಕೆ ಬಂದಿದ್ದರೆ ಈ ಚಪ್ಪಲಿ ಅವನ ಪಾಲಾಗಿರೋದು, ಅದಕ್ಕೆ ಅವಸರ ಮಾಡಿದ್ದು, ಈಗಲಾದರೂ ತಿಳೀತಾ?'.

ಅವರ ಇಂಗಿತ ಶಕ್ತಿಗೆ ಮರುಳಾದೆ. ಅಲ್ಲಿ ಕಣ್ಣಾಡಿಸಿದಾಗ, ಪಳಪಳ ಮಿಂಚುವ ಅದೆಷ್ಟೋ ಜೋಡಿ ಪಾದರಕ್ಷೆಗಳು, ಅವನ ಕೈ ಚಳಕಕ್ಕೆ ಒಡ್ಡಿಕೊಂಡಿದ್ದು ಆ ಮೂಲಕ ಅವನ ಜೋಳಿಗೆಯೊಳಗೆ ಪ್ರವೇಶ ಪಡೆಯುವ ಸಂಜೆಗನಸಿನಲ್ಲಿದ್ದವು. "ಛೇ ಪಾಪ" ಎಂದು ಅನುಕಂಪದ ಲೊಚಗುಟ್ಟುವಿಕೆ ಹೊರಚೆಲ್ಲಿ ಪತಿಯೊಡನೆ ಹೆಜ್ಜೆ ಹಾಕಿದೆ. ಇನ್ನು ಹೆಚ್ಚೇನು ಮಾಡಲಾದೀತು ಹೇಳಿ? ಪತಿಯ ಸೂಕ್ಷ್ಮತೆಗೆ ಅಭಿನಂದಿಸಿದೆ ಕೂಡ. ಆ ಮೆಚ್ಚುಗೆ ನುಡಿಗಳನ್ನು ಸಂತಸದಿಂದ ಸ್ವೀಕರಿಸುವ ಸ್ವಭಾವ ಅವರದ್ದಲ್ಲ. ಹಾಗಾಗಿ ನಾನು ನಿರೀಕ್ಷಿಸಿದಂತೆ ಅವರು,

"ಮೈಮರೆತು ಸಂಗೀತ ಕೇಳತಾ ಕೂರೋದಲ್ಲ. ಸುತ್ತಮುತ್ತ ಏನು ನಡೀತಿದೆ ಅನ್ನೋ ನಿಗಾ ಪ್ರತಿಯೊಬ್ಬರಿಗೂ, ಪ್ರತೀ ಸಂದರ್ಭದಲ್ಲೂ ಇರಬೇಕು. ಈವತ್ತು ನಾನು ಜೊತೇಲಿ ಇಲ್ಲದೆ ಇದ್ದಿದ್ದರೆ ನೀನು ಬರಿಗಾಲಲ್ಲೇ ವಾಪಸ್ ಬರಬೇಕಾಗತಿತ್ತು"

ಎಂಬ ವಾಸ್ತವಾಂಶದ ಎಚ್ಚರಿಕೆಯ ಮಾತು ಹೇಳಿದರು. ಪಾಪ ಮಲ್ಹಾರ್ ರಾಗದಲ್ಲಿ ಮುಳುಗೇಳುತ್ತಿದ್ದ, ಹಿಂಡು ಹಿಂಡು ನಾದರಸಿಕರ ನೆನಪಾಗಿ ಮೂಕವೇದನೆ ಅನುಭವಿಸಿದೆ. ನಿವೇದಿಸಿಕೊಳ್ಳಲು ಬಾಯಿ ತೆರೆದು ಹೇಳುವಂತಿಲ್ಲದ ಸ್ಥಿತಿ ನನ್ನದಾಗಿತ್ತು.

ಇನ್ನೊಂದು ಸನ್ನಿವೇಶ. ನಾಗಣ್ಣನಿಗೆ ಹೊಸ ವಿನ್ಯಾಸದ ಪಾದುಕೆಗಳೆಂದರೆ ಬಲು ಮೋಹ. ಆಗ ತಾನೇ ಕಂದು ಬಣ್ಣದ ಶೋಲಾಪುರದ ಚಪ್ಪಲಿಕೊಂಡು ನಡೆದರೆ ಸವದೀತು ಕಂಡವರ ಕಣ್ಣು ತಾಕೀತು ಎಂದು ಅಡಗಿಸಿ ಇಡುತ್ತಿದ್ದ. ವಜ್ರಖಚಿತ ಪಾದರಕ್ಷೆಯೇನೋ ಎಂಬ ಭ್ರಮೆ ಹುಟ್ಟಿಸುವಂತಿತ್ತು ಅವನ ಆ ಪರಮ ಕಾಳಜಿ, ನಮಗೆಲ್ಲ ಅತೀ ಎನಿಸಿ ಸಿಟ್ಟು ಬರುವುದು. ತಮ್ಮನಿಗೂ ತನ್ನ ಆ ಅಪೂರ್ವ ಪಾದರಕ್ಷೆ ಗುಟ್ಟಾಗಿ ಮೆಟ್ಟಿ ಪ್ರದರ್ಶನ ಮಾಡಿ ಬಂದರೆ, ಘೋರ ಪರಿಣಾಮ ಎದುರಿಸಬೇಕಾದೀತೆಂದು ಆದೇಶ ನೀಡಿದ್ದ. ಅವನು ಆಸೆ ಅದುಮಿ, ಆ ಸಾಹಸಕ್ಕೆ ಕಾಲು ಹಾಕಲಿಲ್ಲ. ನಾಗಣ್ಣ ಹೊರಗೆ ಹೋಗಿ ಬಂದರೆ, ಆ ಪಾದುಕೆ ಸುರಕ್ಷಿತವಾಗಿದೆಯೇ ಎಂಬ ವಿಚಾರ ಮನದಟ್ಟು ಮಾಡಿಕೊಂಡೇ ಒಳಗಡಿಯಿಡುತ್ತಿದ್ದುದು. ಅಷ್ಟು ಹುಷಾರು.

ಹೀಗಿರುವಾಗ ಅಣ್ಣನ ವಿವಾಹ ವಾರ್ಷಿಕೋತ್ಸವದ ಸಂಭ್ರಮದ ದಿನ ಕಾಲಿಟ್ಟಿತು. ಅತ್ತಿಗೆ ವಿಜಯಾ ಮಹಾ ದೈವಭಕ್ತೆ. ಮನೆದೇವರಾದ ವೆಂಕಟರಮಣನ ಗುಡಿಯಲ್ಲಿ ವಿಶೇಷ ಪೂಜೆಗೆ ವ್ಯವಸ್ಥೆ ಮಾಡಿದ್ದಳು. ಅವಳು ಸಿಲ್ಕ್ ಸೀರೆ ಉಟ್ಟು ಸಿದ್ಧವಾದರೆ, ನಾಗಣ್ಣ ಹಾಲುಬಣ್ಣದ ನವಪೈಜಾಮ ಜುಬ್ಬಾ ತೊಟ್ಟು ದೇವಸ್ಥಾನಕ್ಕೆ

ಜೊತೆಯಾಗುವಾಗ, ಅತ್ತಿಗೆಯದು ಒಂದೇ ಹಟ,

'ಹೊಸ ಚಪ್ಪಲಿಗೇನಾದರೂ ಪೂಜೆಗೀಜೆ ಮಾಡ್ತೀರಾ ಹೇಗೆ? ಹಾಕ್ಕೊಂಡು ಬನ್ನಿ, ನಾನಿದೀನಿ' ಎಂಬ ಆಶ್ವಾಸನೆ, ತಾನೇನೋ ಅಲ್ಲಿ ಚಪ್ಪಲಿ ಕಾಯುವವಳಂತೆ ಭರವಸೆ ಕೊಟ್ಟಳು. ನಾಗಣ್ಣನಿಗೆ ಹೆಂಡತಿ ಮಾತು ತೆಗೆದು ಹಾಕುವಂತಿಲ್ಲ. ಒಪ್ಪಿ ಅದನ್ನು ತೊಟ್ಟುಕೊಂಡು ಬಿಡೋಣವೆಂದರೆ ಚಪ್ಪಲಿಯ ಕ್ಷೇಮದ ಭಯ. ಸಾಲದಕ್ಕೆ ತಮ್ಮ ಮದುವೆಯಾದ ನೆನಪಿನ ದಿನ. ಯಾವ ನೆಪವೂ ಹೇಳುವಂತಿಲ್ಲ. ಅಣ್ಣ ಈ ಅನಿಶ್ಚಿತ ಗೊಂದಲದಲ್ಲಿ ತೇಲಾಡುತ್ತಿರುವಾಗ, ಅತ್ತಿಗೆ ಅವಸರಿಸಿ, ಹೊಸಚಪ್ಪಲಿ ತೊಡುವಂತೆ ಮಾಡಿ, ಕರೆದೊಯ್ದೇ ಬಿಟ್ಟಳು.

ಅಲ್ಲಿ ಶ್ರೀನಿವಾಸನ ಗುಡಿಯಲ್ಲಿ ಗಿಜಿಗುಟ್ಟಿಸುವಷ್ಟು ಜನಜಂಗುಳಿ. ಅಣ್ಣನ ಮನ ಮನೆದೇವರ ಮೇಲೆ ನೆಲೆಸಲು ತಕರಾರು ನಡೆಸಿದೆ. ಅತ್ತಿಗೆ ಅಣ್ಣನನ್ನು ಮೇಲಿಂದ ಮೇಲೆ ಲಕ್ಷ್ಮಿಪತಿಯತ್ತ ತಿರುಗಿಸಲು ಹರಸಾಹಸ ಮಾಡುತ್ತಿದ್ದಾಳೆ. ಆದರೆ ನಾಗಣ್ಣನ ಗಮನವೆಲ್ಲ ಗರುಡಗಂಭದ ಬಳಿ ಅನಾಥವಾಗಿ ತೊರೆದು ಬಂದ ತನ್ನ ಪಾದರಕ್ಷೆಯ ಕಡೆಗೆ. ಪೂಜೆ ಮುಗಿದು ಅಷ್ಟೋತ್ತರ, ನೈವೇದ್ಯ ಸಮರ್ಪಣೆಯಾಗಿ, ಮಂಗಳಾರತಿ, ತೀರ್ಥ, ಪ್ರಸಾದ ವಿನಿಯೋಗವಾಗುತ್ತಿದ್ದರೆ, ಅತ್ತಿಗೆ ಬಲವಾಗೆ ಗಂಡನನ್ನು ತಿವಿದು ಅದನ್ನು ಸ್ವೀಕರಿಸುವಂತೆ ಮಾಡೇಬಿಟ್ಟಳು.

ಪೂಜಾರಿ ಭಕ್ತರ ಶಿರಕ್ಕಿಡಲು ಶಟಾರಿ ತರುವಲ್ಲಿ ಅಣ್ಣನ ಬಾಹ್ಯದೃಷ್ಟಿಗೆ ಒಬ್ಬಾತ ತನ್ನ ಚಪ್ಪಲಿಗೆ ಕೈಹಾಕಿದ್ದು ಕಂಡೇಬಿಟ್ಟಿತು. ಅತ್ತಿಗೆ ತಡೆಯುತ್ತಿದ್ದರೂ ಬಿಡಿಸಿಕೊಂಡು ಅಣ್ಣ , ಆ ಜನಸ್ತೋಮದಲ್ಲಿ ಹೊರಗೋಡಿ ಬಂದೇಬಿಟ್ಟ. ಆ ಚಪ್ಪಲಿಕಳ್ಳ ಸಿಕ್ಕೇಬಿದ್ದ, ಹಿಡಿದೇ ಬಿಟ್ಟೆ ಎಂಬ ವಿಜಯದನಗು ಅಣ್ಣನ ಮೊಗದಲ್ಲಿ ನೃತ್ಯವಾಡುತ್ತಿರುವಾಗ, ಆ ಖದೀಮ ಆ ಮನಮೋಹಕ ಜೋಡಿ ಪಾದರಕ್ಷೆಯನ್ನು ತಾನು ಉಟ್ಟಪಂಚೆ ಅರ್ಧ ಮಡಿಸಿದಂತೆ ಮಾಡಿ ಅದರೊಳಗೆ ಜೋಳಿಗೆಯಲ್ಲಿ ಇಳಿ ಬಿಟ್ಟಷ್ಟು ಸಲೀಸಾಗಿ ಸೇರಿಸಿಬಿಟ್ಟ. ಅಣ್ಣ ಅವನನ್ನು ಮಾಲುಸಮೇತ ಹಿಡಿಯೋಣವೆಂದರೆ, ಅಷ್ಟರಲ್ಲಿ ಅತ್ತಿಗೆ ಅಲ್ಲಿ ಹಾಜರಾಗಿ ಜರುಗಲಿದ್ದ ಕದನಕ್ಕೆ ವಿರಾಮ ಹಾಡಿದಳು. ಚಪ್ಪಲಿ ಕಣ್ಣೆದುರಲ್ಲೇ ಕಳೆದುಕೊಂಡ ದುಃಖದಲ್ಲಿ ಅಣ್ಣನಿರುವಾಗ, ಅವಳ ಬುದ್ಧಿಮಾತು ಬೇರೆ, " ಇವತ್ತು ನಮ್ಮ ಮದುವೆಯಾದ ದಿನ. ಹಾಗೆಲ್ಲ ಕೋಪ ಮಾಡಿಕೊಂಡು, ಮೂಡ್ ಹಾಳು ಮಾಡಿಕೊಳ್ಳೋದು ಬೇಡ, ಲಕ್ಷಣವಾಗಿ ನಿಮ್ಮ ಹೆಸರಲ್ಲಿ ಪೂಜೆ ಆಗಿದೆ. ಆ ದೇವರೇ ಶಿಕ್ಷೆ ಕೊಡ್ತಾನೆ ಬಿಡಿ"

ನಾಗಣ್ಣ ಬುಸುಗುಟ್ಟುತ್ತಾ ಅಸಹಾಯಕನಾಗಿ ದುಡುದುಡು ಮರೆಯಾಗಿ ಹೋದ ಆ ಕಳ್ಳನ ದಿಕ್ಕನ್ನು ದುರುದುರು ನೋಡುತ್ತಾ, ಬರಿಗಾಲಲ್ಲಿ ಮನೆಗೆ ಮರಳಿದ. ವಿಷಯ ತಿಳಿದ ಹಿತೈಷಿಯೊಬ್ಬರು "ದೇವಸ್ಥಾನದಲ್ಲಿ ಚಪ್ಪಲಿ ಕಳೆದರೆ ಒಳ್ಳೇದು. ವಿಶೇಷ ಯೋಗ" ಎಂದು ಸಮಾಧಾನ ಪಡಿಸಿದಾಗ, ಅಣ್ಣ "ಅಂತಹ ಯೋಗ ನಿಮಗೇ ಮೇಲಿಂದ ಮೇಲೆ ಪ್ರಾಪ್ತಿಯಾಗಲಿ" ಎಂದು ಮನದಲ್ಲೇ ಹರಸಿದ. ■

---

## ಕಾರಣ

**ವ್ಯಾಯಾಮ ಶಾಲೆಗೆ ಆಗಷ್ಟೇ ಸೇರಿದ್ದ ಒಬ್ಬ ಮಹಿಳೆಗೆ ತರಬೇತುದಾರ**
**'ಮೇಡಂ, ಲೂಸ್ ಬಟ್ಟೆ ಹಾಕಿಕೊಂಡು ಬನ್ನಿ, ನಾಳೆಯಿಂದ' ಎಂದ.**
**'ಹಲೊ! ನನ್ನ ಬಟ್ಟೆ ಲೂಸ್ ಇದ್ದಿದ್ದರೆ ನಾನೇಕೇ ನಿಮ್ಮ ಬಳಿ ಬರ್ತಿದ್ದೆ?'**

# ಗುಂಡ್ಯಾನ ಕರೋನಾ ಡಯಟ್......

● ವಿಲಾಸ ನಾ ಹುದ್ದಾರ

ಬಳವಂತ ಉರ್ಫ ಬಾಳ್ಯಾ ಸ್ನಾನ, ಪೂಜಾದಿ ಮುಗಿಸಿ, ಸ್ವಲ್ಪ ಅವಲಕ್ಕಿ ತಿಂದು ಅಂದಿನ ವೃತ್ತ ಪತ್ರಿಕೆಯನ್ನು ತಿರುವಿ ಹಾಕಿ ಹೆಂಡ್ತಿಗೆ ಸ್ವಲ್ಪ ಇಲ್ಲೇ ಹೋಗಿ ಬರ್ತೇನಿ ಅಂತ ಹೇಳಲು, "ಗುಂಡುರಾವ ಕಡೆ ಹೌದಲ್ಲೋ...ಲಗೂನ ಬರ್ರೀ...ಅಲ್ಲೇ ಹರಟಿ ಹೊಡಕೋತ ಕೂಡಬ್ಯಾಡ್ರಿ..... ಅಲ್ಲಿ ಹೋದ್ರ ನಿಮಗ ವ್ಯಾಳ್ಯಾದ ಖಬರ ಇರೂದಿಲ್ಲಾ " ಎಂದಿನಂತೆ ತನ್ನ ಶಂಖ ಊದಿದಳು. ಅವಳಿಗೂ ಗೊತ್ತು ಇದು ಬೋರ್ಗಲ್ ಮೇಲೆ ನೀರ ಸುರಿಧಂಗ ಅಂತ. ಇವನು ಹೆಂಡ್ತಿ ಹೇಳಿದ್ದು ಪೂರ್ಣ ಕೇಳಿಸಿಕೊಂಡೋ ಇಲ್ಲೋ ಯಾರಿಗೆ ಗೊತ್ತು, ಅಂತೂ ಕಾರ ಹತ್ತಿ ಹೊರಟ.

ಗುಂಡುರಾವ ಉರ್ಫ ಗುಂಡ್ಯಾನ ಮನೆ ಮುಂದ ಕಾರ ನಿಲ್ಲಿಸಿ ಮುಂದೆ ಮಾಡಿದ ಬಾಗಿಲನ್ನ ದುಗಿಸಿ ಒಳಗ ಹೊಕ್ರ ಅಲ್ಲೇನ ನೋಡ್ತಾನ ! ಗುಂಡ್ಯಾ ಊಟದ ಮೇಜಿನ ಮೇಲೆ ಕೂತಾನ, ಹೊಟ್ಟಿ ಮೇಜಿಗೆ ಹತ್ತೇದ. ಎದುರಿಗೆ ಮೂರು ಬಟ್ಟಲುಗಳು ಮತ್ತು ಒಂದು ಲೋಟಾ. " ಬರ್ರಿ, ಬಾಳು ಅವರ... ನಿಮ್ಮ ದೋಸ್ತಂದು ಫಲಹಾರ ನಡದದ.... ಎಷ್ಟ ಕೆಟ್ಟ ಮಾರಿ ಮಾಡ್ಕೊಂಡ ಕೂತಾರ ನೋಡ್ರಿ... "

" ವೈನಿ, ಇಷ್ಟ ಬಟ್ಟಲದಾವ ಏನ ಅವ ?"

" ನಮ್ಮ ಅಣ್ಣಾ ಹೇಳಿದ ಪ್ರಕಾರ ಈಗ ಕರೋನಾ ಇದ್ದದ್ದಕ್ಕ ಮತ್ತ ಇವರ ವೇಟ್ ಜಾಸ್ತಿ ಇದ್ದದ್ದಕ್ಕ ರಾತ್ರಿ ನೆನಿಲಿಕ್ಕೆ ಇಟ್ಟ ಎರಡೆರಡು ಗೋಡಂಬಿ, ಮನೂಕಾ, ಬದಾಮು ಮತ್ತ ಮೂರು ಖರ್ಜೂರ ಮತ್ತ ಆ ಲೋಟಾದಾಗ ರಾಗಿ ಅಂಬಲಿ.. ಇಷ್ಟ ಇವರ್ದ ಫಲಹಾರ...".

ಅಷ್ಟರಲ್ಲಿ ಗಂಡ್ಯಾ ಕಣ್ಣ ಸನ್ನೆ ಮಾಡಿ, "ಬಾಳ್ಯಾ ಅದೇನೋ ಕೆಲಸ ಅದ ಅಂದಿದ್ದೆಲ್ಲಾ, ಎಷ್ಟೊತ್ತಿಗೆ ಹೋಗೋದು ?"

"ಈಗ ಹೋಗಬೇಕಲೇ... ಅದಕ್ಕ ಕಾರ ತೊಗೊಂಡು ಬಂದೇನಿ.. ನಿನ್ನ ಕೂಡಿಸಿಕೊಂಡು ಸ್ಕೂಟರ್ ನನಗ ಹೊಡಿಲಿಕ್ಕೆ ಆಗೂದಿಲಪ್ಪಾ.. "

" ಆತ, ಆತ, ಭಾಳ ಶ್ಯಾಣ್ಯಾ ಇದ್ದಿ.. ನಾನ ಸ್ಕೂಟರ್ ತೆಗೊಂಡು ಬರ್ತೇನಿ... ಲಗೂನೆ ಹೋಗಿ ಬರೋಣ.. ಕಾರ ತೊಗೊಂಡ ಹೋದ್ರ ಪಾರ್ಕಿಂಗ ಜಂಜಾಟ....". ಬಟ್ಟಲದಲ್ಲಿ ಇದ್ದದ್ದನ್ನೆಲ್ಲಾ ನುಂಗಿ ರಾಗಿ ಅಂಬಲಿ ಕುಡುದು ಸ್ಕೂಟರ್ ಚಾವಿ ತೊಗೊಂಡ ಹೊರಟ.

" ನಾವ ಹೋಗಿ ಬರ್ತೀವಿ"

" ಲಗೂನೆ ಬರ್ರಿ.... ದೋಸ್ತ ಸಿಕ್ರಂತ ಹರಟೆ ಹೊಡ್ಕೋತ ನಿಂತ ಬಿಡಬ್ಯಾಡ್ರಿ.... ನಿಮಗ ಹೊಟ್ಟಿ ಹಸಿವಿ ಆದಾಗ ಮಾತ್ರ ಮನಿ ನೆನೆಪಾಗ್ತದ...."

" ವೈನಿ, ಕಾಳಜಿ ಮಾಡಬ್ಯಾಡ್ರಿ... ನಾ ಲಗೂನೆ ಕರ್ಕೊಂಡ ಬರ್ತೇನಿ." ಬಾಳ್ಯಾನ ಸಮಝಾಯಿಸಿ.

ಅಷ್ಟರಲ್ಲಿ ಗುಂಡ್ಯಾ ಸ್ಕೂಟರ್ ಪ್ರಾರಂಭಿಸಿ ಇವನಿಗೆ ಕಾಯ್ತಾಇದ್ದಾ. " ಹತ್ತಲೇ ಲಗೂನೆ ಹೊಟ್ಟಿ ಒಳಗ ಇಲಿ ಓಡ್ಯಾಡಲಿಕತ್ಯಾವ. ಇವಳು ದಿನಾ ಡಯಟ್

ಅನ್ಕೋತ ಪೇಶಂಟ್ಗ ಕೊಡೋ ಹಂಗ ರಾತ್ರಿ ತೊಯ್ಸಲಿಕ್ಕಿಟ್ಟ ಎರಡೆರಡು ಬದಾಮು, ಮನೂಕಾ, ಗೋಡಂಬಿ, ಖರ್ಜುರ ಮತ್ತ ಮ್ಯಾಲೆ ಒಂದ ವಾಟಗಾರಾಗಿ ಅಂಬಲಿ ಕೊಡ್ತಾಳ. ಇಷ್ಟ ದೊಡ್ಡ ಹೊಟ್ಟಿಗೆ ಅದೆಲ ಎಲ್ಲಿ ಸಾಕಾಗ ಬೇಕ...." ಅವನು ಇನ್ನೂ ಏನೇನೋ ಒದರತಾ ಇರಲು.

" ಈ ಸ್ಕೂಟರ್ ಬದಲಿ ಮಾಡಪ್ಪಾ. ನಿನ್ನ ವಜ್ಜಾ ಹೊತ್ತ ಹೊತ್ತ ಅದಕ್ಕೂ ಬ್ಯಾಸರ ಬಂದಿರಬೇಕು". " ಅದೆಲ್ಲಾ ಹಿಂದಾಗಡೆ ನೋಡೋಣಂತ, ಈಗ ಮೊದಲ ಹತ್ತಲೇ..". ಬಾಳ್ಯಾ ಹತ್ತುತ್ತಲೇ ಗುಂಡುರಾವ ಉರ್ಫ ಗುಂಡ್ಯಾ ವೇಗವನ್ನು ಹೆಚ್ಚಿಸಿದ. ಆ ಸ್ಕೂಟರ್‌ನ ಕುಂಯ್ಯಗುಡುವಿಕೆ ಬಾಳ್ಯಾಗೆ ಗುಂಡ್ಯಾನ ವಜ್ಜಾ ಕಷ್ಟಪಟ್ಟು ಎಳೆದುಕೊಂಡು ಹೋಗುವ ಹಾಗೆ ಭಾಸವಾಯಿತು. ಒಂದುಕ್ಷಣ ಅವನಿಗೆ ಅನಿಸಿದ್ದೇನೆಂದರೆ ಇವನ ಹೆಂಡ್ತಿ ಅಷ್ಟನ್ನೂ ಮುಂಜಾನೆ ತಿನ್ನಲಿಕ್ಕೆ ಕೊಡದೇ ಬರೇ ಗಂಜಿ ಮೇಲೆ ಇಡಬೇಕು ಅಂತ. ಆದರೆ ಆ ಸನ್ನಿವೇಶದಲ್ಲಿ ಹೇಳುವ ಧೈರ್ಯಇಲ್ಲಾ.

"ಬಾಳ್ಯಾ ಎಲ್ಲಿ ಹೋಗೋಣು?" ಬಾಳ್ಯಾನ ಮೌನ. " ಇಂದ ಬುಧವಾರ ಮೋಹನ ವಿಲಾಸಕ್ಕ ಹೋಗೋಣು. ಇವತ್ತ ಅಲ್ಲಿ ತುಪ್ಪದ ದೋಸಿ ಸಿಗ್ತಾವ". ಇವನಿಗೆ ಹೇಳಿದನೋ ಸ್ವಗತವಾಗಿ ಹೇಳಿಕೊಂಡನೋ ತಿಳಿಯಲಿಲ್ಲ. ಯಾಕಂದ್ರ ಬಾಳ್ಯಾಗ ಯಾವದೇ ಆಯ್ಕೆ ಮಾಡುವ ಅಧಿಕಾರ ಇರಲಿಲ್ಲ.

ಹೊಟೆಲ್ ಒಳಗೆ ಕಾಲಿಡುತ್ತಲೇ ಗಲ್ಲೆ ಮೇಲೆ ಕುಳಿತ ಮಾಲೀಕ ಇವರನ್ನು ನೋಡಿ ಗುರ್ತಿನ ನಗೆ ಬೀರಿದ. ಇವರು ತಿಳುವಳಿಕೆ ಬಂದಾಗಿನಿಂದ ಅಲ್ಲಿಯ ಖಾಯಂ ಗಿರಾಕಿಗಳು. ತಮ್ಮ ಖಾಯಂ ಆದ ಮೂಲೆಯ ಮೇಜಿಗೆ ಹೋಗಿ ಕುಳಿತರು, " ಸೋಮು.." ಕೂಡುತ್ತಿದ್ದ ಹಾಗೆ ಗುಂಡ್ಯಾನ ಕರೆ. ಸೋಮು ಇವರಿಗೆ ಖಾಯಂ ಸರಬರಾಜು ಮಾಡುವ ಹುಡುಗ. " ನೋಡು, ನನಗೊಂದು ಸಿರಾ, ಒಂದು ಪ್ಲೇಟ್‌ಇಡ್ಲಿ ವಡಾ ಮತ್ತ ತುಪ್ಪದ ದೋಸೆ. ಬಾಳ್ಯಾಗ ಒಂದ ಪ್ಲೇಟ್‌ಇಡ್ಲಿ." " ಅಲ್ಲೇ, ನಿನ್ನ ಹೆಂಡ್ತಿ ನೋಡಿದ್ರ ನಿನ್ನಆರೋಗ್ಯದ ಬಗ್ಗೆ ಅಷ್ಟ ಕಾಳಜಿ ಮಾಡ್ತಾಳ, ಒದ್ಯಾಡ್ತಾಳ. ಇಲ್ಲಿ ನೀ ನೋಡೀದ್ರ...ಈಗ ಕರೋನಾ ಬ್ಯಾರೆಅದ......ಸ್ವಲ್ಪ ನಿನ್ನ ದೇಹಾ ನೋಡ್ಕೋ....ನಿನಗೂ 60 ವರ್ಷ ಆತು..." " ವಯಸ್ಸ ಏನ ಆಗ್ತ ಇರ್ತದ...60 ಆಗ್ತದ 65 ಆಗ್ತದ....ಎಲ್ಲಾರ ಏನ ಹೇಳ್ತಾರ, ಆತ್ಮ ಹೇಳಿದ ಹಾಗೆ ಕೇಳ್ರಿ ಅಂತ....ಅದಕ್ಕ ನನ್ನ ಆತ್ಮ ಏನ ಕೇಳ್ತದ ಅದನ್ನ ಕೊಡ್ತೇನಿ... ಆತ್ಮಾ ಇದೆಲ್ಲಾ ಬೇಕಂತದ... ದೇಹಾನ ಅದೇ ಕಂಟ್ರೋಲ್ ಮಾಡ್ತದೇಳ...." " ಹೌದು ನನಗ ಬರೇ ಇಡ್ಲಿಯಾಕ... ನಿನ್ನಜೊತೆ ಹೊರಗ ಹೋಗೋದಂತ ಸ್ವಲ್ಪ ಅವಲಕ್ಕಿ ತಿಂದ ಬಂದೇನಿ." " ಆತಪಾ, ಸೋಮು ಇವನಿಗೂ ಒಂದು ತುಪ್ಪದ ದ್ವಾಸಿ ಕೊಟ್ಟಬಿಡ..." ಗುಂಡ್ಯಾನ ದಿಲ್ದಾರ್ ತುಂಬಿದ ಕರುಣೆ ಮಾತುಗಳು.

ಮೊದಲು ಸಿರಾ ಬರುತ್ತಲೇ ಅದನ್ನು ಸವಿಯುವದರಲ್ಲಿ ಮಗ್ನನಾದ. ಒಂದೊಂದು ತಿನಿಸುಗಳು ಬಂದ ಹಾಗೆ ಅದರ ಸವಿರುಚಿಯನ್ನು ಸವಿಯುತ್ತ ಅವನ ಮುಖದಲ್ಲಿ ಒಂದೊಂದು ತುತ್ತು ಹಾಕಿಕೊಂಡ ಹಾಗೆ ಸಂತೃಪ್ತಿಯ ಭಾವ ವ್ಯಕ್ತವಾಗುತ್ತಿತ್ತು. ಬಾಳ್ಯಾ ಗುಂಡ್ಯಾನ ತಲ್ಲೀನತೆಯನ್ನು ವೀಕ್ಷಿಸುತ್ತ ತಿನ್ನುವದನ್ನು ಮುಗಿಸಿದ.

" ಸೋಮು, ನನಗ ಅರ್ಧ ಕಲ್ಲಂಗಡಿ ಜ್ಯುಸ್ ತೊಗೊಂಡ ಬಾ...ನಿನಗ ಏನ ಬೇಕ ಬಾಳ್ಯಾ?" " ನನಗ ಸಕ್ರಿಇಲ್ಲದ ಚಹಾ."

" ಸೋಮು, ಒಂದ ಕೆಲಸಾ ಮಾಡ, ಇವನಿಗೆ ಸಕ್ರಿ ಇಲ್ಲದ ಚಹಾ ತೊಗೊಂಡ ಬಾ.. ನನಗ ಒಂದು ಫುಲ್ ಗ್ಲಾಸ ಜ್ಯುಸ್..."

ಜ್ಯುಸ್ ಬರುತ್ತಲೇ ಅದನ್ನು ಆಸ್ವಾದಿಸಿ ಎಂದಿನಂತೆ ತನ್ನ ಕಿರುಬೆರಳು ತೋರಿಸಿ ರೆಸ್ಟರೂಮ ಕಡೆ ನಡೆದ. ಸಕ್ರಿ ಇಲ್ಲದ ಚಹಾ ಬರೋದು ಯಾವಾಗಲೂ ಲೇಟ್.

ಅದನ್ನ ತಿಳಿದೇ ಇಂದು ಬಾಳ್ಯಾ ಹೇಳಿದ್ದ, ಬಹಳಷ್ಟು ಸಾರಿ ಬಿಲ್ ಬರುವ ವೇಳೆಗೆ ಗುಂಡ್ಯಾ ಕಿರು ಬೆರಳು ತೋರಿಸಿ ಕಣ್ಮರೆ ಆಗ್ತಾ ಇದ್ದಾ. ಸಾಧಾರಣವಾಗಿ ಬಿಲ್ ಬರುವದು ಎಲ್ಲ ತಿನ್ನವದು, ಕುಡಿಯುವದು ಮುಗಿದ ಮೇಲೆ. ಹೀಗಾಗಿ ಪ್ರತಿಸಾರಿ ಬಿಲ್ ಬಂದಾಗ ಗುಂಡ್ಯಾ ಗಾಯಬ್ ಆಗಿರ್ತಿದ್ದ. ಆದರೆ ಇಂದು ಅವನು ಹೋಗಿ ಬರುವದಕ್ಕೂ, ಬಾಳ್ಯಾನ ಚಹಾ ಮುಗಿಯುವದಕ್ಕೂ. ಸೋಮು ಬಿಲ್ ತಂದು ಗುಂಡ್ಯಾನ ಕೈಗೆ ಕೊಡುವದಕ್ಕೂ ಸಮನಾಯಿತು. " ಏನ್ ಬಾಳ್ಯಾ ಬರೋಬರಿ ಸಿಗ್ಸಿದೆಲಾ...ಅದಕ್ಕ ಸಕ್ರಿ ಇಲ್ಲದ ಚಹಾ ಹೇಳಿದ್ದೇನ, ಮಗನ...". ಸಿಟ್ಟಿನಿಂದ ಬಿಲ್ ತೆಗೆದುಕೊಂಡು ಗಲ್ಲೇ ಕಡೆ ಹೋಗಿ ದುಡ್ಡುಕೊಟ್ಟು, ಬಳವಂತ ಹೊರಗೆ ಬರುವದರೊಳಗೇ ಸ್ಕೂಟರ್ ಹತ್ತಿ ವೇಗವಾಗಿ ಹೊರಟುಹೋದ. ಹೋಗುವದಕ್ಕೂ ಮೊದಲು ಸೋಮುಗೆ ಟಿಪ್ಸಕೊಡಲು ಮರೆತಿರಲಿಲ್ಲ. ಗುಂಡ್ಯಾ ಹೃದಯವಂತ, ಯಾರೇ ಸಹಾಯಕ್ಕೆ ಕೈಚಾಚಿದರೂ ತನ್ನ ಕೈ ಮೀರಿ ಸಹಾಯ ಮಾಡುವಂಥವನು. ಅವನು ಜೊತೆಯಲ್ಲಿದ್ದರೆ ಯಾರಿಗಾದರೂ 100 ಆನೆಯ ಬಲ ಇದ್ದ ಹಾಗೆ. ಹೀಗೆ ವಿಚಾರ ಮಾಡುತ್ತ ಬಾಳ್ಯಾ ಹೊರಗೆ ಬಂದು ನಿಂತ. ಗುಂಡ್ಯಾನ ಸ್ಕೂಟರ್ ಮುಂದಿನ ರಸ್ತೆವರೆಗೆ ಹೋಗಿ ಯುಟರ್ನ್ ತೆಗೆದುಕೊಂಡು ಬರುವದು ಕಾಣಿಸಿತು. ಹೀಗೇ ಆಗುತ್ತದೆಂದು ಬಾಳ್ಯಾಗೂ ಗೊತ್ತು.

ಗುಂಡ್ಯಾ ಬಂದವನೇ, "ಹತ್ತಲೇ, ನಿನ್ನನ್ನ ಬಿಟ್ಟ ಹೋದ್ರ ಅದೊಂದು ಬ್ಯಾರೆ ನಮೂನಿ ನನಗ ಫಜೀತಿ, ನಿನ್ನ ಜೋಡಿ ಹೋಗದ ಬ್ಯಾರೆ ಎಲ್ಲ್ಯೋ ಹೋಗಿದ್ದೆ ಅಂತ ತಿಳ್ಕೊತಾಳ .... ಈಗ ಸೀಗೋದು ಸಿಗೋದಿಲ್ಲಾ ಮತ್ತ ಮುಂಜಾನೆ ಹೊತ್ತಿನಾಗ ಖಾಯಂ ಗೃಹಬಂಧನ.......". ಬಾಳ್ಯಾ ಕೂಡುತ್ತಲೇ ಗುಂಡ್ಯಾನ ಸ್ಕೂಟರ್ ಕುಂಯ್ಯೋ ಮರ್‍ರ್ಯೋ ಅನ್ನುತ್ತ ಇವರಿಬ್ಬರನ್ನು ಎಳೆದುಕೊಂಡು ಹೊರಟಿತು. ■

---



# ಬೇಂದ್ರೆ ಒಂದು ಅದ್ಭುತ

● ಯೋಗೀಶ್ ತೀರ್ಥಪುರ

ಮಹಾರಾಜ ಕಾಲೇಜಿನಲ್ಲಿ ವಿಶೇಷ ಉಪನ್ಯಾಸಕ್ಕಾಗಿ ಬೇಂದ್ರೆ ಅವರು ಮೈಸೂರಿಗೆ ಬಂದಿದ್ದರು. ತೀನಂಶ್ರೀ ಮನೆಯಲ್ಲಿ ಎ.ಎನ್.ಮೂರ್ತಿರಾಯರು, ನಂ.ಶಿವರಾಮ ಶಾಸ್ತ್ರಿ, ತೀನಂಶ್ರೀ ಅವರು ಬೇಂದ್ರೆ ಜೊತೆ ಹರಟೆ ಹೊಡೆಯುತ್ತಿದ್ದರು. ಡಾ.ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ ಅವರು ಅವರ ಬಳಿ ಹೋಗಿ ಕೂತರು. ಇವರನ್ನು ಬೇಂದ್ರೆಗೆ ಪರಿಚಯಿಸಿ, ಈತನಿಗೆ ಕಾವ್ಯದಲ್ಲಿ ವಿಶೇಷ ಆಸಕ್ತಿ ಎಂದು ತೀನಂಶ್ರೀ ಹೇಳಿದರು.

ಬೇಂದ್ರೆ ವಿನೋದವಾಗಿ ಹುಡುಗಾ, ನಿನಗೆ ಕಾವ್ಯದಲ್ಲಿ ಆಸಕ್ತಿ ಈಗಲೂ ಉಳಿದಿದೆಯೋ ಅಥವಾ (ತೀನಂಶ್ರೀಯನ್ನು ತಮ್ಮ ಕೈಕೋಲಿನಿಂದ ತೋರಿಸುತ್ತ) ಈತನ ಭಾಷಾಶಸ್ತ್ರದ ಮಹಾಗ್ನಿಯಲ್ಲಿ ಎಲ್ಲ ದಗ್ಧವಾಗಿ ಹೋಯಿತೋ ಎಂದು ನಕ್ಕರು. ಭಟ್ಟರು ಎಲ್ಲಾದರೂ ಉಂಟೆ. ಅವರು ಕಾವ್ಯಮೀಮಾಂಸೆ ಬರೆದವರು. ಕಾವ್ಯದಲ್ಲಿ ನನಗಿದ್ದ ರುಚಿಯನ್ನು ಬೆಳೆಸಿದವರು ಎಂದರು. ಬೇಂದ್ರೆ ಏನೋಪ್ಪ ನನಗೆ ನಂಬಿಕೆಯಿಲ್ಲ. ಕಾವ್ಯ ಇರಲಿ, ಈತನ ಶಾಸ್ತ್ರಜ್ಞಾನ ಕೂಡ ನನಗೆ ಅನುಮಾನದ್ದಾಗಿ ಕಾಣುತ್ತದೆ. ನೀನೇ ನೋಡು ಕನ್ನಡ ಒಂದು ದ್ರಾವಿಡ ಭಾಷೆ, ತಮಿಳಿಗಿಂತ ಕೊಂಚ ನಂತರ ಬಂದದ್ದು. ಹೀಗೆ ಏನೇನೋ ಈತನ ತರ್ಕ. ಅದು ಎಲ್ಲಾದರೂ ಸಾಧ್ಯವೇ? ಕನ್ನಡ ಎಲ್ಲ ಭಾಷೆಗಿಂತ ಮೊದಲು ಹುಟ್ಟಿದ್ದಲ್ಲವೆ? ಜಗತ್ತಿನ ಮೊದಲು ಭಾಷೆಯೇ ಕನ್ನಡ ಎಂದರು. ಭಟ್ಟರು ತೀನಂಶ್ರೀ ಕಡೆ ನೋಡಿದರು. ಅವರು ನಗುತ್ತ ಗಾಬರಿಯಾಗಬೇಡಿ. ಅದಕ್ಕೆ ಸಮರ್ಥನೆ ಕೊಡಿ ಅನ್ನಿ. ಅದನ್ನೂ ಕೊಡುತ್ತಾರೆ. ಆಗಲೇ ಆಕಾಶ ಮಿಂಚತೊಡಗಿದೆ! ಎಂದರು.

ಬೇಂದ್ರೆ 'ಓಹೋ ಇಷ್ಟು ಸರಳ ಸತ್ಯಕ್ಕೆ ಸಮರ್ಥನೆ ಬೇರೆ ಬೇಕಾ? ಆಯಿತು. ಈಗ ನೋಡಿ. ಕನ್ನಡದ ಯಾವುದೇ ಮುಖ್ಯವಾದ ಪದ ತೆಗೆದುಕೊಳ್ಳಿ. ಅದು ಕಕಾರದಿಂದಲೇ ಆರಂಭವಾಗುತ್ತೆ. ಆರಂಭದ ಭಾಷೆ ಕನ್ನಡವೇ ಅನ್ನೋದಕ್ಕೆ ಬೇರೆ ಆಧಾರ ಯಾಕೆ ಬೇಕು ಅಂದು ಬಿಟ್ಟರು!'

ಮೂರ್ತಿರಾಯರು ನಗುತ್ತ ಎಲ್ಲಿ ಒಂದಿಷ್ಟು ಉದಾಹರಣೆ ಕೊಡಿಯಪ್ಪ ಎಂದರು. ಬೇಂದ್ರೆ ಕೈಯಿಂದ ತಮ್ಮ ಮೈಯ ಒಂದೊಂದು ಅಂಗ ಮುಟ್ಟಿ ತೋರಿಸುತ್ತ ನೋಡಿ, ಇದು ಕತ್ತು, ಹೌದೆ? ಇದು ಕಂಠ. ಇದು ಕಣ್ಣು, ಇದು ಕಿವಿ. ಇದು ಕೂದಲು. ಇಗೋ ಇದು ಕೈ. ಇದು ಕಾಲು. ಇದು ಕೆನ್ನೆ. ಸಾಕೇ ಎಂದರು. ಮೂರ್ತಿರಾಯರು ಬೇಂದ್ರೆಯವರ ಉಪಾಯ ತಿಳಿದು ಅವರನ್ನು ಕೆಡವಲು ತಮ್ಮ ಸೊಂಟದ ಕಡೆ ಬೆರಳು ಮಾಡಿ 'ಇದು?' ಎಂದು ಕೇಳಿದರು. ಬೇಂದ್ರೆ ಈಗ ಸಿಕ್ಕಿಬಿದ್ದರು ಅಂತ ಅಂದುಕೊಳ್ಳುತ್ತಿರುವಂತೆಯೇ ಅವರು ತಮ್ಮ ಕೈಕೋಲಿನ ತುದಿಯಿಂದ ಮೂರ್ತಿರಾಯರ ಸೊಂಟ ಚುಚ್ಚುತ್ತ 'ಅದು ಕಟಿ ತಾನೆ' ಅಂದರು. ಕೂಡಲೆ ಮೂರ್ತಿರಾಯರು ಬೇಂದ್ರೆಯವರ ಪಂಚೆ ಕಡೆ ಬೆರಳು ಮಾಡಿದರು. ಅದು ಕಚ್ಚೆ ಪಂಚೆ ಎಂದು ಉತ್ತರ ಬಂತು! ಮೂರ್ತಿರಾಯರು ತಮ್ಮ ಲುಂಗಿ ಕಡೆ ತೋರಿಸುತ್ತ ಇದಕ್ಕೇನು ಹೇಳುತ್ತೀರಪ್ಪಾ? ಎಂದರೆ ಬೇಂದ್ರೆ ಎಷ್ಟೂ ತಡವರಿಸದೆ ಕೊಳವಿ ಪಂಚೆ ಎಂದುಬಿಟ್ಟರು. ಅಷ್ಟು ಹೊತ್ತಿಗೆ ಕಾಫಿ ಬಂತು. ಬೇಂದ್ರೆ ಅದನ್ನು ತೆಗೆದುಕೊಳ್ಳುತ್ತ ಇಗೋ, ಇದು ಕಪ್ಪು, ಇದು ಕಾಫಿ, ಇದರ ರುಚಿ ಕಹಿ ಎಂದರು. ಅಲ್ಲಿದ್ದವರಿಗೆ ನಗು. ತೀನಂಶ್ರೀ ಅವರು ಮೂರ್ತಿರಾಯರನ್ನು ತಡೆಯುತ್ತ ಯಾಕಪ್ಪ ಸುಮ್ಮನೆ ಆಯಾಸ ಮಾಡಿಕೊಳ್ಳುತ್ತೀರಿ? ಅವರ ಹತ್ತಿರ ವಾದಮಾಡಿ ಸರಸ್ವತಿ ಗೆದ್ದಾಳೆ? ಎಂದರು. ಭಟ್ಟರ ಕಡೆ ತಿರುಗಿ ನೋಡಿದಿರಾ ಬೇಂದ್ರೆಯನ್ನು? ಶಾಸ್ತ್ರದ ಭರ್ತ್ಸನೆ ಹೇಗಿದೆ? ಹೀಗೆ ವಿನೋದವಾಗಿ ಮಾತನಾಡುವಾಗಲೂ ಅವರು ಕವಿ ಎನ್ನುವುದು ಎಷ್ಟು ಚೆನ್ನಾಗಿ ವ್ಯಕ್ತವಾಗುತ್ತೆ! ಅವರು ಮಾತನ್ನು ಹೇಗೆ ಜಗಿಯುತ್ತಾರೆ, ಬಗೆಯುತ್ತಾರೆ, ತರ್ಕವನ್ನು ಹೇಗೆ ನೆಗೆಯುತ್ತಾರೆ – ಅದೂ ತರ್ಕದ ತೋರಿಕೆಯಲ್ಲೇ! ಈ ಬೇಂದ್ರೆ ನಮ್ಮ ಕಾಲದ ಒಂದು ಅದ್ಭುತ ಎಂದರು ತೀನಂಶ್ರೀ.

# ಆಕ್ ಛೀ......................!!!!!

●ಸಿ.ಆರ್.ಸತ್ಯ

ನನ್ನ ಸೋದರಮಾವ ಕೋದಂಡೂಗೆ ಇತ್ತೀಚೆಗೆ ಚಿಂತಾಮಣಿ ಕಡಲೇಕಾಯಿ ತಿನ್ನಬೇಕು ಅಂತ ಆಸೆ ಆಗಿ ಹೋಯ್ತು. ಅವನು ಅದನ್ನು ತಿಂದು ಕೆಲವು ವರುಷಗಳಾಗಿದ್ದವಂತೆ. ಇದ್ದಕ್ಕಿದ್ದಂತೆ ಚಪಲ ಆಯ್ತು. ಹೆಂಡ್ತೀನ ಒಂದು ಕಾಲು ಕೇಜಿ ಪ್ಯಾಕೆಟ್ ಆದರೂ ತೊಗೊಂಡು ಬಾ ಅಂತ ಮೊರೆಯಿಟ್ಟ. ಅವನ ಹೆಂಡತಿ "ಬೇಡಾ ರೀ. ಮೊದಲೆ ನಿಮಗೆ ಅಲರ್ಜಿ. ಯಾವಾಗ ನೋಡಲಿ ನಿಮ್ಮ ಮೂಗಿನಲ್ಲಿ ಸೀನು ಇದ್ದೇಇರುತ್ತೆ. ಇನ್ನು ಚಿಂತಾಮಣಿ ಕಡಲೇಕಾಯಿ ಘಾಟು ನಿಮ್ಮ ಮೂಗಿಗೆ ಹತ್ತಿದರೆ, ತಡೆಯೋಕ್ಕೆ ಆಗೋದಿಲ್ಲ." ಅಂತ ಎಚ್ಚರಿಕೆ ಕೊಟ್ಳು. ಆದರೆ ಕೋದಂಡು ಸ್ವಲ್ಪ ನನಗಂತೂ ಮೊಂಡ." ಏನೂ ಆಗಲ್ಲ ಕಣೆ. ಅಕ್ಕಸ್ಮಾತ್ ಸೀನು ಬಂದರೂ ಏನಂತೆ? ದೇವರು ಮೂಗನ್ನು ಸೃಷ್ಟಿಸಿರೋದು ಸೀನೋಕ್ಕೆ ಅಲ್ವೆ?" ಅಂತ ವಾದ ಮಾಡ್ದ. " ಸರಿ, ನೀವಾಯ್ತು, ನಿಮ್ಮ ಮೂಗಾಯ್ತು. ಏನಾದರೂ ಮಾಡ್ಕೊಳ್ಳಿ" ಅಂತ ಅವನ ಹೆಂಡತಿ ಕಾಲು ಕೇಜಿ. ಪ್ಯಾಕೆಟ್ ಒಂದನ್ನ ತಂದು ಅವನಿಗೆ ಕೊಟ್ಟಳು. "ತುಂಬಾ ಥ್ಯಾಂಕ್ಸ್ ಕಣೆ. ಮಧ್ಯಾನ್ಹ ಊಟ ಆದಮೇಲೆ ಸ್ವಲ್ಪ ನಿದ್ರೆ ಮಾಡಿ ಕಾಫೀ ಜೊತೆಗೆ ತಿಂತೀನಿ" ಅಂತ ಅದಕ್ಕೆ ಮುಹೂರ್ತ ಬೇರೆ ಫಿಕ್ಸ್ ಮಾಡ್ಕೊಂಡು ಊಟ ಮಾಡಿ ಮಲಗಿದ. ಅವನ ಹೆಂಡತಿ ನಾಲ್ಕು ಗಂಟೆಗೆ ಕಾಫೀ ತಂದಿಟ್ಟಳು. ಎಲ್ಲಿಲ್ಲದ ಖುಷಿಯಿಂದ ಕೋದಂಡೂ ಚಿಂತಾಮಣಿ ಪ್ಯಾಕೆಟ್‌ಗೆ ಕೈ ಹಾಕಿದ. ಈಗ ಏನಾಯ್ತು ಅಂತ ಅವನ ಬಾಯಿಂದ ಕೇಳೋಕ್ಕೆ ಆಗದಿದ್ದರೂ, ಅವನ ಹೆಂಡತಿ ರಿಪೋರ್ಟ್ ಹೀಗಿತ್ತು:

"ನಾಲಕ್ಕೋ ಆರೋ ಕಡಲೇ ಬೀಜ ಬಾಯಿಗೆ ಹಾಕಿಕೊಂಡ್ರು ಅಂತ ಕಾಣುತ್ತೆ. ತಕ್ಷಣ ಅವರು ಕೂತಿದ್ದ ಕಡೆಯಿಂದ ಹಿರೋಶಿಮಾ ಮೇಲೆ ಅಣು ಬಾಂಬ್ ಹಾಕಿದಾಗ ಶಬ್ದ ಆಯ್ತಂತಲ್ಲ, ಹಾಗೆ ಶಬ್ದ ಬಂತು. ನಮ್ಮ ಲಿವಿಂಗ್ ರೂಮ್‌ನ ಕಿಟಕೀದು ಒಂದು ಶಟರ್ ಭುರ್ರ್ ಅಂತ ಅಲ್ಲಾಡ್ತು. ವರಾಂಡದಲ್ಲಿ ಮಲಗಿದ್ದ ನಮ್ಮ ನಾಯಿ ಗಾಬರಿಯಿಂದಲೋ ಕೋಪದಿಂದಲೋ ಭೌ ಭೌ ಅಂತ ಬೊಗಳ್ತು. ನಾನು ನನ್ನ ಸ್ಮಾರ್ಟ್ ಫೋನ್‌ನಲ್ಲಿ ಏನೋ ನೋಡ್ತಾ ಇದ್ದೆ. ವೈ ಫೈ ಬೇರೆ ಆಫ್ ಆಗೋಯ್ತು. ಏನಾಯ್ತ್ರೀ..? ಅಂತ ಕೇಳಿದೆ. ಏನಿಲ್ಲ ಕಣೆ. ಘಾಟು ಸಕತ್ತಾಗಿದೆ. ಖುಷಿ ಆಯ್ತು ಅಂತ ಅಂದರು. ಅವರ ಕಣ್ಣು ಮೂಗಿನಲ್ಲಿ ಬಳ ಬಳ ಅಂತ ನೀರು ಸುರೀತಿತ್ತು.

ಇನ್ನೂ ಹಿರೋಶಿಮಾ ಆಗಿ ಮೂರು ನಿಮಿಷಗಳೂ ಆಗಿರಲಿಲ್ಲ. ಇನ್ನೊಂದು ಸಲ ಪೊಟ್ಟಣಕ್ಕೆ ಕೈ ಹಾಕಿದ್ರು. ಈ ಸಲ ಹತ್ತೋ ಹನ್ನೆರಡೋ ಬೀಜಗಳನ್ನು ಬಾಯಿಗೆ ಹಾಕೊಂಡರು. ಹಿರೋಶಿಮಾ ಆದಮೇಲೆ ನಾಗಸಾಕಿ ಆಗದೇ ಇರುತ್ಯೆ? ಆಯ್ತು. ಈ ಸಲ ಕಿಟಕಿ ಶಟರ್ ಅಲ್ಲಾಡಿದ್ದು ಮಾತ್ರವಲ್ಲ, ಒಂದು ಶಟರ್ ನಿಂದ ಒಂದೆರಡು ಗಾಜಿನ ಪುಡಿಗಳೂ ಬಿದ್ದವು. ಈ ಸಲ ನಮ್ಮ ನಾಯಿಗೆ ದೀಪಾವಳಿ ಬಂತೇನೋ ಅಂತ ಭಯ ಆಗಿ ಬಾಲ ಮುದರಿಕೊಂಡು ಹಾಲಿನಲ್ಲಿರೋ ದಿವಾನ್ ಕೆಳಗೆ ಅವಿತುಕೊಂಡು ಬಿಟ್ಟಿತು. ಯಜಮಾನ್ರು ಸುಧಾರಿಸಿಕೊಂಡು ಕೂತಿದ್ದ ಖುರ್ಚಿ ಕೆಳಗೆ ಏನನ್ನೋ ಹುಡುಕೋದಕ್ಕೆ ಶುರು ಮಾಡಿದ್ರು ಏನು ಹುಡುಕ್ತಾ ಇದೀರಾ? ಅಂತ ಕೇಳ್ದೆ. ನನ್ನ ಕನ್ನಡಕ ಕಣೆ. ಎಲ್ಲಿಗೋ ಹಾರಿಹೋಗಿದೆ ಅಂತ ಅಂದರು. ನೋಡಿದ್ರೆ ಅದು ಹತ್ತು ಅಡಿ ದೂರದಲ್ಲಿದ್ದ ಟಿ.ವಿ. ಸ್ಟಾಂಡ್ ಕೆಳಗೆ ಕೂತಿತ್ತು. ತೆಗೆದು ಕೊಟ್ಟೆ.

ಮತ್ತೆ ಪೊಟ್ಟಣದ ಕಡೆ ಅವರು ಕೈ ಚಾಚಿದರು. ನಾನು ಸಾಕು ರೀ, ಬೇಡ. ರುಚಿ ನೋಡಿ ಆಯ್ತಲ್ಲಾ? ಇನ್ನೊಂದು ದಿವಸ ತಿನ್ನೋವಿರಂತೆ ಅಂತ ಹೇಳಿದೆ. ಅವರು ಕೇಳಬೇಕೆ? ಇನ್ನೊಂದು ದಿವಸ ಅಂದರೆ ಇವತ್ತಿನ ಘಾಟು ಕಮ್ಮಿ ಆಗಲ್ವೇನೆ?. ಕಾಫೀ ಜೊತೆಗೆ

ಇನ್ನೊಂದೆರಡು ರೌಂಡ್ ತಿಂದು ಮುಗಿಸ್ತೀನಿ ಅಂತ –ಈ ಸಲ ಹದಿನೈದು ಇಪ್ಪತ್ತು ಕಾಳುಗಳಾದರೂ ಇರಬೇಕು– ಒಂದೇ ಏಟಿಗೆ ಬಾಯಿಗೆ ಹಾಕ್ಕೊಂಡ್ರು. ಹತ್ತು ಸೆಕಂಡ್‌ಗಳು ಕಳೆಯಿತು. ಮನೆ ಒಳಗಡೆ ಏನೆಲ್ಲಾ ಅಂದರೂ ಹತ್ತು ಆಟಂ ಬಾಂಬ್‌ಗಳನ್ನು ಒಂದೇ ಏಟಿಗೆ ಸಿಡಿಸಿದ ಶಬ್ದ ಬಂತು. ಆಡುಗೇ ಮನೇಲಿ ಪೇರಿಸಿಟ್ಟಿದ್ದ ಪಾತ್ರೆಗಳು ಮಗುಚಿಕೊಂಡು ಬಿದ್ದವು. ನಮ್ಮ ನಾಯಿ ಹಿತ್ತಿಲ ಮನೆ ಕಡೆ ಓಡಿಹೋಗಿ ನಾಪತ್ತೆ ಆಯಿತು. ಟಿ.ವಿ ನಲ್ಲಿ ಆಗತಾನೇ ಶುರು ಆಗಿದ್ದ ಸೀರಿಯಲ್ ದಿಢೀರ್ ಅಂತ ಆಫ್ ಆಯ್ತು.

ಹೊರಗಡೆ ಕಾಂಪೌಂಡ್‌ನಲ್ಲಿ ನಮ್ಮ ತೆಂಗಿನ ಮರದಿಂದ ಒಂದು ಕಾಯಿ ಬಿತ್ತು ಅಂತ ಕಾಣುತ್ತೆ. ಧಪ್!! ಅಂತ ಶಬ್ದ ಮಾಡಿಕೊಂಡು ಫುಟ್ ಬಾಲ್ ತರಹ ರೀಬೌಂಡ್ ಆಗಿ ಪಕ್ಕದ ಮನೇಗೆ ಹೋಗಿ ಅಲ್ಲಿ ನಿಲ್ಲಿಸಿದ್ದ ಕಾರಿನ ವಿಂಡ್ ಶೀಲ್ಡ್ ಗೆ ಬಡೆಯಿತು. ಮತ್ತೆ ಇವರು ಬಗ್ಗಿ ಏನನ್ನೋ ಹುಡೊಕೋದಕ್ಕೆ ಶುರು ಮಾಡಿದ್ರು. ನಾನು ಏನು ಬೀಳಿಸಿಕೊಂಡ್ರೀ..? ನಿಮ್ಮ ಮೂಗೇನಾದ್ರೂ ಕಳಚಿಕೊಂಡು ಬಿತ್ತೇನ್ರೀ? ಅಂತ ಕೇಳಿದೆ. ಮೂಗು ಇರೋ ಜಾಗದಲ್ಲೇ ಇದೆ, ಆದರೆ ಚಿಂತಾಮಣಿ ಪೊಟ್ಟಣ ಕಾಣ್ತಾ ಇಲ್ಲ. ಅದರಲ್ಲಿ ಇನ್ನೂ ಸ್ವಲ್ಪ ಕಾಳುಗಳು ಇದ್ವು ಅಂತ ಹೇಳಿದ್ರು. ನೋಡಿದರೆ. ಪೊಟ್ಟಣ ಟೇಬಲ್‌ನಿಂದ ಕೆಳಗೆ ಬಿದ್ದು ಉಳಿದಿದ್ದ ಬೀಜಗಳೆಲ್ಲಾ ಬೆಡ್ ರೂಮ್ ನೆಲದ ಮೇಲೆ ಹರಡಿ ಕೊಂಡಿದ್ವು.

ಅಷ್ಟರಲ್ಲಿ ಕಾಲಿಂಗ್ ಬೆಲ್ ಶಬ್ದ ಆಯ್ತು. ಬಾಗಿಲು ತೆಗೆದರೆ ನಮ್ಮ ಪಕ್ಕದ ಮನೆಯವರು– ಕಾರಿನ ಮಾಲೀಕರು–ನಿಂತಿದ್ರು. "ನೋಡ್ರೀ, ತೆಂಗಿನ ಕಾಯಿ ಅದರ ಪಾಡಿಗೆ ಅದು ಗಾಳಿ ಬೀಸಿ ಬಿದ್ದರೆ ಏನೋ ಹೋಗಲಿ ಬಿಡಿ ಅನ್ನ ಬಹುದು. ಆದರೆ ಇದು ಮಿಸ್ಟರ್ ಕೋದಂಡು ಸೀನಿದ್ದರಿಂದ ಆಯ್ತು ಅಂತ ನನ್ನ ಹೆಂಡತಿ ಹೇಳಿದಳು. ಗಂಭೀರವಾಗಿ ನನ್ನ ಕಾರಿನ ಗಾಜನ್ನು ನಿಮ್ಮ ಖರ್ಚಿನಲ್ಲೇ ಈಗಲೇ ಬದಲಾಯಿಸಿಕೊಡಿ. " ಇಲ್ಲಾ ಅಂದರೆ...." ಅಂತ ರಾಗ ತೆಗೆದರು. " ಇಲ್ಲಾ ಅಂದರೆ. ಏನು ಸಾರ್?" ಅಂತ ಕೇಳಿದೆ. " ಒಂದು: ಪೋಲಿಸ್‌ಗೆ ಕಂಪ್ಲೆಂಟ್ ಕೊಡ್ತೀನಿ. ಎರಡು: ಬಿ.ಬಿ.ಎಂ.ಪಿ ಗೆ ಫೋನ್ ಮಾಡಿ, ಪಕ್ಕದ ಮನೇಲಿ ಸೀರಿಯಸ್ ಆಗಿರೋ ಎರಡು ಕೋವಿಡ್ ಕೇಸ್‌ಗಳಿವೆ. ಈ ವಿಷಯವನ್ನು ಬಚ್ಚಿಟ್ಟಿಕೊಂಡಿದ್ದಾರೆ. ಇವರಿಗೆ ಸಜಾ ಹಾಕಿ ಎರಡು ವರುಷ ಜೈಲ್‌ಗೆ ಹಾಕಿ ಅಂತ ಹೇಳ್ತೀನಿ." ಅಂದರು.

ಇಷ್ಟು ಹೊತ್ತಿಗೆ ಯಜಮಾನರಿಗೆ ಸ್ವಲ್ಪ ಮೈಯ್ಯಿನ ಮೇಲೆ ಕಂಟ್ರೋಲ್ ಸಿಕ್ಕಿದ ಹಾಗೆ ಕಾಣಿಸ್ತು. ಕಣ್ಣು ಮೂಗಿನಲ್ಲಿ ಬಂದ ನೀರನ್ನು ಒರೆಸಿಕೊಂಡು ವಿಷಯವನ್ನುಅರ್ಥ ಮಾಡಿಕೊಂಡರು. "ಏನೂ ಯೋಚನೆ ಮಾಡಬೇಡಿ.. ಆಕ್ ಛೀ.. ನಿಮ್ಮ ಕಾರನ್ನು.. ಆಕ್ ಛೀ... ಸರಿ ಮಾಡಿಸ್ತೀನಿ. ಐ ಯಾಮ್ ಸಾರೀ!" ಅಂತ ಸಮಜಾಯಿಸಿದ್ರು. ಆತ ಕೋಪದಿಂದ ವಾಪಸ್ಸು ಹೋದರು. ಇದಾದ ನಂತರ ಇವರ ಮೂಗಿನಿಂದ ಇನ್ನಷ್ಟು ಸ್ಫೋಟಗಳೇನೋ ಬಂದವು. ಆದರೆ ಹಿರೋಶಿಮ ನಾಗಸಾಕಿ ವೆರೈಟಿ ಆಗಿರಲಿಲ್ಲ. ಕುದುರೆ ಪಟಾಕಿಗಳಾಗಿದ್ದವು. ನಾನು ನಿಟ್ಟುಸಿರು ಬಿಟ್ಟೆ.

ತಕ್ಷಣ ಕೆಳಗೆ ಚೆಲ್ಲಿದ್ದ ಚಿಂತಾಮಣೀನ ಒಂದು ಕಾಳೂ ಬಿಡದ ಹಾಗೆ ಗುಡಿಸಿ ಹೊರಗೆ ಎಸೆದೆ. ನನ್ನ ಕಣ್ಣು ತಪ್ಪಿಸಿ ಏನಾದರೂ ತಿಂದರೆ ಇನ್ನೇನು ಗತಿ ಅಂತ. ಒಂದೆರಡು ಗಂಟೆಗಳ ಕಾಲದಲ್ಲಿ ಎಲ್ಲವೂ ಶಾಂತವಾಯಿತು. ಸುಸ್ತಾಗಿತ್ತು ಅಂತ ಕಾಣುತ್ತೆ. ಇನ್ನೂ ಸ್ವಲ್ಪ ಹೊತ್ತು ನಿದ್ರೆ ಮಾಡಿದ್ರು. ಬಚ್ಚಿಟ್ಟು ಕೊಂಡಿದ್ದ ನಾಯಿ ಒಳಗೆ ಬಂದು ವರಾಂಡದಲ್ಲಿ ತನ್ನ ಮಾಮೂಲಿ ಜಾಗದಲ್ಲಿ ಮಲಗಿಕೊಂಡ್ತು."

■

# ಆಹಾ ಸ್ಥಿತಪ್ರಜ್ಞ

**● ವಸುಮತಿ ಉಡುಪ**

'ಇದ್ದದ್ದು ಇದ್ದ ಹಾಗೆ ಹೇಳಿದ್ರೆ ಎದ್ದು ಬಂದು ಎದೆಗೆ ಒದ್ರಂತೆ' ಅನ್ನುವುದು ಪ್ರಚಲಿತದಲ್ಲಿರುವ ಹೇಳಿಕೆ ಮಾತು. ಯಾವುದೇ ವ್ಯಕ್ತಿ ತನ್ನ ದೌರ್ಬಲ್ಯವನ್ನು, ತಪ್ಪನ್ನು ಬಡಪೆಟ್ಟಿಗೆ ಒಪ್ಪಿಕೊಳ್ಳುವುದಿಲ್ಲ. ತಾನು ನಡೆದುಕೊಂಡ, ನಡೆದುಕೊಳ್ಳುವ ರೀತಿಯನ್ನು ಒಪ್ಪಿಟ್ಟುಕೊಂಡು ಮಾತಾಡುತ್ತಾ, ಅದು ಸರಿಯೆಂದು ಸಾಧಿಸಲು ನಾನಾ ಕಾರಣ ಕೊಡುವುದು ಮನುಷ್ಯಸಹಜ ಸ್ವಭಾವ. ಹೀಗೆ ಸಮರ್ಥಿಸಿಕೊಳ್ಳುತ್ತಿರುವವರ ಅಂತರಾತ್ಮಕ್ಕೆ 'ಇದು ಸರಿಯಲ್ಲ' ಎಂದು ಗೊತ್ತಿದ್ದರೂ ಅವರ ಅಹಮ್ಮೋ, ಮನೋಧರ್ಮವೋ ತಮ್ಮ ವರ್ತನೆಯನ್ನು ಸರಿಯೆಂದೇ ಸಾಧಿಸಲು ಹೊರಡುತ್ತದೆ. ಲೋಕದ ನಡವಳಿಕೆ ಹೀಗಿರುವಾಗ ಹೆಚ್ಚೇನೂ ಓದಿರದ, ಕುಟುಂಬ ನಿರ್ವಹಣೆಗಾಗಿ ದಿನಗೂಲಿ ಲೆಕ್ಕದಲ್ಲಿ ದುಡಿಯುತ್ತಿರುವ, ದುಡಿದಿದ್ದರಲ್ಲಿ ಹೆಚ್ಚಿನ ಪಾಲು ಸಾರಾಯಿ ಅಂಗಡಿಗೆ ಅರ್ಪಿಸಿ ಕೈ ಮುಗಿಯುವ, ಹೀಗಿದ್ದರೂ ತನ್ನ ಕೆಲಸವನ್ನು ನಿಷ್ಠೆಯಿಂದ ಮಾಡುವ, ಸಾಮಾನ್ಯ ಮನುಷ್ಯನೊಬ್ಬನ ಅಸಾಮಾನ್ಯ ವ್ಯಕ್ತಿತ್ವದ ಕುರಿತು ಅನಪೇಕ್ಷಿತವಾಗಿ, ಅನಿರೀಕ್ಷಿತವಾಗಿ ನನ್ನ ಗಮನಕ್ಕೆ ಬಂದ ಪ್ರಸಂಗವೊಂದನ್ನು ತಮ್ಮಂತಾ ಸಹೃದಯರ ಮುಂದೆ ತೆರೆದಿಡಲು ನನ್ನ ಕೈ ತುರಿಸುತ್ತಿದೆ. ನನಗೆ ಅನ್ನಿಸಿದಂತೆ ನಿಮಗೂ ಅನ್ನಿಸಬೇಕೆಂಬ ಕಡ್ಡಾಯವೇನಿಲ್ಲ. ಅನಿಸಬಹುದು, ಅನಿಸದಿರಲೂಬಹುದು.

ನಮ್ಮ ಮನೆಗೆ ಬಣ್ಣ ಬಳಿಯಲು ಬಂದವರಿಬ್ಬರ ನಡುವೆ ನಡೆದ ಸಂಭಾಷಣೆಯನ್ನು ಯಥಾವತ್ ತಮ್ಮ ಮುಂದಿಡುವುದು ನನ್ನ ಉದ್ದೇಶ. ಹೀಗೆ ಯಾರದೋ ಮಾತು ಕೇಳಿಸಿಕೊಳ್ಳಬೇಕೆಂಬ ಉಮೇದು ಖಂಡಿತಕ್ಕೂ ನನಗಿರಲಿಲ್ಲವೆಂದು ಈ ಮೊದಲೇ ಸ್ಪಷ್ಟಪಡಿಸಿದ್ದೇನೆ. ಮನೆಗೆ ಬಣ್ಣ ಬಳಿಯುವ ಸಂದರ್ಭದಲ್ಲಿ ಮನೆಯ ಸಾಮಾನುಗಳೆಲ್ಲಾ ಸ್ಥಾನಪಲ್ಲಟವಾಗಿ, ಅಭ್ಯಸ್ಥವಾಗಿದ್ದ ದಿನಚರಿ ಕೈ ಜಾರಿ, ಯಾವಾಗೊಮ್ಮೆ ಈ ರಾಮಾಯಣ ಮುಗಿದು ಮನೆ ಮುನ್ನಿನಂತಾಗುವುದೋ, ಬೇಕಿರಲಿಲ್ಲ ಈ ರಾದ್ಧಾಂತ ಎನ್ನುವ ಹಳಹಳಿಕೆ ಸಂಸಾರವಂದಿಗರಾಗಿ, ಸ್ವಂತ ಗೂಡು ಕಟ್ಟಿಕೊಂಡ ಪ್ರತಿಯೊಬ್ಬರೂ ಜೀವನದಲ್ಲಿ ಒಂದು ಕೈಯ ಬೆರಳೆಣಿಕೆಯಷ್ಟು ಬಾರಿಯಾದರೂ ಅನುಭವಿಸಲೇಬೇಕಾದ ಕರ್ಮ. 'ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ' ಎಂಬಂತೆ ಬಣ್ಣ ಮಾಸಿ ಕಳೆಗುಂದಿರುವ ಮನೆಯನ್ನು ಲಕಲಕಿಸುವಂತೆ ಮಾಡಬೇಕೆಂಬ ಮನುಷ್ಯಸಹಜ ತುಡಿತ, ಆದರೆ ಹತ್ತಿಪ್ಪತ್ತು ದಿನಗಳ ಆ ಅವ್ಯವಸ್ಥೆಯನ್ನು ಸೈಸಿಕೊಳ್ಳಲಾಗದ ಸಂಕಟ. ಮೊದಲಿಗೆ ಬಣ್ಣಗಳ ಆಯ್ಕೆ ಮಾಡುವುದೇ ಒಂದು ಹರಸಾಹಸ. ಒಬ್ಬರು ಏತಿ ಅಂದರೆ ಮತ್ತೊಬ್ಬರು ಪ್ರೇತಿ ಅನ್ನುತ್ತಾ, ಹೇಗೋ ಕೊನೆಗೊಂದು ಒಮ್ಮತಕ್ಕೆ ಬಂದು, ಹೀಗಿದ್ದರೂ ಬಣ್ಣ ಹಚ್ಚಿ ಮುಗಿದ ಮೇಲೆ ಮನಸ್ಸೊಳಗೆ ಏನೋ ಒಂದು ಕೊರೆ. ಜವಳಿ ಅಂಗಡಿಯಲ್ಲಿ ಸೀರೆ ಆಯ್ಕೆ ಮಾಡಿಕೊಂಡು ಬಂದ ಹೆಮ್ಮಕ್ಕಳು 'ಇದಕ್ಕಿಂತಾ ಅದನ್ನು ತೆಗೆದುಕೊಂಡಿದ್ದರೆ ಚೆನ್ನಾಗಿರುತ್ತಿತ್ತೇನೋ' ಎಂದು ಕನವರಿಸುವಂತೆ 'ಈ ಬಣ್ಣಕ್ಕಿಂತಾ ಆ ಬಣ್ಣ ಬಳಿಸಿದ್ದರೆ..' ಎನ್ನುವ ರೆಕಾರದ ಕೊರಗು. ಹೊಸದಾಗಿ ಬಣ್ಣ ಬಳಿಸಿಕೊಂಡ ಮನೆಯಲ್ಲಿ ಬಿಡುಬೀಸಾಗಿ ಮುನ್ನಿನಂತೆ ಓಡಾಡಿಕೊಂಡಿರಲಾಗದೆ

ಮನಸ್ಸಲ್ಲಿ ಸದಾ ಜಾಗ್ರತವಾಗಿರುವ ಒಂದು ಎಚ್ಚರಿಕೆಯ ಗಂಟೆ. ಸೋಫಾ, ಕುರ್ಚಿ, ಮಂಚ ಗೋಡೆಗೆ ತಾಗಿಸಬಾರದೆಂಬ, ಗೋಡೆಗೆ ತಲೆ ಒರಗಿಸಬಾರದೆಂಬ ನಮಗೆ ನಾವೇ ಹಾಕಿಕೊಂಡ ನಿಬಂಧನೆ. 'ಹೊಸದರಲ್ಲಿ ಅಗಸ ಗೋಣಿಯನ್ನು ಎತ್ತಿ ಎತ್ತಿ ಒಗೆದಂತೆ' ಬಣ್ಣ ಹಚ್ಚಿಸಿದ ಹೊಸದರಲ್ಲಿನ ಈ ಕಟ್ಟುಕಟ್ಟಳೆಗಳು ಕೆಲವು ದಿನಗಳು ಮಾತ್ರಾ ಚಲಾವಣೆಯಲ್ಲಿರುವ ನಾಣ್ಯಗಳು. ಹೊಸತು ಎನ್ನುವುದು ಸ್ವಾಭಾವಿಕವಾಗಿ ಹಳತಾಗುತ್ತದೆ. ಮೊದಲಿನ ಧೋರಣೆ ಶುರುವಾಗುತ್ತದೆ. 'ಮನೆಗಾಗಿ ನಾವಲ್ಲ, ನಮಗಾಗಿ ಮನೆ' ಎನ್ನುವಂತಾ ಒಳದನಿಯ ವಾದ ಸ್ವೀಕೃತವಾಗಿ ನಮ್ಮ ದಿನಚರಿ ಮೊದಲಿನ ಹಳಿಗೆ ಬಂದು ನಿಲ್ಲುತ್ತದೆ. ವಿಷಯಾಂತರವಾಗಿದ್ದಕ್ಕೆ ಕ್ಷಮಿಸಿ. ನಮ್ಮ ಮನೆಗೆ ಬಣ್ಣ ಬಳಿಸುತ್ತಿದ್ದೆವು ಎನ್ನುವಷ್ಟು ತಮ್ಮ ಗಮನದಲ್ಲಿದ್ದರೆ ಸಾಕೇ ಸಾಕು. ಹೀಗೆ ಬಂದ ಪೈಂಟರ್‌ಗಳಿಬ್ಬರ ನಡುವಣ ಸಂಭಾಷಣೆ ನನ್ನ ಬರೆಹದ ವಸ್ತು. ನೆನಪಿಟ್ಟುಕೊಳ್ಳುವ ಅನುಕೂಲತೆಗಾಗಿ ವ್ಯಕ್ತಿ 1 ಮತ್ತು ವ್ಯಕ್ತಿ 2 ಎಂದು ಆ ಇಬ್ಬರನ್ನು ನಿರ್ದೇಶಿಸುತ್ತೇನೆ. ಕೇಳಿದ್ದನ್ನು, ಅಲ್ಲಲ್ಲ, ಕೇಳಿಸಿಕೊಂಡಿದ್ದನ್ನು ಕೇಳಿಸಿಕೊಂಡಂತೆ ಭಟ್ಟಿ ಇಳಿಸುತ್ತೇನೆ. 'ಅವರವರ ಭಾವಕ್ಕೆ..' ಅನ್ನುವಂತೆ ಹೇಗೆ ಬೇಕಾದರೂ ಅರ್ಥೈಸಿಕೊಳ್ಳುವ ಸ್ವಾತಂತ್ರ್ಯ ನಿಮಗಿದ್ದೇ ಇದೆ.

ವ್ಯಕ್ತಿ 1– ಏನೋ, ಮಗಳು ಲೌ ಮ್ಯಾರೇಜು ಮಾಡ್ಕಂಡ್ಲಂತಲ್ಲ, ಚೆನ್ನಾಗಿ ನೋಡ್ಕಂತಾವ್ನಾ ಅಳಿಯ?

ವ್ಯಕ್ತಿ 2– ನೋಡ್ಕಂತಾನೆ ಕಣ್ಲಾ, ನಾನೇ ಹುಡುಕಿದ್ರೂ ಇಷ್ಟೊಳ್ಳೇ ಹುಡುಗ ಸಿಕ್ತಿರ್ಲಿಲ್ಲ..

ವ್ಯಕ್ತಿ 1– ಗಾರೆ ಕೆಲಸ ಮಾಡ್ತಾವ್ನಂತೆ..

ವ್ಯಕ್ತಿ 2– ಹೂಂ ಕಣಣ್ಣಾ, ಕಮಾಯಿ ಚೆನ್ನಾಗುಂಟು..

ವ್ಯಕ್ತಿ 1– ಮದುವೆ ಖರ್ಚು ತಪ್ಪಿಸ್ಕೊಂಡೇಬಿಟ್ಟಿ, ಪುಣ್ಯ ಮಾಡಿದ್ದಿ.

ವ್ಯಕ್ತಿ 2– ನಮ್ಮೈಲೇನುಂಟು, ದೇವರ ದಯ..

ವ್ಯಕ್ತಿ 1– ಸಣ್ಣದ್ದೊಂದು ಛತ್ರ ಹುಡುಕಿ ಮದುವೆ ಮಾಡ್ಕೊಡು ಅಂದಿದ್ರೆ ನಿನ್ತಾವ ದುಡ್ಡಿತ್ತನೋ? ಈ ಕಾಲ್ದಲ್ಲಿ ಲಕ್ಷಗಟ್ಲೆ ಬೇಕಾಗ್ತಿತ್ತು..

ವ್ಯಕ್ತಿ 2– ನನ್ನ ಹತ್ರ ಎಲ್ಲಿರುತ್ತೆ ದುಡ್ಡು? ನಿಮ್ಮಂತೋರ ಹತ್ರ ಸಾಲ ಎತ್ಬೇಕಾಗಿತ್ತು..

ವ್ಯಕ್ತಿ 1– ಹೂಂ, ನಿನ್ನ ಮಕಕ್ಕೆ ಯಾರು ಸಾಲ ಕೊಡ್ತಾರೆ? ಈಗಾಗ್ಲೇ ಸಿಕ್ದಲ್ಲೆಲ್ಲಾ ಸಾಲ ಎತ್ಬಿಟ್ಟಿದ್ದಿ.

ವ್ಯಕ್ತಿ 2– ಹಹ್ಹಾ..

ವ್ಯಕ್ತಿ 1– ಮಗಳು ಓಡ್ಹೋಗಿ ಮದುವೆ ಮಾಡ್ಕಂಡಿದ್ದು ಒಳ್ಳೇದಾಯ್ತು ಅನ್ನಿಸ್ತಿದೆಯೇನೋ?

ವ್ಯಕ್ತಿ 2– ಹಹ್ಹಾ, ಹಂಗೇನಿಲ್ಲ ಬಿಡು..

ವ್ಯಕ್ತಿ 1– ಸುಳ್ಹೇಳ್ಬೇಡ. ಓಡ್ಹೋಗಿ ಒಳ್ಳೇ ಕೆಲಸ ಮಾಡ್ತು ಹುಡುಗಿ. ಇಲ್ದಿದ್ರೆ ನಿನ್ನಂತಾ ಕುಡುಕ ನನ್ಮಗನ ಮಗಳನ್ನ ಯಾರು ಮದುವೆ ಮಾಡ್ಕಂತಿದ್ರು? ಮೂರು ಹೊತ್ತೂ ಕುಡಿದು ಬಿದ್ದಿರ್ತಿ..

ವ್ಯಕ್ತಿ 2– ಸತ್ಯಾನ ಸುಳ್ಳು ಅನ್ನೋಕಾಗುತ್ತಾ? ನೀ ಹೇಳ್ತಿರೋದು ನಿಜಾನೇ..

ವ್ಯಕ್ತಿ 2 ಸಿಟ್ಟು ಮಾಡಿಕೊಳ್ಳಲಿಲ್ಲ. ವ್ಯಕ್ತಿ 1ರ ಅವಹೇಳನೆಯನ್ನು ಅವಮಾನ ಎಂದು ಭಾವಿಸಲಿಲ್ಲ. 'ಹೌದು, ನಾನು ಕುಡುಕ ನನ್ಮಗನೇ..' ಎಂದು ಸಲೀಸಾಗಿ ಒಪ್ಪಿಕೊಳ್ಳುವುದು ಹೊಗಳಿಕೆ, ತೆಗಳಿಕೆಗಳನ್ನು ಸಮಾನವಾಗಿ ಸ್ವೀಕರಿಸುವ ಸ್ಥಿತಪ್ರಜ್ಞನ ಒಂದು ಲಕ್ಷಣ ಎಂದು ಆ ಕ್ಷಣದಲ್ಲಿ ನನಗನ್ನಿಸಿದ್ದು ಹೌದು. 'ನನ್ನ ದುಡ್ಡಲ್ಲಿ ನಾನು ಕುಡೀತೀನಿ, ನಿನ್ನ ಗಂಟೇನು ಹೋಗುತ್ತೆ?' ಎಂದು ಜಗಳಕ್ಕೆ ಬೀಳಬಹುದಿತ್ತು ವ್ಯಕ್ತಿ 2. ಆದರೆ ದನಿ ಕೂಡಾ ಎತ್ತರಿಸಲಿಲ್ಲ ಅವನು. ವ್ಯಕ್ತಿ 1 ಬೇಕೆಂದೇ ಇನ್ನೊಬ್ಬನ ತೇಜೋವಧೆ ಮಾಡಲು ಸಂದರ್ಭ ಬಳಸಿಕೊಂಡಿರಬಹುದು. ನಯಾಪೈಸೆ ಖರ್ಚಿಲ್ಲದೆ ಪುಗಸಟ್ಟೆ ಹುಡುಗಿಯನ್ನು ದಾಟಿಸಿಬಿಟ್ಟ ಎನ್ನುವ ಹೊಟ್ಟೆಉರಿ ಇರಬಹುದು. ಅಥವಾ ಹೀಗೇ ಸಹಜವಾಗಿ ಹೇಳಿರಲೂಬಹುದು. ಮುಖದೆದುರೇ ವಿಚಾರಿಸಿಕೊಳ್ಳಲು, ತನ್ನ ಅಭಿಪ್ರಾಯ ಹೇಳಲು ಯಾವ ಮುಲಾಜನ್ನೂ ಇಟ್ಟುಕೊಳ್ಳದ ವ್ಯಕ್ತಿ 1 ಮತ್ತು ಇದ್ದದ್ದನ್ನು ಇರುವ ಹಾಗೆ ಒಪ್ಪಿಕೊಂಡ ವ್ಯಕ್ತಿ 2, ಇವರಿಬ್ಬರ ಈ ಸಂಭಾಷಣೆಯಲ್ಲಿ ಒಂದು ವಿಶೇಷತೆ ಕಂಡಿದ್ದಕ್ಕೆ ನನ್ನ ಸ್ವಭಾವದ ವೈಪರೀತ್ಯವೂ ಕಾರಣವಾಗಿರಬಹುದು. ಯಾರೋ ಕಂಡವರ ಮನೆಯ ಕತೆಗೆ ಕಿವಿಯಾದವಳಿಗೆ ವ್ಯಕ್ತಿ 1 ಮತ್ತೂ ವಿಚಾರಿಸಿಕೊಳ್ಳುತ್ತಿರುವ ಮಾತು ಕಿವಿಗೆ ಬಿದ್ದು ಹೊಟ್ಟೆಯೊಳಗೆ ಕಸಿವಿಸಿ.

ವ್ಯಕ್ತಿ 1– ನಿನ್ಹಂಗೆ ನಿನ್ ಅಳಿಯಾನೂ ಕುಡುಕನೇನೋ?

ವ್ಯಕ್ತಿ 2– ಅಯ್ಯೋ, ಇಲ್ಲಪ್ಪಾ. ಕುಡಿಯಲ್ಲ ಅಂತ್ಲೇ ನನ್ನ ಮಗಳು ಮೆಚ್ಕೊಂಡಿದ್ದು..

ವ್ಯಕ್ತಿ 1– ಇವತ್ತು ಕುಡಿಯಲ್ಲ. ನಾಳೇನೂ ಕುಡಿಯಲ್ಲ ಅಂತ ಗ್ಯಾರಂಟಿ ಉಂಟಾ?

ವ್ಯಕ್ತಿ 2– ಅದೆಲ್ಲಾ ಹೆಂಗೆ ಹೇಳೋಕಾಗುತ್ತೆ? ಕಲೀಬೇಕು ಅನ್ನಿಸಿದ್ರೆ ಕಲಿಯೋಕೆ ಎಷ್ಟು ಹೊತ್ತು ಬೇಕು?

ವ್ಯಕ್ತಿ 1– ನೀನೇ ಇದೀಯಲ್ಲಾ ಕಲಿಸೋಕೆ..

ವ್ಯಕ್ತಿ 2– ನಾನಾ? ಇಲ್ಲಪ್ಪಾ. ಅವನು ನಮ್ಮನೆಗೆ ಬರೋದೇ ಕಮ್ಮಿ..

ವ್ಯಕ್ತಿ 1– ಮಗಳು ಬರೋಕೆ ಬಿಡಲ್ವೇನೋ?

ವ್ಯಕ್ತಿ 2– ಹಹ್ಹಾ, ನಂಗೊತ್ತಿಲ್ಲಪ್ಪಾ..

'ಇವನ ಬಾಯಿಗಿಷ್ಟು' ಎಂದು ವ್ಯಕ್ತಿ 1ನ್ನು ಸಕಾರಣವಾಗಿ ಬೈದುಕೊಂಡೆ. ಓಡಿ ಹೋಗಿ ಮದುವೆಯಾದ, ನಾನು ಎಂದೂ ನೋಡದ ಹುಡುಗಿ, ಸುಖವಾಗಿ ನೆಲೆ ನಿಲ್ಲಲಿ ಎಂದು ನನಗರಿವಿಲ್ಲದೆ ಹಾರೈಸಿದೆ. ■

---

## ಪ್ರೊಫೆಸರ್ ಹೇಳ್ತಾಯಿದ್ದರು....

ವಿ.ವಿಜಯೇಂದ್ರ ರಾವ್

ಹಿಪ್ನಾಟಿಸಂ ಅಂದರೆ.... ಏನು ಗೊತ್ತಾ ? ಒಬ್ಬನನ್ನು ತನ್ನ ವಶಕ್ಕೆ ತೊಗೊಂಡು ತನಗೆ ಅನಿಸಿದ್ದನ್ನೆಲ್ಲಾ ಅವನ ಕೈಯಲ್ಲಿ ಮಾಡಿಸೋದು...!

ಗುಂಡ ಕೋಪದಿಂದ ಉವಾಚ: ಮಣ್ಣಾಂಗಟ್ಟಿ.....ಅದರ ಹೆಸರೇ ಮದುವೆ......!

# ಉಳಿತಾಯದ ಗುಣಗಾನ

● ಜಿ.ವಿ. ನಿರ್ಮಲ

"ರೀ....." ಬಲು ಪ್ರೀತಿಯಿಂದ ಕರೆ ಬಂದದ್ದು ನೀರಜಳ ಮನದಾಳದಿಂದ.

ವಿಶ್ವನಾಥನಿಗೆ ಅವಳ ಧ್ವನಿ ಕೇಳಿದ್ರೆ ಈಗೀಗ ಖುಷಿಗಿಂತ ಭಯವೇ ಜಾಸ್ತಿ. ಇಂದು ಏನು ಮುಗಿದಿದೆ ಅಂತ ಹೇಳ್ತಾಳೋ? ಮುಖಕ್ಕೆ ಬಟ್ಟೆ ಕಟ್ಕೊಂಡು ಯಾವ ದಿಕ್ಕಿಗೆ ತನ್ನ ಪಯಣವೋ ಎಂದು ಭಯ. ಕಾಫಿಪುಡಿ ತಂದು ಬಿಡಿ. ಸ್ಯಾನಿಟೇಸರ್ ಮುಗಿದಿದೆ, ಗ್ಲೌಸ್ ಖಾಲಿಯಾಗ್ತಾ ಬಂದಿದೆ. ಹೀಗೆ ಏನಾದರೊಂದು ಬೇಡಿಕೆ ಇದ್ದೇ ಇರುತ್ತಿತ್ತು. ಈಗ ಇವೇ ಅಗತ್ಯ ವಸ್ತುಗಳು. ವಿಶ್ವ ಹೀಗೆ ಲೆಕ್ಕಾಚಾರ ಹಾಕಿ, ಉತ್ತರಿಸುವ ಮೊದಲೇ ನೀರಜಳ ಸವಾರಿ ಪ್ರತ್ಯಕ್ಷವಾಯ್ತು.

"ರೀ, ಈ ಕೊರೋನಾ ಬಂದದ್ದು ಒಳ್ಳೆಯದೇ ಆಯ್ತು" ಅಂದ್ಳು ನೀರಜ.

ಮೊದಲೇ ನೀರಜಳ ಮಾತಿಗೆ ಬೇಗ ಉತ್ತರ ಕೊಡದ ವಿಶ್ವ ಈಗ ಪೂರ್ತಿ ಮೂಕನಾದ. ತನ್ನ ಕಿವಿಯನ್ನು ತಾನೇ ನಂಬದಾದ. ಯಾವಾಗಲೂ ಕೊರೋನಾಗೆ ಶಾಪ ಹಾಕಿ, ಅಷ್ಟೋತ್ತರ ಶತನಾಮಾವಳಿಯಿಂದ ಬಾಯ್ತುಂಬ ಬೈಯ್ಯುತ್ತಿದ್ದ ನೀರಜಳಿಗೆ ಇಂದೇನಾಯ್ತು ಎಂದು ಗರಬಡಿದಂತೆ ನಿಂತ. ಈಗೀಗ ಎಷ್ಟೋ ಜನರಿಗೆ ಕೊರೋನಾದಿಂದ ಖಿನ್ನತೆ ಉಂಟಾಗಿ, ಬುದ್ಧಿವಿಕಲ್ಪವಾಗುವ ಸಂಭವವೂ ಇದೆ ಎಂದು ಎಲ್ಲೋ ಓದಿದ ನೆನಪು ವಿಶ್ವನ ಭಯವನ್ನು ದ್ವಿಗುಣಗೊಳಿಸಿತು. ಅಷ್ಟರಲ್ಲಿ

"ರೀ, ಈಗ ಕೊರೋನಾಗೆ ಹೆದರಿ ಮನೆಯಲ್ಲೇ ಅಡಗಿ ಕುಳಿತಿದ್ದೀವಲ್ಲಾ ಖರ್ಚು ಎಷ್ಟು ಕಡಿಮೆಯಾಗಿದೇಂತ. ಕಳೆದ ಒಂದು ವರ್ಷದಿಂದ ಎಷ್ಟೊಂದು ಉಳಿತಾಯ ಆಗಿದೆ ಗೊತ್ತಾ?" ಎಂದಳು.

ವಿಶ್ವನಿಗೆ ಹೋದ ಜೀವ ಬಂತು. "ಹೌದು ನೀರಜ ನೀನು ಹೇಳ್ತಾ ಇರೋದು ಸರಿ. ನಾನು ಎಷ್ಟು ಸಾರಿ ಹೇಳಿದ್ರೂ ಕೇಳ್ತಾ ಇರ್ಲಿಲ್ಲ. ಅನಾವಶ್ಯಕವಾಗಿ ಖರ್ಚು ಮಾಡ್ತಾ ಇದ್ದಿ. ಈಗ ಸರ್ಕಾರದವ್ರೇ ಕೈಕಾಲು ಕಟ್ಟಿ ಕೂಡಿಸಿದ್ದಾರೆ" ಎಂದು ಮೇಲ್ಮೈ ಪಡೆದ.

"ಹಾಗಾದ್ರೆ ಹೇಳಿ. ಎಲ್ಲೆಲ್ಲಿ ಉಳಿತಾಯವಾಗಿದೆ ಅಂತ"

ಈಗ ಪೇಚಿಗೆ ಸಿಕ್ಕ ವಿಶ್ವನಾಥ. ಏನೋ ಒಂದು ಮಾತು ಅಂತ ಹೇಳಿದ್ನೇ ಹೊರತು ಎಲ್ಲಿ ಉಳಿತಾಯವಾಗಿದೆ? ಹೇಗೆ? ಅಂತ ಅವನು ಯೋಚನೆ ಮಾಡಿ, ನೀರಜಳಿಗೆ ಲೆಕ್ಕ ಒಪ್ಪಿಸಕ್ಕೆ ಸಿದ್ಧತೆ ಮಾಡ್ಕೊಂಡಿರಲಿಲ್ಲ.

"ಇಲ್ಲ ಮಾರಾಯ್ತಿ. ಲೇಡೀಸ್ ಫಸ್ಟ್. ನೀನು ಮೊದ್ಲು ಹೇಳು. ನೀನೇನಾದ್ರೂ ಬಿಟ್ಟಿದ್ರೆ ನಾನು ಸೇರಿಸ್ತೀನಿ" ಅಂತ ಜಾರಿಕೊಂಡ.

ನೀರಜನಿಗೆ ರೆಕ್ಕೆ ಪುಕ್ಕ ಬಂತು. "ನೋಡ್ರಿ ಒಂದು ವರ್ಷದಿಂದ ಯಾವ ಪಾರ್ಟಿ ಇಲ್ಲ. ಸಭೆ, ಸಮಾರಂಭಗಳಿಲ್ಲ. ಮದುವೆಗಳಿಗೆ ನಾವಂತೂ ಹೋಗಿಲ್ಲ. ಆಟೋ ಚಾರ್ಜು ಇಲ್ವೇ ಇಲ್ಲ. ತಿಂಗಳಿಗೆ ಕನಿಷ್ಠ ಐನೂರರಿಂದ ಏಳು ನೂರರವರೆಗೆ ಖರ್ಚಾಗುತ್ತಿರ್ಲಿಲ್ವೇ?"

"ಖಂಡಿತವಾಗ್ಲೂ. ದೂರದ ಜಾಗ ಅಥ್ವಾ ಹೆಚ್ಚು ಸಮಾರಂಭಗಳಿದ್ರೆ ಮತ್ತಷ್ಟು ಜಾಸ್ತಿ."

"ಆಮೇಲೆ ಮದುವೆ, ಮುಂಜಿ, ಗೃಹಪ್ರವೇಶ, ಷಷ್ಠಿಪೂರ್ತಿ ಶಾಂತಿ ಅಂತ

ಹೋಗಿದ್ರೆ ಎಷ್ಟು ಉಡುಗೊರೆಗಳು ಕೊಡ್ಬೇಕಾಗಿತ್ತು. ಈಗ ಮಾಡೋವ್ರಿಗೂ ಖರ್ಚಿಲ್ಲ. ನೋಡೋವ್ರಿಗೂ ಖರ್ಚಿಲ್ಲ. ಐವತ್ತು ಜನಕ್ಕೆ ಒಂದೊಪ್ಪತ್ತು ಊಟ ಹಾಕಿ, ಯೂ–ಟ್ಯೂಬ್ನಲ್ಲಿ ಸಮಾರಂಭದ ವಿಡಿಯೋ ಹಾಕಿದ್ರೆ ಮುಗ್ದೋಯ್ತು. ಅಲ್ಲಾ ಈ ತರಹದ ಕಾನೂನು ಮುಂಚೇನೇ ಬಂದಿದ್ರೆ ಎಷ್ಟು ಉಳಿತಾಯ ಆಗ್ತಿತ್ತು ಅಲ್ವಾ?"

"ಹೌದು ನೀರಜಾ. ಸಮಾರಂಭಕ್ಕೆ ಬನ್ನಿ ಅಂತ ಮನೆಮನೆಗೆ ಹೋಗಿ ಕರೆಯುವ ಶ್ರಮವೂ ಇಲ್ಲ. ಕರೆಯೋಲೆ ಕಳ್ಸೋ ತಾಪತ್ರಯವೂ ಇಲ್ಲ. "Stay home, Stay at home Seek your blessing" ಅಂತ ವಾಟ್ಸಪ್ನಲ್ಲಿ ಕಳ್ಸಿದ್ರೂ ಮುಗಿದೇ ಹೋಗ್ತಿತ್ತು."

"ಈಗೀಗ ದುಡ್ಡಿರೋರು ಒಂದೊಂದು ಕರೆಯೋಲೆಗೇ ಸಾವಿರಾರು ರೂಪಾಯಿ ಖರ್ಚು ಮಾಡ್ತಾರಂತೆ. ಅವರ ಪಾಡು ಬಿಡಿ. ಮುಂಚಿನ ಕಾಲ್ದಲ್ಲಿ 'ಅತ್ತೂ ಕರೆದು ಔತಣಕ್ಕೆ ಕರೆದ್ರು' ಅಂತ ವ್ಯಂಗ್ಯ ಮಾಡ್ತಿದ್ವಿ. ಈಗ ಆ ದೂರ, ಗುಂಪು, ಗಲಾಟೆ ನೆನಸಿಕೊಂಡ್ರೆ ಔತಣಕ್ಕೆ ಕರೆದ್ರೆ ಅಳು ಬರುತ್ತೆ. ಅಲ್ವಾ?"

"ಹೌದ್ಹೌದು. ನಿಜವಾದ ಮಾತು ಅಂದ್ರೆ ಇದಪ್ಪಾ. ಹಣ ಜಾಸ್ತಿ ಇರೋವ್ರರ ಕತೇನೇ ಬೇರೆ. ಒಂದು ಮದುವೆ ಅಥವಾ ಸಮಾರಂಭ ಆದ್ರೆ ಖರ್ಚಿನ ಜೊತೆಗೆ ಎಷ್ಟೋ ಜನರ ಹೊಟ್ಟೆ ತುಂಬತ್ತೆ. ಈಗ ಅಡುಗೆಯವರು, ಪುರೋಹಿತರು ಎಲ್ರೂ ಪಾಡು ಪಡ್ತಾ ಇರೋದೂ ನಿಜ. ಛತ್ರ ಕಟ್ಟಿಸಿ ಸಿಕ್ಕಾಪಟ್ಟೆ ಬಾಡಿಗೆ ವಸೂಲಿ ಮಾಡ್ತಾ ಇದ್ದೋವ್ರಿಗೂ ಕಷ್ಟವೇ. ಇರ್ಲಿ ಈಗ ಮತ್ಯಾವ ಉಳಿತಾಯಕ್ಕೆ ಬರೋಣ"

"ಸಾಲು ಸಾಲು ಹಬ್ಬಗಳು ಬಂದು ಹೋಗ್ತಾ ಇವೆ. ಯಾವ್ದನ್ನ ಮಾಡೋ ಹಾಗಿದೆ? ಮನೆಯೇ ಮಂತ್ರಾಲಯ ಅಂತ ದೇವರ ಮನೇ ಒಳ್ಗೇ ಹಬ್ಬ ಮುಗೀತಾ ಇದೆ. ಯಾರನ್ನೂ ಅರಿಶಿನ ಕುಂಕುಮಕ್ಕೂ ಕರೆಯೋ ಹಾಗಿಲ್ಲ. ಎಲಡಿಕೆ, ದಕ್ಷಿಣೆ ಖರ್ಚೇ ಇಲ್ಲ"

"ಹೌದು ಹಬ್ಬದ ಸಾಮಾನು ಅಂತ ಬೀದಿ, ಬೀದೀಲಿ ಅರಿಶಿನ, ಕುಂಕುಮ, ಮಾವಿನಸೊಪ್ಪು, ಬಾಳೆಕಂಬ ಮಾರಿ ಹೊಟ್ಟೆ ತುಂಬಿಸ್ಕೋತಾ ಇದ್ದವ್ರಿಗೆ ದೇವ್ರೇ ಗತಿ"

"ಹೌದು ಪಾಪ. ಈ ವರ್ಷ ನಾವು ಯಾತ್ರೆಗೇಂತ ನಮ್ಮ ಕರ್ನಾಟಕದೊಳ್ಗೂ ಎಲ್ಲೂ ಹೋಗಿಲ್ಲ. ಪ್ರವಾಸವೂ ಇಲ್ಲ. ಹೊರ ದೇಶವೂ ಇಲ್ಲ; ನಮ್ಮ ದೇಶವೂ ಇಲ್ಲ. ನಮ್ಮ ಚಪ್ಪಲಿ ಸವಿದಿಲ್ಲ. ಬೂಡ್ಸ್ ನೋಡೇ ಇಲ್ಲ. ಅಂದ್ಮೇಲೆ ಎಷ್ಟೊಂದು ಉಳಿತಾಯ ಅಲ್ವೇನ್ರೀ?"

"ನಿಜ. ಮತ್ತೆ ಆ ಗೈಡ್ಗಳಿಗೆ ಹೊಸ ಚಪ್ಪಲಿ ಇರ್ಲಿ ಊಟಕ್ಕೂ ಕಲ್ಲು ಬಿದ್ದಿದೆ ಅನ್ನೋದನ್ನ ಮರೀಬಾರ್ದು. ಅದೇನೋ ನನ್ನ 'ಬಕೆಟ್ ಲಿಸ್ಟ್' ಅಂತ ಆಗಾಗ್ಗೆ ಮುಂದೆ ಹಿಡೀತಿದ್ಯಲ್ಲ ಅದೆಲ್ಲಿ ಹೋಯ್ತು?

"ಅಯ್ಯೋ ಈಗ ಬರೀ ಬಕೆಟ್ ಹಿಡಿಯೋದಕ್ಕೆ ಸಮಯ ಸಾಕಾಗ್ತಾ ಇಲ್ಲ. ಇನ್ನು ಬಕೆಟ್ ಲಿಸ್ಟ್ ಎಲ್ಲಿ ಬಂತು? ಮತ್ತೆ.. ಮತ್ತೆ"

"ಏನದು 'ಮತ್ತೆ, ಮತ್ತೆ' ಅಂತ ತೊದಲ್ತಾ ಇದಿ. ಒಳ್ಳೆ ಕುಡಿದವ್ರು ಮಾತಾಡೋ ತರಹ."

"ಅಲ್ಲಾರೀ. ಮತ್ತೆ ನಾನು ಏನು ಹೇಳ್ಬೇಕೂ ಅಂತಿದ್ದೆ ಅಂದ್ರೆ..."

"ಏನದು ಮತ್ತು ಅನ್ನೋದು ಬಿಟ್ಟು ಮುಂದೆ ಹೋಗ್ತಾ ಇಲ್ಲ. ಓ ಮತ್ತು ಬರುವ ಪಾನೀಯದ ವಿಷ್ಯ ಹೇಳಕ್ಕೆ ಸಂಕೋಚನಾ? ನಾನು ಯಾವತ್ತೂ ಅದನ್ನ

ಮೂಸಿ ಕೂಡ ನೋಡಿಲ್ಲ. ಕನಸಿನಲ್ಲೂ ಕುಡ್ದಿಲ್ಲ.. ಅದು ನಿಂಗೂ ಗೊತ್ತು. ಅದ್ರಿಂದ ಅಂದು ಖರ್ಚೂ ಆಗ್ಲಿಲ್ಲ. ಇಂದು ಉಳಿತಾಯವೂ ಇಲ್ಲ."

"ಅದು ನಂಗೊತ್ತು."

"ಹಾಗಾದ್ರೆ ಈಗ ಉಳಿತಾಯ ಆಗಿರೋದ್ರಿಂದ ಅದನ್ನೆಲ್ಲಾ ಅಭ್ಯಾಸ ಮಾಡ್ಕೋಬೇಕಾ?"

"ಅಬ್ಬಬ್ಬಾ! ಸ್ವಲ್ಪ ಇರಿ. ಎಷ್ಟು ಅವಸರ. ನಾನು ಅರಳುಹುರಿದ್ಹಾಗೆ ಮಾತಾಡ್ತೀನಿ ಅಂತೀರಿ. ಈಗ ನೀವು ಮಾಡ್ತೀರೋದೇನು?"

"ಆದ್ರೆ ನನ್ನ ಮಾತು ಕೇಳು. ಕುಡಿಯೋವ್ರು ಮಾತ್ರ ಏಕೆ? ಬೇರೆಯವ್ರೂ ಈಗ ಆಲ್ಕೋಹಾಲ್ಗೆ ದುಡ್ಡು ಸುರೀಲೇ ಬೇಕು. ಯಾಕ್ಹೇಳು.? ಸ್ಯಾನಿಟೈಜರ್ ಅಂತ ಕೊಂಡ್ಕೋತೀವಲ್ಲಾ ಅದ್ರಲ್ಲಿ ಆಲ್ಕೋಹಾಲ್ ಅಂಶ ಇರತ್ತೆ. ತಿಳ್ಕೋ."

"ನಾನು ಹೇಳ್ಬೇಕೂಂತ ಇದ್ದದ್ದು ಆ ವಿಷ್ಯ ಅಲ್ವೇ ಅಲ್ಲ."

"ಸರಿ, ಸರಿ. ಹೇಳು ಅದೇನು ಹೇಳ್ತೀಯೋ"

"ನಾನು ಒಂದು ವರ್ಷದಿಂದ ಬ್ಯೂಟಿ ಪಾಲರ್ಗೇ ಹೋಗಿಲ್ಲ. ಏನೂ ಖರ್ಚಿಲ್ಲ. ಕೂದಲಿಗೆ ಡೈ ಕೂಡ ಮಾಡಿಲ್ಲ. ಎಷ್ಟೊಂದು ಉಳಿತಾಯ ಆಗಿದೆ ಗೊತ್ತಾ?"

"ಅಬ್ಬಾ! ಇದನ್ನ ಹೇಳಕ್ಕೆ ಇಷ್ಟೊಂದು ಪೀಠಿಕೇನಾ? ನಾನು ಮುಂಚೇನೇ ಹೇಳ್ತಿದ್ದೆ. ಅವೆಲ್ಲಾ ಯಾಕೆ? ನಾಚುರಲ್ ಆಗಿದ್ರೆ ಸಾಕು ಅಂದಾಗ, ಅದಕ್ಕೆಲ್ಲಾ ಎಷ್ಟು ಮಹಾ ಖರ್ಚಾಗತ್ತೆ. ಈಗಿನ ಕಾಲದಲ್ಲಿ ಅವೆಲ್ಲಾ ಇಲ್ದೇ ಇರಕ್ಕಾಗಲ್ಲ ಅಂತ ದೊಡ್ಡ ಭಾಷಣಾನೇ ಬಿಗಿದಿದ್ದೀ?"

"ಹೌದು ಇವತ್ತೂ ಅದೇ ಹೇಳ್ತೀನಿ. ಈಗ ಮನೇಲೇ ಇರೋದ್ರಿಂದ ನೀವೊಬ್ರೇ ತಾನೆ ನನ್ನ ಮುಖ ನೋಡೋದು? ನೀವು ನೋಡೋದೂ ಅಷ್ಟಲ್ಲೇ ಇದೆ. ಅದೂ ಅಲ್ದೆ ಪಾತ್ರೆ ತೊಳೆದು, ಕಸ ಗುಡ್ಸಿ, ಎಲ್ಲಾ ಕೆಲ್ಸ ಮಾಡಿದ್ಮೇಲೆ ಅದಕ್ಕೆಲ್ಲಾ ಟೈಂಮೂ ಇರಲ್ಲ; ಶಕ್ತೀನೂ ಇರಲ್ಲ."

"ಅಂತೂ ನಿನ್ನ ಪಟ್ಟು ಬಿಟ್ಟುಕೊಡಲ್ಲ. ಹೋಗ್ಲಿ, ಯಾವತ್ತೂ ಅದರ ಖರ್ಚಿನ ಬಗ್ಗೆ ನಾನು ಕೇಳಿಲ್ಲ. ಈಗ ಇದ್ರಿಂದ ಎಷ್ಟು ಉಳಿತಾಯ ಆಗಿದೆ ಅಂತ ನೀನೇ ಹೇಳು"

"ಆಂ..., ಅದು ವೈಯಕ್ತಿಕ ರೀ. ಅದನ್ನು ನೀವು ಕೇಳಬಾರ್ದು. ನಾನು ಹೇಳಲೂ ಬಾರ್ದು."

"ಮತ್ತೆ ಲೆಕ್ಕ ತಿಳ್ಯೋದು ಹೇಗೆ? ಸರ್ಯಾಗೋದು ಹೇಗೆ?"

"ಅದನ್ನ ಇತರೆ ಅಂತ ಬರೀತೀನಿ. ಆಯ್ತಾ?"

"ಹುಂ. ಶುರು ಮಾಡಿದ್ದು ನೀನೇ ತಾನೆ. ನಿನ್ನಿಷ್ಟ. ಆಯ್ತು ಒಪ್ಕೊಂಡೆ. ಬೇಗ ಹೇಳ್ತಾ ಹೋಗು. ಮುಂದ, ಮುಂದ?"

"ಏನ್ರೀ ಅದು ಮುಂದ ಮುಂದ. ಅದ್ಯಾವ್ದೋ ಸಿನಿಮಾದಲ್ಲಿ ಕಮಲ ಹಾಸನ್ ಹೇಳೋ ಹಾಗೆ ಹೇಳ್ತಾ ಇದೀರಾ?"

"ಹಾ, ಈಗ ನಾನು ಹೇಳ್ತೀನಿ ಎಷ್ಟೋ ತಿಂಗಳಿಂದ ಯಾವ ಸಿನಿಮಾಗೂ ಹೋಗೇ ಇಲ್ಲ ಅಮ್ಮಾವ್ರು. ಅಲ್ವಾ?"

"ಅಯ್ಯೋ, ಅದ್ರಲ್ಲೇನು? ಸಿನಿಮಾದವ್ರೇ ಬಾಗಿಲು ಮುಚ್ಚಿ ಕೂತಿದ್ದಾರಲ್ಲಾ? ನಾನೂ ಹೋಗಿಲ್ಲ. ಯಾರೂ ಹೋಗೋ ಹಾಗೇ ಇಲ್ಲ. ಅದು ಸಾಕಷ್ಟು ಉಳಿತಾಯದ ಲೆಕ್ಕ ಕೂಡ. ಸಿನಿಮಾ, ಹೋಟ್ಲು, ಕುರುಕು ತಿಂಡಿ, ಆಟೋ ಅಬ್ಬಬ್ಬಾ!"

"ನೋಡಿದ್ಯಾ. ಎಷ್ಟು ದುಂದು ವೆಚ್ಚ ನಿಂತ್ಹಂಗಾಯ್ತು."

"ದುಂದು ವೆಚ್ಚ ಅಂದ್ರೆ ಏನು? ನಮ್ಮ ಪಾಲಿಗೆ ವ್ಯರ್ಥ ಇರಬಹ್ದು. ನಾವಂತೂ ನಾಲ್ಕಾರು ಸಾವಿರ ಉಳಿಸಿದ್ದು ನಿಜ. ಆದ್ರೆ ಎಷ್ಟೊಂದು ಕಲಾವಿದರು, ಕೆಲ್ಸದವರು ಹೊಟ್ಟೆಗಿಲ್ಲದೆ ವದ್ದಾಡ್ತಾ ಇದಾರೆ ಅಲ್ವಾ? ಪಾಪ."

"ಸಿನಿಮಾಗಳು ಮಾಲ್ನಲ್ಲಿ ಇದ್ರಂತೂ ಮತ್ತೊಂದಷ್ಟು ಖರ್ಚಿಗೆ ದಾರಿ. ಅಲ್ಲಿರೋ ಅಂಗಡಿಗಳಿಗೆ ನುಗ್ಗಿ ಬೇಕೋ ಬೇಡ್ವೋ ಏನೇನೋ ಕೊಂಡುಕೊಂಡು ಬರ್ತೀರಿ. ಅದನ್ಯಾಕೆ ಬಿಟ್ಟೆ?"

"ನೋಡ್ರೀ, ನಾವು ಗಂಡಸ್ರ ತರಹ ಯಾವ್ದೋ ಪ್ಯಾಂಟು, ಅದಕ್ಕೊಂದು ಷರ್ಟ್ ಹಾಕಕ್ಕೆ ಆಗಲ್ಲ. ಲೇಟೆಸ್ಟ್ ಫ್ಯಾಷನ್ ಜೊತೆ ಇದ್ರೇನೇ ಜೀವನದಲ್ಲಿ ನಮಗೂ ಉತ್ಸಾಹ, ಬೇರೆಯವ್ರೂ ಗೌರವ ಕೊಡ್ತಾರೆ. ನೀವೇನು ಕಡಿಮೆ. ನಿಮ್ಮ ವೇಷದ ಬಗ್ಗೆ ಯೋಚಿಸ್ದೇ ಇದ್ರೂ ಅಲ್ಲಿ ಬಂದ ಹೆಂಗಳೆಯರ ವೇಷ ನೋಡಿ ಒಳಗೊಳ್ಗೇ ಮಜಾ ತೊಗೋಳಲ್ವಾ?"

"ಅಲ್ವೇ ನಾವೀಗ ನೋಟು ಉಳಿಸೋ ವಿಷ್ಯ ಮಾತಾಡ್ತಾ ಇದೀವಿ. ನೋಟ ಉಳಿಸೋ ಬಗ್ಗೆ ಅಲ್ವಲ್ಲಾ? ಅದಕ್ಕೇನು ನಾವು ಖರ್ಚು ಮಾಡ್ಬೇಕಾ?"

"ಅಂತೂ ನಾನು ಜಟ್ಟಿ ಆದ್ರೆ ನೀವು ಜಗಜಟ್ಟಿ. ಪಟ್ಟಿಗೆ ಪಟ್ಟು ಹಾಕ್ತೀರಿ"

"ಈಗ ಇಬ್ರೂ ಕುಸ್ತಿ ಮಾಡ್ತಾ ಇರೋಣ್ವೋ ಅಥ್ವಾ ನಿನ್ನ ಪಟ್ಟಿ ಮುಂದುವರಿಸ್ತೀಯೋ? ಹಾಗೇನಾದ್ರೂ ಮುಗಿದಿದ್ರೆ ನಾನು ಹೋಗ್ಲಾ?"

"ಅಬ್ಬಬ್ಬಾ, ನಿಮಗಂತೂ ಪೇಪರ್ ಓದೋಕ್ಕೆ ಆತುರ. ಆಗ್ಲಿಂದ ಹೋಗ್ಲಾ, ಹೋಗ್ಲಾ ಅಂತ ಕೇಳ್ತಾನೇ ಇದೀರಲ್ಲಾ? ಆ ಸುದ್ದಿಗಳಿಂದನೇ ಅರ್ಧ ತಲೆ ಕೆಟ್ಹೋಗಿದೆ."

"ಅಯ್ಯೋ ನೀರಜಾ. ನಾವು ತರಿಸ್ತಿರೋದು ಒಂದೇ ಒಂದು ಪೇಪರ್. ಕೆಲವರು ಪೇಪರ್ ಕೂಡ ನಿಲ್ಸಿದಾರೆ. ಗೊತ್ತಲ್ವಾ?"

"ಹೌದ್ಹೌದು. ಅದೂ ನಿಲ್ಸಿದ್ರೆ ಉಳಿತಾಯವಾಗ್ತಾ ಇತ್ತು. ನೀವೆಲ್ಲಿ ಕೇಳ್ತಿರಿ?"

"ನೀರಜಾ, ಪೇಪರ್ನೋರ್ವ್ರಿಗೂ ಖರ್ಚು ಇರತ್ತೆ. ಅವರ ಬದುಕು ನಡೀಬೇಡ್ವಾ?"

"ಹೌದುರೀ. ನಾನು ಏನೇನೋ ಯೋಚಿಸ್ತಾ ಇದ್ದೆ. ಈಗ ನಂಗೂ ನೀವು ಹೇಳೋದೇ ಸರಿ. ಅಂತ ಅನ್ನಿಸ್ತಾ ಇದೆ. ಈ ಕೋವಿಡ್ ಪಿಡುಗಿನಿಂದ ಎಷ್ಟೋ ಜನದ ಬದುಕಿನಲ್ಲಿ ಕೋಲಾಹಲವೇ ಆಗಿದೆ. ಗಾಡಿ ಮಾರಾಟಗಾರರು, ಕೂಲಿಯವರು, ಆಟೋ ಡ್ರೈವರ್ಗಳು. ಓಲಾ ಓಡ್ಸೋವ್ರು ಈ ಪಟ್ಟಿಗೆ ಕೊನೇನೇ ಇಲ್ಲ. ಬಡ ಜನರ ಪಾಡು ದೇವರೇ ಗತಿ."

"ಇಷ್ಟೆಲ್ಲಾ ಮಾಡಿ, ಕೈಕಾಲು ಕಟ್ಕೊಂಡು, ಮುಖಕ್ಕೆ ಬಟ್ಟೆ ಕಟ್ಕೊಂಡು ಪಾಡು ಪಟ್ಮೇಲೂ ಮನೇಲಿ ಯಾರಿಗಾದ್ರೂ ಕೋವಿಡ್ ಬಂದ್ರೆ ಉಳಿತಾಯವೂ ಚಟ್. ಅವ್ರೂ ಗೊಟಕ್. ಹೀಗಾಗ್ಬಿಟ್ರೆ....? ಈಗ್ಹೇಳು ಕೊರೋನಾ ಬಂದದ್ದು ಒಳ್ಳೇದಾಯ್ತಾ? ಇಂಥಾ ಉಳಿತಾಯ ಬೇಕಾ?"


ನೀರಜಾಳ ಮಾತು ಗಂಟ್ಲಲ್ಲೇ ಉಳೀತು.

■

ಬೀಚಿ ಪ್ರಕಾಶನದ

ಜನರು ಕೇಳಿದ
ಪ್ರಶ್ನೆಗಳಿಗೆ ಬೀಚಿ
ಅವರು ಸ್ವಾರಸ್ಯವಾಗಿ
ಉತ್ತರ ನೀಡಿದ್ದಾರೆ.

ಉತ್ತರಭೂಪ
ಪ್ರಶ್ನೋತ್ತರಗಳ
ಸಂಗ್ರಹ



# ಉತ್ತರಭೂಪ

"ತಾಯಿ" ಎಂಬ ಎರಡು ಅಕ್ಷರಗಳ ಬಗ್ಗೆ ನಿಮ್ಮ ಅಭಿಪ್ರಾಯ?

"ಜಗತ್ತು" ಎಂಬ ಮೂರು ಅಕ್ಷರಗಳ ಶಬ್ದಕ್ಕಿಂತಲೂ ಇದು ಬಹಳ ದೊಡ್ಡದು.

–ಬೀchi

ಭರತನಾಟ್ಯ ಹಾಗೂ ಕ್ಯಾಬರೆ ನೃತ್ಯಗಳಲ್ಲಿ ಕಲಿಯಲು ಸುಲಭ ಯಾವುದು ಸಾರ್?

ಭರತನಾಟ್ಯ ಕಲಿಯುವುದು ಕಷ್ಟ, ಕ್ಯಾಬರೆ ನೃತ್ಯವನ್ನು ಮರೆಯುವುದು ಕಷ್ಟ.

ಬೀchi

ವಿದೇಶಿಯರಂತೆ ನಾವೂ ಸಹ ತುಟಿಗೆ ತುಟಿ ಜೋಡಿಸಿ. .....

ಈ ಮಹಾ ಕಾರ್ಯಕ್ಕೆ ವಿದೇಶಿಯರೇ ಬೇಕೇ? ಅಮ್ಮ ಅನ್ನಿ, ಈಗ ತುಟಿಗೆ ತುಟಿ ಜೋಡಣೆ ಆಗಲಿಲ್ಲವೇ?

ಬೀchi

ಬೆಲೆ : **299/-** ನಮ್ಮ ಅಪರಂಜಿ ಬಳಗಕ್ಕೆ ವಿಶೇಷವಾಗಿ
10% ರಿಯಾಯಿತಿ ಹಾಗೂ ಅಂಚೆ ಉಚಿತ.

ಆಸಕ್ತರು ಸಂಪರ್ಕಿಸಿ: **M: 9845264304**
**Phonepay, Google pay** ಜೊತೆಯಲ್ಲಿ ತಮ್ಮ ವಿಳಾಸವನ್ನು
ಈ ನಂಬರಿಗೆ ಕಳುಹಿಸಿ **9845264304**
ಇತರ ಪುಸ್ತಕಗಳ ಮಾಹಿತಿ ಪಡೆಯಲು ನಮ್ಮ ಅಂತರ್ಜಾಲ www.beechi.in

● ದಂನಆ

- ಬೆಳಿಗ್ಗೆ ರನ್ ಫಾರ್ ಲೈಫ್. ಸಂಜೆ ರಮ್ ಫಾರ್ ಲೈಫ್.
- ಒಳ್ಳೇ ಬದುಕಿದ್ದರೆ ಸಾಲದು ಒಳ್ಳೇ ಸಾವು ಬರಬೇಕು ಎಂಬುದೇ ಕೊರೊನಾ ಕಲಿಸಿರುವ ಪಾಠ. ಏನಂತೀರಿ?
- ನಮಗೆ ಏನೂ ಆಗದೇ ಇದ್ದರೂ ಹಸಿವೆಯಂತೂ ಆಗೇ ಆಗುತ್ತದೆ.
- ಈಗೀಗ ಕೆಟ್ಟವರಾದ ಮೇಲೆ ಅಪರಾಧ ಚಟುವಟಿಕೆಗಳಲ್ಲಿ ತೊಡಗುವುದಕ್ಕಿಂತ ಹೆಚ್ಚಾಗಿ ಅಪರಾಧ ಚಟುವಟಿಕೆಗಳಲ್ಲಿ ತೊಡಗಿ ಕೆಟ್ಟವರಾಗುತ್ತಿರುವ ಸಂಖ್ಯೆ ಹೆಚ್ಚುತ್ತಿರುವಂತಿದೆ.
- ದಿ ಬೆಸ್ಟ್ ಪೇಡ್ ರೈಟರ್ಸ್ ರೈಟ್ ಪ್ರಿಸ್ಕ್ರಿಪ್ಷನ್ಸ್.
- ನಾನು ನನ್ನ ಗಂಡ ವಾದ ಮಾಡುವುದೇ ಇಲ್ಲ. ಅವರು ಸರಿ ಇದ್ದಾಗಲೂ ಸಹ? ಅಂತಹ ಪರಿಸ್ಥಿತಿ ಬರುವುದೇ ಇಲ್ಲ.
- ನನಗೆ ಬಿಳಿ ಕೂದಲಿನ ಮೇಲೆ ಏನೂ ದ್ವೇಷ ಇಲ್ಲ. ಅವೇ ಉದುರುವಂತಿದ್ದರೆ..
- ಒಂದು ಪುಸ್ತಕದಲ್ಲಿ ಕಂಡ ಬುಕ್ ಮಾರ್ಕ್ ಮೇಲೆ ಹೀಗೆ ಯಾರೋ ಬರೆದಿದ್ದರು: ನಾನು ಇಲ್ಲಿ ನಿದ್ದೆ ಹೋದೆ!
- ಯಾರನ್ನಾದರೂ ಯಾಕೆ ದೂಷಿಸಬೇಕು? ಒಳ್ಳೆ ಮನುಷ್ಯ ಖುಷಿ ಕೊಡುತ್ತಾನೆ. ಕೆಟ್ಟ ಮನುಷ್ಯ ಅನುಭವ ನೀಡುತ್ತಾನೆ. ಇನ್ನೂ ಕೆಟ್ಟವನು ಪಾಠ ಕಲಿಸಿರುತ್ತಾನೆ.
- ಏನೂ ಮಾಡದೇ ಇರುವವರು ತಪ್ಪನ್ನೇ ಮಾಡುವುದಿಲ್ಲ ಅಲ್ಲವೆ?
- ವಿ ಕೆನಾಟ್ ಸ್ಟಾಪ್ ಟ್ರಬಲ್ಸ್ ಫ್ರಂ ಕಮಿಂಗ್ ಟುವರ್ಡ್ಸ್ ಅಸ್ ಬಟ್ ವಿಶುಡ್ ನಾಟ್ ಆಫರ್ ದೆಂ ಛೇರ್ಸ್ ಟು ಸಿಟ್.
- ಪ್ರಪಂಚದಲ್ಲಿ ಎಲ್ಲರೂ ಶ್ರೀಮಂತರಾಗಿಯೇ ಇದ್ದಿದ್ದರೆ ನಿನ್ನ ಹೃದಯ ವೈಶಾಲ್ಯತೆ ತೋರಿಸಲು ನಿನಗೆ ಅವಕಾಶ ಸಿಗುತ್ತಿತ್ತೆ?
- ಬೆಳೆಯಲು ಆಸಕ್ತಿ ತೋರದವರಿಗೆ ನೀರು ಉಣಿಸುವುದು ವ್ಯರ್ಥ.
- ಬಿಹೈಂಡ್ ಎವೆರಿ ಸ್ಟ್ರಾಂಗ್ ಪರ್ಸನ್ ಈಸ್ ಎ ಸ್ಟೋರಿ ದಟ್ ಗೇವ್ ಹಿಮ್ ನೊ ಚಾಯ್ಸ್.
- ನಾವು ಯಾರದೋ ಬದುಕಿನಲ್ಲಿ ಕೆಟ್ಟವರು ಎಂದೆನಿಸಿರುತ್ತೇವೆ. ನಮ್ಮ ಬದುಕಿನಲ್ಲಿ ಇನ್ನ್ಯಾರೋ ಕೆಟ್ಟವರೆಂದೆನಿಸಿರುತ್ತಾರೆ.
- ನೀವು ಶ್ರೀಮಂತರಾದಷ್ಟೂ ಖುಷಿ ಪಡುವುದು ದುಬಾರಿಯಾಗತೊಡಗುತ್ತದೆ.
- ಸ್ಕೂಲ್ ಅನ್ನು ಇಸ್ಕೂಲ್ ಎಂದು ಕರೆದಾಗ ನಮಗೆ ನಗು ಬರುತ್ತದೆ. ಆದರೆ ಈಗ ಮಂದಿ ಇ–ಸ್ಕೂಲ್‌ಗೇ ಹೋಗುತ್ತಿದ್ದಾರೆ. ■

# ಕಣವನೆ ಕಂಡ ದೈವಂ !

● ಗಣೇಶ ಹೆಗಡೆ

ಇತ್ತೀಚಿನ ದಿನಗಳಲ್ಲಿ ಒಂದು ಗಿರುಪಲು ನನ್ನನ್ನು ತೀವ್ರ ಕಾಡುತ್ತಿದೆ. 'ನಾನು' ಎನ್ನುವ ಬದಲು 'ನಾವು' ಎಂದು ಸ್ವಯಂ ಸಂಬೋಧಿಸಿಕೊಳ್ಳಬಾರದೇಕೆ? ಎಂಬ ಹಂಬಲದ ಜತೆಗೇ, ಪ್ರಸಿದ್ಧ ಸಾಹಿತಿ ಹಾಸ್ಯ ಬ್ರಹ್ಮ ದಿವಂಗತ ಬೀಚಿಯವರು ಯಾಕೊ ನೆನಪಾಗುತ್ತಿದ್ದಾರೆ. ಅವರ ಅನುಸಾರ ಹೀಗೆಂದು ಸಂಬೋಧಿಸಿಕೊಳ್ಳುವ ಪರಮಾಧಿಕಾರವಿರುವುದು ಕೇವಲ ಇಬ್ಬರು ವ್ಯಕ್ತಿಗಳಿಗೆ. ಒಂದು ಗರ್ಭಿಣಿ ಸ್ತ್ರೀಯರು – ಮತ್ತೊಬ್ಬರು ಹೊಟ್ಟೆಯಲ್ಲಿ ಹುಳುವಿರುವವರು. ನಾವು ಇದ್ಯಾವುದರ ಕ್ಯಾಟೆಗರಿಗೆ ಸೇರಿಲ್ಲವಾದರೂ ನಿಮ್ಮ ಸಂಶಯವನ್ನು ನಾವು ಗುರ್ತಿಸಬಲ್ಲವರಾಗಿದ್ದೇವೆ. ದಿನಕ್ಕೆ ಹತ್ತು ತಾಸು ನ್ಯೂಸ್ ಛಾನೆಲ್ಲುಗಳನ್ನು ನೋಡುತ್ತಿರುವ ಪರಿಣಾಮದಿಂದ ಮತಿಭ್ರಮಣೆಯಾಗಿ ಹಾಳು ಕೊರೊನಾ ವೈರಸ್ಸು ಎಂದು ಅಟ್ಯಾಕ್ ಮಾಡೊತ್ತೊ? ಎಂಬ ಭ್ರಮ ನಿರಸನದಿಂದ ಹೀಗೆಲ್ಲಾ ಚಿಂತನೆ ನಡೆದಿದೆ ಎಂದು ಇರಬಹುದು ದಿಟ.

ನಮಗೀಗ ಸೆವಂಟಿ ಪ್ಲಸ್ ಆಗಿದ್ದು, ಸರ್ಕಾರದ ಸೇವೆಯಿಂದ ನಿವೃತ್ತಿಯಾದ ದಿನದಿಂದಲೇ 'ವರ್ಕ್ ಫಾರ್ ಹೋಮ್' ಕ್ಯಾಟಗೆರಿಗೆ ತಳ್ಳಲ್ಪಟ್ಟಿರುವ ವಿಚಾರ ಗುಟ್ಟಾಗೇನು ಉಳಿದಿಲ್ಲ. ಈ ಅವಧಿಯಲ್ಲಿ ನಮ್ಮ ಬೆನ್ನು ಗ್ರಾಜುಯಲ್ಲಾಗಿ ಗೂನಾಗ ತೊಡಗಿ ಕೈ ಕಾಲು ನರಗಳೆಲ್ಲಾ ಸೆಟೆದು, ಆಗಾಗ್ಗೆ ಕೆಮ್ಮು, ನೆಗಡಿ, ಜ್ವರ ಇತ್ಯಾದಿ ಖಾಯಿಲೆಗಳು ವಕ್ಕರಿಸಿಕೊಂಡಾಗ ನಮ್ಮೂರಿನ ಪ್ರಸಿದ್ಧ ವೈದ್ಯ ಡಾ. ತೋಲಾಂಡ ರಾಯರ ಬಳಿ ತೀವ್ರ ತಪಾಸಣೆಗೊಳಗಾದಾಗ, ಇಡೀ ವೈದ್ಯಲೋಕವೇ ಬೆಚ್ಚಿ ಬೀಳುವಂಥಹ ಸಂಗತಿ ಹೊರಬಿದ್ದಿದೆ. ಈ ವಿಚಿತ್ರ ಖಾಯಿಲೆಗೆ 'ಕಿಚನ್‌ಗೂನ್ಯ!' ಎಂದು ಹೆಸರಿಸಲಾಗಿದೆ. ಕೊರೊನಾ ವೈರಸ್ಸಿನ ದುಷ್ಪರಿಣಾಮಗಳಿಗೆ ಹೆದರಿ 'ವರ್ಕ್ ಫ್ರಂ ಹೋಮ್' ಪದ್ಧತಿ ಜಾರಿಯಾದ ಬಳಿಕ ಬಹುತೇಕ ಪುರುಷರಲ್ಲಿ ಈ ರೋಗದ ಲಕ್ಷಣಗಳು ಕಾಣಿಸಿಕೊಂಡಿವೆ. ಸಕಾಲದಲ್ಲಿ ಚಿಕಿತ್ಸೆ ಪಡೆಯದೆ ನಿರ್ಲಕ್ಷ್ಯ ಮಾಡಿದ ಪುರುಷರಿಗೆ ಮುಂದೆ ಹಂತ ಹಂತವಾಗಿ ಮಂಕು ಕವಿದು, ಮತಿಭ್ರಮಣೆಯಾಗಿ ಅಡುಗೆ ಮನೆಯಿಂದ ಹೊರ ಬರಲೇ ಭಯಗೊಳ್ಳುವ ಭೀಕರ ಸ್ಥಿತಿ ತಲುಪುವ ಸಾಧ್ಯತೆ ಇದೆ ಎಂದು ವೈದ್ಯಲೋಕ ಎಚ್ಚರಿಸಿದೆ. ಎಲ್ಲಾ ವಿವಾಹಿತ ಪತ್ನಿಯರೂ ಈ ಹೊಸ ಖಾಯಿಲೆಯ ನಿವಾರಣೆಗೆ ಸಹಕಾರ ಕೊಟ್ಟು, ಕೈ ಜೋಡಿಸಬೇಕೆಂದು ವೈದ್ಯ ಲೋಕ ಕೋರಿದೆ.

ಇಂಥಹ ಸಂಕಷ್ಟ ಕಾಲದಲ್ಲಿ ನಮ್ಮ ಜೀವವನ್ನು ನಾವು ಬಿಗಿಯಾಗಿ ಹಿಡಿದು ಕೊಂಡಿರಲು, ನಮ್ಮ ವಿಚಾರದಲ್ಲಿ ಮೊನ್ನೆ ಮೈ ಝುಮ್ಮೆನಿಸುವ ಘಟನೆ ಜರುಗಿ ಹೋಗಿದೆ. ಪ್ರತಿ ಮುಂಝಾನೆ ಎದ್ದ ಕೂಡಲೇ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವ ವಾಡಿಕೆ. ಆದರೆ ಆ ಕರಾಳ ದಿನ ಹಾಗೆ ನೋಡಿಕೊಂಡಾಗ ಹಣೆಯ ಮಧ್ಯೆ, ಎರಡು ಹುಬ್ಬುಗಳ ನಡುವೆ ಏಕಾಏಕೀ ಉದ್ಭವವಾದ ಕರೀ ಮಚ್ಚೆಯನ್ನು ಕಂಡು ಭಯಭೀತರಾಗಿ ಕಿಟಾರೆಂದು ಕಿರುಚಿ ತಲೆ ತಿರುಗಿ ಬಿದ್ದೆವೆಂತೆ ಅಷ್ಟೇ ನೆನಪು. 'ರ್ರೀ ದಯವಿಟ್ಟು ಎಚ್ಚರ ಮಾಡಿಕೊಳ್ಳಿ. ಇದು ಬ್ಲ್ಯಾಕ್ ಫಂಗಸ್ಸು ಅಲ್ಲ. ಪಕ್ಕದ ಮನೆಯವರು ಅವರ ಊರಿನಿಂದ ತಂದಿದ್ದ ಕೋವಿಡ್ ಹೋಮದ ರಕ್ಷೆ! ಇದರಲ್ಲೆಲ್ಲಾ ನಂಬಿಕೆಯಿರದ

ನಿಮಗೆ, ರಾತ್ರಿ ಮಲಗಿದ್ದ ವೇಳೆ ಹಣೆಗಿಟ್ಟಿದ್ದು, ನಾನೇ. ಚೆನ್ನಾಗಿ ಸೋಪು ಹಾಕಿ ಮುಖ ತೊಳ್ಕೊಳ್ಳಿ ಹೋಗುತ್ತೆ" ಎಂಬ ಮಡದಿಯ ಸಾಂತ್ವನದ ಮಾತುಗಳಿಗೆ ರೆಸ್ಪಾಂಡು ಮಾಡಿ ಮೆಲ್ಲಗೆ ನಾವು ಕಣ್ತೆರೆದು ಎದ್ದು ಕುಳಿತೆವೆಂತೆ.

ಇಂಥಹ ಭಯಭೀತ ವಾತಾವರಣದಲ್ಲಿ ಕಾಲವನ್ನು ನೂಕುತ್ತಿರುವಾಗ ಮಂಡೆಯಲ್ಲಿ ಸಂಶಯದ ಹುಳು ಕೊರೆದೂ ಕೊರೆದು ಮುಂದೆ ಹೀಗೂ ಆಗಬಹುದೆ? ಎಂಬ ಚಿಂತನೆ ನಮ್ಮ ನಿದ್ದೆಯನ್ನು ಕೆಡಿಸಿಬಿಟ್ಟಿದೆ. ಒಂದು ವೈರಸ್ಸಿಗೆ ಹೆದರಿ ಎಲ್ಲೆಲ್ಲೂ ಅನಿರ್ದಿಷ್ಟ ಕಾಲ ಲಾಕ್‌ಡೌನ್ ಘೋಷಿಸಲಾಗಿದೆ. 'ಸ್ಟೇ ಹೋಮ್-ಸ್ಟೇ ಸೇಫ್' ಎಂಬ ಸ್ಲೋಗನ್ನು ಎಲ್ಲೆಲ್ಲೂ ಕೇಳಲ್ಪಟ್ಟಿವೆ' ಈಗ ದೈನಂದಿನ ಜೀವನ ಸ್ಥಗಿತಗೊಂಡಿದೆ. ದೇವಾಲಯ, ಚರ್ಚ್, ಮಸೀದಿಯ ಬಾಗಿಲುಗಳೆಲ್ಲಾ ಮುಚ್ಚಲ್ಪಟ್ಟಿವೆ. ಇಲ್ಲೆಲ್ಲಾ ನೆಲೆಸಿರುವ ದೈವಗಳ ಪಾಡೇನು? ಎಂಬ ಚಿಂತೆ ನಮ್ಮನ್ನು ತೀವ್ರ ಕಾಡುತ್ತಿದೆ. ಆರ್ಥಿಕ ಕುಸಿತದಿಂದ ನೆರೆಯ ಒಂದು ರಾಜ್ಯ ಸರ್ಕಾರ ತಿರುಪತಿ ತಿಮ್ಮಪ್ಪನ ಸಮಸ್ತ ಆಸ್ತಿಗಳನ್ನೆಲ್ಲಾ ಮಾರಾಟ ಮಾಡಿ ಬಿಡುವ ಚಿಂತನೆ ನಡೆಸಿದೆ. ಸಂಜೀವಿನಿ ಪರ್ವತವನ್ನೇ ಹೊತ್ತು ತಂದ ನಮ್ಮೂರಿನ ಆಂಜನೇಯ ಈಗ ಲಸಿಕೆಗಳನ್ನು ಹೊತ್ತು ತಂದು ಭಕ್ತಾದಿಗಳನ್ನು ಕಾಪಾಡಲಾರನೆ? ಎಂಬ ಆಶಯ ನಮ್ಮದಾಗಿದೆ. ದೇವರುಗಳು, ಚಿರಂಜೀವಿ. ಅವರು ಹೆದರುವ ಅಗತ್ಯವಿಲ್ಲ. ಆದರೆ ಹುಲು ಮಾನವರಾದ ನಾವು ಇದಕ್ಕೆ ತದ್ವಿರುದ್ಧ ಜೀವಿಸಲೆಂದೇ ಚೀರುತ್ತಿರುವವರು ನಾವು. ನಮ್ಮ ಬಗ್ಗೆ ಕನಿಕರ ಹರಿಸುವವರಾದರೂ ಯಾರು?

ಇನ್ನು ಮೆಗಾಸಿಟಿ ಬಿಟ್ಟು, ನಮ್ಮೂರು ಗ್ರಾಮಗಳತ್ತ ಚಿತ್ತ ಹರಿಸಿದಾಗ ನಮಗೆ ದಿಗ್ಭ್ರಮೆಯಾಗುವಂಥಹ ಸುದ್ದಿಯೊಂದು ಕಿವಿಗೆ ಬಿದ್ದಿದೆ. ಇಷ್ಟು ದಿನ ಊರ ಹೆಬ್ಬಾಗಿಲು ಕಾಯುತ್ತಿದ್ದ ಗ್ರಾಮ ದೇವತೆಗಳಾದ ಚೌಡಮ್ಮ, ಮಾರಮ್ಮ, ದುರ್ಗಮ್ಮ, ಕಬ್ಬಾಳಮ್ಮ ಇತ್ಯಾದಿ ಮಿನಿ ದೇವತೆಗಳು ಹಾಲಿ ತಮ್ಮ ಗ್ರಾಮಗಳನ್ನೇ ತೊರೆದು ಹೋಗಿರುವ ವಿಚಾರ. ಆರಂಭದಲ್ಲಿ ಧೃತಿ ಗೆಡಿಸುವಂತಿದ್ದರೂ ಹೆದರದೆ ನಾವು ಸ್ಥಿತ ಪ್ರಜ್ಞರಾಗಿ ಯೋಚಿಸುವ ಪ್ರಯತ್ನ ಮಾಡಿದೆವು. ಹಾಳು ವೈರಸ್ಸಿಗೆ ಹೆದರಿ ಖಂಡಿತಾ ಆ ದೇವತೆಗಳು ಹೀಗೆ ಮಾಡಿರಲಿಕ್ಕಿಲ್ಲ. ಬದಲಿಗೆ, ವಿಶ್ವಶಾಂತಿ ಹಾಗೂ ಮನುಕುಲದ ಒಳಿತಿಗೆ, ದುಷ್ಟ ಸಂಹಾರಾರ್ಥವಾಗಿ ಏನಾದರೂ ಚೀನಾ ದೇಶದತ್ತ ಒಟ್ಟಾಗಿ ದಾಳಿ ಮಾಡಲು ಹೋಗಿರಬಹುದೆ? ಎಂದೆನ್ನಿಸಿತು. ನಮ್ಮ ಚಿಂತನಾ ಲಹರಿ ನಿಮ್ಮೆಲ್ಲರ ಚಿಂತನಾ ಲಹರಿಯ ದಿಕ್ಕಿಗೇ ವಾಲಿದೆಯೆಂದರೆ ನಮ್ಮಷ್ಟು ನಿರಾಳ ಇನ್ನೊಬ್ಬರಿಲ್ಲ.

---

## "ಕ" ಕ್ಷೇಮ...!

ವಿ.ವಿಜಯೇಂದ್ರ ರಾವ್

ನಮ್ಮ ದೇಹದ ಬಹುತೇಕ ಅಂಗಗಳು "ಕ" ಯಿಂದಲೇ ಶುರುವಾಗುತ್ತದೆ....! ಉದಾ: ಕಣ್ಣು, ಕಿವಿ, ಕತ್ತು, ಕುತ್ತಿಗೆ, ಕೈ, ಕಾಲು, ಕಟಿ, ಕರುಳು.. ಇತ್ಯಾದಿ. ಇವೆಲ್ಲವೂ ಕೊರೊನಾ ಕಾಲದಲ್ಲೂ 'ಕ' ಕಾರ ಕವಚದಿಂದ ಸುರಕ್ಷಿತವಾಗಿವೆ
ಅದೇ.....
ಮೂಗು, ಬಾಯಿಯನ್ನು ಮಾಸ್ಕ್ ನಿಂದ ರಕ್ಷಿಸಿಕೊಳ್ಳಬೇಕು, ಹಾಗೆ ತಲೆಯನ್ನು ಹೆಲ್ಮೆಟ್‌ನಿಂದ ರಕ್ಷಿಸಿಕೊಳ್ಳುತ್ತೀವಿ ತಾನೇ....!